ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರವಾಹ
ನವದೆಹಲಿಯ ರಾಜ್‌ಘಾಟ್ ಬಳಿ ಶನಿವಾರ ಪ್ರವಾಹದ ನೀರಲ್ಲೇ ಸಾಗಿದ ಮಹಿಳೆ



ತೆರಿಗೆ ವಸೂಲಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬಹುದು ಎಂದು ವರದಿ ನೀಡಿದ ಜಂಟಿ ಸಾರಿಗೆ ಆಯುಕ್ತ

ವಾಹನ ವಿಸ್ತೀರ್ಣ ಕಡಿಮೆ: ತೆರಿಗೆ ವಂಚನೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಅಧಿಕಾರಿಗಳು, ಸಿಬ್ಬಂದಿ ಮತ್ತು ವಾಹನ ಮಾಲೀಕರು ಸೇರಿ ವಾಹನಗಳ ವಿಸ್ತೀರ್ಣವನ್ನು ಕಡಿಮೆ ತೋರಿಸಿ ಸರ್ಕಾರಕ್ಕೆ ತೆರಿಗೆ ವಂಚನೆ ಮಾಡಿದ್ದಾರೆ. 24 ವಾಹನಗಳ ತಪಾಸಣೆ ನಡೆಸಿದಾಗ ₹21.12 ಲಕ್ಷ ವಂಚನೆಯಾಗಿರುವುದು ಗೊತ್ತಾಗಿದ್ದು, 3,240 ವಾಹನಗಳ ತಪಾಸಣೆ ನಡೆಯಬೇಕಿದೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಖಾಸಗಿ ಸೇವಾ ವಾಹನಗಳು ಹಾಗೂ ಮ್ಯಾಕ್ಸಿಕ್ಯಾಬ್ ವಾಹನಗಳ ವಿಸ್ತೀರ್ಣವನ್ನು ಸರಿಯಾಗಿ ದಾಖಲಿಸುತ್ತಿಲ್ಲ ಎಂಬ ದೂರುಗಳು ಬಂದಿದ್ದರಿಂದ ಸಾರಿಗೆ ಆಯುಕ್ತರು ತಪಾಸಣಾ ತಂಡ ರಚಿಸಿದ್ದರು. ಜಂಟಿ ಆಯುಕ್ತರ ನೇತೃತ್ವದಲ್ಲಿ 7 ಅಧಿಕಾರಿಗಳು ತಂಡದಲ್ಲಿದ್ದರು. ಅದರಲ್ಲಿ ತಪಾಸಣಾ ಕಾರ್ಯಾಚರಣೆಯಲ್ಲಿ ಐದು ಅಧಿಕಾರಿಗಳು ಭಾಗವಹಿಸಿದ್ದರು. ಕಡತ ಪರಿಶೀಲನೆ, ವಾಹನ ತಪಾಸಣೆಗಳ ಬಳಿಕ ಈ ತಂಡವು ವರದಿಯನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಿಗೆ ನೀಡಿದೆ. ಈ ವರದಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

1,345 ಮ್ಯಾಕ್ಸಿಕ್ಯಾಬ್ ಹಾಗೂ 1,826 ಖಾಸಗಿ ಸೇವಾ ವಾಹನಗಳು ಸೇರಿ 3,271 ವಾಹನಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲು ಕಡತಗಳನ್ನು ನೀಡುವಂತೆ ತಪಾಸಣಾ ತಂಡ ಕೇಳಿಕೊಂಡಿತ್ತು. ಪ್ರಾದೇಶಿಕ ಅಧಿಕಾರಿಗಳು 628 ಮ್ಯಾಕ್ಸಿಕ್ಯಾಬ್ ಮತ್ತು 983 ಖಾಸಗಿ ಸೇವಾ ವಾಹನಗಳ ಕಡತಗಳನ್ನಷ್ಟೇ ಒದಗಿಸಿದ್ದರು. 1,660 ವಾಹನಗಳ ಕಡತಗಳನ್ನು ನೀಡಿಲ್ಲ.

628 ಮ್ಯಾಕ್ಸಿಕ್ಯಾಬ್‌ಗಳ ಪೈಕಿ 580 ವಾಹನಗಳ ವಿಸ್ತೀರ್ಣವನ್ನು ಮಾತ್ರ ನಮೂನೆ 20ರಲ್ಲಿ ನಮೂದಿಸಲಾಗಿದೆ. 48 ವಾಹನಗಳ ವಿಸ್ತೀರ್ಣವೇ ದಾಖಲಾಗಿಲ್ಲ. ಅದೇ ರೀತಿ 981 ಇತರ ವಾಹನಗಳ ಪೈಕಿ 901 ವಾಹನಗಳ ವಿಸ್ತೀರ್ಣ ನಮೂದಿಸಲಾಗಿದೆ. 82 ವಾಹನಗಳ ವಿಸ್ತೀರ್ಣ ಇಲ್ಲ. ನಮೂದಾಗಿರುವ ವಿಸ್ತೀರ್ಣ ಕೂಡ ಒಂದೇ ಮಾದರಿಯ ವಾಹನಗಳಿಗೆ ಭಿನ್ನ ಭಿನ್ನವಾಗಿರುವುದು ಕಂಡು ಬಂದಿದೆ.

ಈ ಕಾರಣದಿಂದ ಮೊದಲ ಹಂತದಲ್ಲಿ ಕೆಲವು ವಾಹನಗಳನ್ನು ತಪಾಸಣೆ ನಡೆಸಲು ನಿರ್ಧರಿಸಲಾಗಿತ್ತು. 117 ವಾಹನಗಳನ್ನು ಹಾಜರು ಪಡಿಸಲು ಈ ತಂಡವು ಮೋಟಾರು ವಾಹನ ನಿರೀಕ್ಷಕರಿಗೆ ಸೂಚಿಸಿತ್ತು. ನಿರೀಕ್ಷಕರು ಕೇವಲ 31 ವಾಹನಗಳನ್ನು ಹಾಜರುಪಡಿಸಿದ್ದರು. ಅದರಲ್ಲಿ 7 ವಾಹನಗಳ ಮೂಲ ಕಡತಗಳನ್ನು ಹಾಜರುಪಡಿಸಿರಲಿಲ್ಲ. ಉಳಿದ 24 ವಾಹನಗಳನ್ನು ತಪಾಸಣೆ ನಡೆಸಿ ಕಡತ ಪರಿಶೀಲಿಸಿದಾಗ 1 ಚದರ ಅಡಿಯಿಂದ 6 ಚದರ ಅಡಿವರೆಗೆ ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡು ಬಂದಿದೆ. ಇದರಿಂದ ₹21.12 ಲಕ್ಷ ತೆರಿಗೆ ವಂಚನೆಯಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ನಿಖರವಾದ ತೆರಿಗೆಯನ್ನು ಲೆಕ್ಕ ಹಾಕಿ ನಷ್ಟವಾಗಿರುವುದನ್ನು ವಸೂಲಿ ಮಾಡಬಹುದು. ತಪ್ಪು ಮಾಡಿರುವ ಅಧಿಕಾರಿ ಮತ್ತು ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

ಕೋಟ್ಯಂತರ ರೂಪಾಯಿ ವಂಚನೆ

24 ವಾಹನಗಳ ತಪಾಸಣೆ ನಡೆಸಲಾಗಿದ್ದು, 3,240 ವಾಹನಗಳ ಕಡತ ಪರಿಶೀಲನೆ ಮತ್ತು ಭೌತಿಕ ತಪಾಸಣೆ ನಡೆಸಲು ಸಾಧ್ಯವಾಗಿಲ್ಲ ಎಂದು ತಂಡ ತಿಳಿಸಿದೆ. ಈ ಎಲ್ಲ ವಾಹನಗಳ ನಿಖರ ತಪಾಸಣೆ ನಡೆಸಿದರೆ ನೂರಾರು ಕೋಟಿ ರೂಪಾಯಿ ತೆರಿಗೆ ವಂಚಿಸಿರುವುದು ಬೆಳಕಿಗೆ ಬರಲಿದೆ.

ಎಲ್ಲ ವಾಹನಗಳ ತಪಾಸಣೆ ಮತ್ತು ಕಡತ ಪರಿಶೀಲನೆಗೆ ಇನ್ನೂ ಹೆಚ್ಚಿನ ಅಧಿಕಾರಿ, ಸಿಬ್ಬಂದಿಯ ಅವಶ್ಯಕತೆ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕಾನೂನು ಕ್ರಮ: ರಾಮಲಿಂಗಾ ರೆಡ್ಡಿ



ವಾಹನಗಳ ವಿಸ್ತೀರ್ಣ ಕಡಿಮೆ ತೋರಿಸಿ ತೆರಿಗೆ ವಂಚಿಸಿದ್ದರೆ, ಅಂಥ ವಾಹನ ಮಾಲೀಕರ ವಿರುದ್ಧ ಮತ್ತು ಕೈ ಜೋಡಿಸಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ವರದಿ ನನ್ನ ಕೈ ಸೇರಿದ ಕೂಡಲೇ ಪರಿಶೀಲಿಸಲಾಗುವುದು. ವಂಚಿಸಿರುವ ತೆರಿಗೆಯನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

ಸುದ್ದಿ 2 ನಿಮಿಷ

ಶಿಕ್ಷೆಗೆ ತಡೆ ಕೋರಿ ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್‌ಗೆ ಮೊರೆ

ನವದೆಹಲಿ(ಪಿಟಿಐ): ಮೋದಿ ಉಪನಾಮದ ಹೇಳಿಕೆಗೆ ಸಂಬಂಧಿಸಿದ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ವಿಧಿಸಲಾಗಿರುವ ಶಿಕ್ಷೆಗೆ ತಡೆ ನೀಡಲು ನಿರಾಕರಿಸಿದ ಗುಜರಾತ್ ಹೈಕೋರ್ಟ್‌ನ ತೀರ್ಪು ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ರಾಹುಲ್ ಗಾಂಧಿ ಅವರ ಪರ ವಕೀಲ ಪ್ರಸನ್ನ ಎಸ್. ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು.

2019ರ ಲೋಕಸಭೆ ಚುನಾವಣೆ ವೇಳೆ ಕೋಲಾರದಲ್ಲಿ ಭಾಷಣ ಮಾಡಿದ್ದ ರಾಹುಲ್ ಗಾಂಧಿ ‘ಕಳ್ಳರೆಲ್ಲರಿಗೂ ಮೋದಿ ಉಪನಾಮ ಏಕಿರುತ್ತದೆ’ ಎಂದು ಪ್ರಶ್ನಿಸಿದ್ದರು. ಈ ಹೇಳಿಕೆಗೆ ಸಂಬಂಧಿಸಿದಂತೆ ಗುಜರಾತ್‌ನ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಸೂರತ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಮಾರ್ಚ್ 23ರಂದು ತೀರ್ಪು ಪ್ರಕಟಿಸಿದ್ದ ಸೂರತ್ ನ್ಯಾಯಾಲಯ ರಾಹುಲ್ ಗಾಂಧಿ ಅವರಿಗೆ 2 ವರ್ಷಗಳ ಸಜೆ ವಿಧಿಸಿದೆ. ಇದರ ಬೆನ್ನಿಗೇ ಅವರನ್ನು ಲೋಕಸಭೆಯ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ.

ಸೂರತ್ ನ್ಯಾಯಾಲಯದ ತೀರ್ಪಿಗೆ ತಡೆ ಕೋರಿ ರಾಹುಲ್ ಗಾಂಧಿ ಗುಜರಾತ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಜುಲೈ 7ರಂದು ತೀರ್ಪು ಪ್ರಕಟಿಸಿದ್ದು, ಶಿಕ್ಷೆಗೆ ತಡೆ ನೀಡಲು ನಿರಾಕರಿಸಿತ್ತು. ‘ರಾಜಕಾರಣದಲ್ಲಿ ಶುದ್ಧತೆ’ ಎಂಬುದು ಈ ಹೊತ್ತಿನ ಅಗತ್ಯ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು.



ವಿ.ವಿಗಳಲ್ಲಿ ಶೇ 75 ಹುದ್ದೆ ಖಾಲಿ!

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಶೇ 75ಕ್ಕೂ ಹೆಚ್ಚು ಬೋಧಕ ಹುದ್ದೆಗಳು ಖಾಲಿ ಇದ್ದು, ಅತಿಥಿ ಪ್ರಾಧ್ಯಾಪಕರನ್ನು ಅವಲಂಬಿಸಿವೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅತಿ ಹೆಚ್ಚು ಹುದ್ದೆಗಳು ಖಾಲಿ ಇವೆ. ಮಂಜೂರಾದ 460 ಬೋಧಕ ಹುದ್ದೆಗಳಲ್ಲಿ 407 ಹುದ್ದೆಗಳು ಭರ್ತಿಯಾಗಿಲ್ಲ. ಇದರ ನಂತರ, ಕರ್ನಾಟಕ ವಿಶ್ವವಿದ್ಯಾಲಯದ 600 ಹುದ್ದೆಗಳಲ್ಲಿ 386, ಬೆಂಗಳೂರು ವಿಶ್ವವಿದ್ಯಾನಿಲಯದ 365 ಹುದ್ದೆಗಳಲ್ಲಿ 213 ಖಾಲಿ ಇವೆ.

ಈಚೆಗೆ ಸ್ಥಾಪಿತವಾದ ಕೆಲ ವಿಶ್ವವಿದ್ಯಾಲಯಗಳಲ್ಲಿ ಒಂದು ಹುದ್ದೆಯೂ ಭರ್ತಿಯಾಗಿಲ್ಲ. ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ 15 ಬೋಧಕ ಹುದ್ದೆಗಳೂ ಖಾಲಿ ಉಳಿದಿವೆ. ಡಾ.ಬಿ.ಆರ್.ಅಂಬೇಡ್ಕರ್ ನ್ಯಾಷನಲ್ ಸ್ಕೂಲ್ ಆಫ್ ಎಕನಾಮಿಕ್ಸ್ 17, ರಾಯಚೂರು ವಿಶ್ವವಿದ್ಯಾಲಯದಲ್ಲಿ 31 ಹುದ್ದೆಗಳು ಭರ್ತಿಯಾಗಿಲ್ಲ.

ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ವಿಧಾನ ಪರಿಷತ್‌ನಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರು ನೀಡಿದ ಉತ್ತರದಲ್ಲಿ ಈ ಮಾಹಿತಿ ಇದ್ದು, ಖಾಲಿ ಹುದ್ದೆಗಳಿಂದಾಗಿ ಶಿಕ್ಷಣದ ಗುಣಮಟ್ಟಕ್ಕೆ ತೊಂದರೆಯಾಗಿಲ್ಲ. ಅನುಭವಿ ಅತಿಥಿ ಪ್ರಾಧ್ಯಾಪಕರನ್ನು ಬಳಸಿಕೊಳ್ಳಲಾಗುತ್ತಿದೆ ಎಂದಿದ್ದಾರೆ.



ಪುಟಾಣಿ ಪೊಲೀಸರು...

ಕಲಬುರಗಿಯ ಶರಣಬಸವೇಶ್ವರ ವಸತಿ ಪಬ್ಲಿಕ್ ಶಾಲೆಯಲ್ಲಿ ಶನಿವಾರ ರಸ್ತೆ ಸಂಚಾರ ನಿಯಮಗಳ ಬಗ್ಗೆ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಮಕ್ಕಳು ಪೊಲೀಸ್ ಉಡುಗೆಯಲ್ಲಿ ಮಿಂಚಿದರು -ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಅಲೆಮಾರಿ ‘ಸಮನ್ವಯ ಸಮಿತಿ’ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ 51, ಪರಿಶಿಷ್ಟ ಪಂಗಡದ 23 ಮತ್ತು ಹಿಂದುಳಿದ ವರ್ಗಗಳ 46 ಹೀಗೆ ಒಟ್ಟು 120 ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯಗಳನ್ನು ಪ್ರತಿನಿಧಿಸುವ ಏಳು ಸಂಘಟನೆಗಳು ಒಗ್ಗೂಡಿ ‘ಕರ್ನಾಟಕ ಅಲೆಮಾರಿ, ಅರೆಅಲೆಮಾರಿ ವಿಮುಕ್ತ ಬುಡಕಟ್ಟುಗಳ ಸಮನ್ವಯ ಸಮಿತಿ’ ರಚಿಸಿಕೊಂಡಿವೆ.

ಗಾಂಧಿ ಭವನದಲ್ಲಿ ಇತ್ತೀಚೆಗೆ ನಡೆದ ಅಲೆಮಾರಿ, ಅರೆಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯಗಳನ್ನು ಪ್ರತಿನಿಧಿಸುವ ಸಂಘಟನೆಗಳ ಪ್ರತಿನಿಧಿಗಳ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.

ಈ ಸಮಿತಿಯ ರಾಜ್ಯ ಘಟಕದ ಪ್ರಧಾನ ಸಂಚಾಲಕರಾಗಿ ಶೇಷಪ್ಪ ಅಂದೊಳ್ಳು, ವಿವಿಧ ಅಲೆಮಾರಿ ಸಂಘಟನೆಗಳ ರಾಜ್ಯ ಘಟಕದ ಅಧ್ಯಕ್ಷರಾದ ವೆಂಕಟರಮಣಯ್ಯ, ಆರ್. ರಂಗಪ್ಪ, ತುಕಾರಾಮ್ ಶಾಸ್ತ್ರಿ, ಶ್ರೀನಿವಾಸ್, ಶಿವಾನಂದ ಪಾಚಂಗಿ ಮತ್ತು ಬಿ.ಆರ್. ಲೋಹಿತಾಕ್ಷ ಅವರನ್ನು ಸಂಚಾಲಕರನ್ನಾಗಿ, ಕಿರಣ್ ಕುಮಾರ್ ಕೊತ್ತಗೆರೆ, ಟಿ.ವಿ. ಗೋಪಾಲಕೃಷ್ಣ ಮತ್ತು ಮಲ್ಲಿಕಾರ್ಜುನ ಮಾನ್ವಡೆ ಅವರನ್ನು ಸಂಘಟನಾ ಸಂಚಾಲಕರಾಗಿ ಆಯ್ಕೆ ಮಾಡಲಾಗಿದೆ.

‘ಎಸ್.ಜಿ. ಸಿದ್ದರಾಮಯ್ಯ ಮತ್ತು ಇಂದೂಧರ ಹೊನ್ನಾಪುರ ಅವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ 50 ಪ್ರತಿನಿಧಿಗಳನ್ನು ಒಳಗೊಂಡ ಈ ಸಮನ್ವಯ ಸಮಿತಿ ರಚಿಸಲಾಗಿದೆ. ಸಮುದಾಯದ ಸಂವಿಧಾನಬದ್ಧ ಹಕ್ಕುಗಳನ್ನು ಪಡೆಯಲು, ಪ್ರಮುಖ ವಿಷಯಗಳು, ಸಮಸ್ಯೆಗಳು ಅಹವಾಲುಗಳ ಕುರಿತು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಜೊತೆ ಪತ್ರ ವ್ಯವಹಾರ ಮಾಡಲು ಈ ಸಮಿತಿಗೆ ಅಧಿಕಾರ ನೀಡಲಾಗಿದೆ’ ಎಂದು ಕಿರಣ್ ಕುಮಾರ್ ಕೊತ್ತಗೆರೆ ತಿಳಿಸಿದ್ದಾರೆ.

‘ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಸಚಿವರನ್ನು ಸಮಿತಿಯ ನಿಯೋಗವು ತುರ್ತಾಗಿ ಭೇಟಿ ಮಾಡಿ ಅಲೆಮಾರಿ ಸಮುದಾಯಗಳ ಗಂಭೀರ ಸಮಸ್ಯೆ, ಶಾಶ್ವತ ಆಯೋಗ, ವಸತಿ ಮತ್ತು ಮೂಲಸೌಕರ್ಯ, ನಿಗಮಗಳಿಗೆ ಅನುದಾನ ಮತ್ತಿತರ ವಿಷಯಗಳ ಕುರಿತು ಚರ್ಚಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ’ ಎಂದೂ ಅವರು ಹೇಳಿದ್ದಾರೆ.

‘ಬಿ’ ರಿಪೋರ್ಟ್ ಅಂಗೀಕಾರ: ಈಶ್ವರಪ್ಪ ನಿರಾಳ

ಬೆಂಗಳೂರು: ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 'ಬಿ' ರಿಪೋರ್ಟ್ ಅಂಗೀಕರಿಸಿದೆ.

‘ಈಶ್ವರಪ್ಪ ಅವರ ವಿರುದ್ಧದ ಆರೋಪಕ್ಕೆ ಸೂಕ್ತ ಸಾಕ್ಷ್ಯಾಧಾರಗಳು ಇಲ್ಲ’ ಎಂದು ತನಿಖಾಧಿಕಾರಿಗಳು ‘ಬಿ’ ರಿಪೋರ್ಟ್ ಸಲ್ಲಿಸಿದ್ದರು. ಇದನ್ನು, ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ ಅಂಗೀಕರಿಸಿದೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದ ಈ ಹಿಂದಿನ ಅವಧಿಯಲ್ಲಿ ಈಶ್ವರಪ್ಪ ಅವರು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾಗಿದ್ದರು. ಆಗ, ಗುತ್ತಿಗೆದಾರ ಸಂತೋಷ್ ಪಾಟೀಲ್ ಉಡುಪಿಯ ಶಾಂಭವಿ ಲಾಡ್ಜ್‌ನಲ್ಲಿ 2022ರ ಏಪ್ರಿಲ್ 12ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

‘ಸಂತೋಷ್ ಪಾಟೀಲ್ ಕಮಿಷನ್ ಕಿರುಕುಳದಿಂದ ಆತ್ಮಹತ್ಯೆಗೆ ಶರಣಾಗಿದ್ದಾರೆ’ ಎಂಬ ಆರೋಪದಡಿ ಈಶ್ವರಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದನ್ನು ಸ್ಮರಿಸಬಹುದು.

‘ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪ ಮುಕ್ತನಾಗಿದ್ದೇನೆ. ಮನೆ ದೇವರು ಚೌಡೇಶ್ವರಿ ನನಗೆ ನ್ಯಾಯ ಕೊಡಿಸಿದ್ದಾಳೆ. ನ್ಯಾಯಾಲಯದ ತೀರ್ಪು ನನ್ನಲ್ಲಿ ಹೊಸ ಸ್ಫೂರ್ತಿ ತುಂಬಿದೆ’ ಎಂದು ಕೆ.ಎಸ್. ಈಶ್ವರಪ್ಪ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಶೇ 44ರಷ್ಟು ಶಾಸಕರ ವಿರುದ್ಧ ಕ್ರಿಮಿನಲ್ ಪ್ರಕರಣ

ನವದೆಹಲಿ(ಪಿಟಿಐ): ದೇಶದಾದ್ಯಂತ ಅಂದಾಜು ಶೇ 44ರಷ್ಟು ಶಾಸಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಹೇಳಿದೆ.

ರಾಷ್ಟ್ರವ್ಯಾಪಿ ವಿಧಾನಸಭೆಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಾಸಕರಾಗಿರುವವರು ಚುನಾವಣೆಗೂ ಮುನ್ನ ಸಲ್ಲಿಸಿರುವ ಪ್ರಮಾಣ ಪತ್ರಗಳನ್ನು ನ್ಯಾಷನಲ್ ಎಲೆಕ್ಷನ್ ವಾಚ್ (ಎನ್‌ಇಡಬ್ಲ್ಯು) ಜೊತೆ ಸೇರಿ ವಿಶ್ಲೇಷಣೆ ನಡೆಸಿ ಈ ಮಾಹಿತಿ ನೀಡಿರುವುದಾಗಿ ಎಡಿಆರ್ ತಿಳಿಸಿದೆ.

28 ವಿಧಾನಸಭೆಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ 4,033 ಶಾಸಕರ ಪೈಕಿ 4,001 ಶಾಸಕರನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ ಎಂದೂ ಹೇಳಿದೆ.

ರಾಜ್ಯ	ವಿಶ್ಲೇಷಣೆಗೆ ಒಳಪಟ್ಟ ಶಾಸಕರು	ಕ್ರಿಮಿನಲ್ ಪ್ರಕರಣವಿರುವ ಶಾಸಕರು	ಶೇ
ಕೇರಳ	135	95	70
ಬಿಹಾರ	161	242	67
ದೆಹಲಿ	44	70	63
ಮಹಾರಾಷ್ಟ್ರ	175	284	62
ತೆಲಂಗಾಣ	72	118	61
ತಮಿಳುನಾಡು	134	224	60

ರಾಜ್ಯ	ವಿಶ್ಲೇಷಣೆಗೆ ಒಳಪಟ್ಟ ಶಾಸಕರು	ಗಂಭೀರ ಸ್ವರೂಪದ ಪ್ರಕರಣ ಇರುವ ಶಾಸಕರು	ಶೇ
ದೆಹಲಿ	70	37	53
ಬಿಹಾರ	242	122	50
ಮಹಾರಾಷ್ಟ್ರ	284	114	40
ಜಾರ್ಖಂಡ್	79	31	39
ತೆಲಂಗಾಣ	118	46	39
ಉತ್ತರಪ್ರದೇಶ	403	155	38

ವಿಶ್ಲೇಷಣೆಗೆ ಒಳಪಡಿಸಿರುವ ಶಾಸಕರಲ್ಲಿ 1,136 (ಶೇ 28ರಷ್ಟು) ಮಂದಿ ತಮ್ಮ ವಿರುದ್ಧ ಕೊಲೆ, ಕೊಲೆ ಯತ್ನ, ಮಹಿಳೆಯರ ವಿರುದ್ಧ ಎಸಗಲಾದ ಅಪರಾಧ ಕೃತ್ಯ, ಅಪಹರಣ ಸೇರಿದಂತೆ ಗಂಭೀರ ಸ್ವರೂಪದ ಕ್ರಿಮಿನಲ್ ಮೊಕದ್ದಮೆಗಳಿರುವುದಾಗಿ ಘೋಷಿಸಿಕೊಂಡಿದ್ದಾರೆ ಎಂದು ಎಡಿಆರ್ ಹೇಳಿದೆ.

ಕ್ರಿಮಿನಲ್ ದಾಖಲೆಗಳ ಹೊರತಾಗಿ, ಶಾಸಕರ ಆಸ್ತಿಯ ಕುರಿತೂ ಎಡಿಆರ್ ವಿಶ್ಲೇಷಣೆ ನಡೆಸಿದೆ.

4,001 ಶಾಸಕರ ಪೈಕಿ 88 ಮಂದಿ ಕೋಟ್ಯಧಿಪತಿಗಳಾಗಿದ್ದಾರೆ. ಇವರ ಆಸ್ತಿ ₹100 ಕೋಟಿಗೂ ಹೆಚ್ಚಿದೆ ಎಂದೂ ವಿವರಿಸಿದೆ.

ಶಾಸಕರ ಸರಾಸರಿ ಆಸ್ತಿ ₹13.63 ಕೋಟಿಯಾದರೆ, ಕ್ರಿಮಿನಲ್ ಪ್ರಕರಣಗಳನ್ನು ಹೊಂದಿರುವ ಶಾಸಕರ ಆಸ್ತಿ ಸರಾಸರಿ ₹16.36 ಕೋಟಿಗೂ ಹೆಚ್ಚಿದೆ ಎಂದು ಹೇಳಿದೆ.

ಅಂಕಿ-ಅಂಶಗಳು

114 ಮಹಿಳೆಯರ ವಿರುದ್ಧದ ಅಪರಾಧ ಕೃತ್ಯದಲ್ಲಿ ಆರೋಪಿಗಳಾಗಿರುವ ಒಟ್ಟು ಶಾಸಕರ ಸಂಖ್ಯೆ

14 ಅತ್ಯಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳಿರುವ ಶಾಸಕರ ಸಂಖ್ಯೆ

ಕರ್ನಾಟಕದ 223 ಶಾಸಕರನ್ನು ವಿಶ್ಲೇಷಣೆಗೆ ಒಳಪಡಿಸಿದ್ದು, ಇವರ ಸರಾಸರಿ ಆಸ್ತಿ ಮೌಲ್ಯ ₹64.39 ಕೋಟಿ ಇದೆ. ಇವರಲ್ಲಿ 32 ಮಂದಿ ಕೋಟ್ಯಧಿಪತಿಗಳಾಗಿದ್ದಾರೆ ಮತ್ತು ರಾಜ್ಯವು ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ ಎಂದಿದೆ.

ಆಜಂ ಖಾನ್‌ಗೆ 2 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಲಖನೌ: ದ್ವೇಷ ಭಾಷಣ ಪ್ರಕರಣವೊಂದರಲ್ಲಿ ಸಮಾಜವಾದಿ ಪಕ್ಷದ (ಎಸ್‌ಪಿ) ಹಿರಿಯ ನಾಯಕ, ಪ್ರಧಾನ ಕಾರ್ಯದರ್ಶಿ ಆಜಂ ಖಾನ್ ಅವರಿಗೆ ಉತ್ತರ ಪ್ರದೇಶದ ರಾಂಪುರ ಪಟ್ಟಣದ ನ್ಯಾಯಾಲಯವೊಂದು ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

2019ರಲ್ಲಿ ರಾಂಪುರ ಲೋಕಸಭೆ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸುವ ವೇಳೆ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ರಾಂಪುರದ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದರು. ಆಜಂ ಅವರು ಭಾಷಣದ ಮೂಲಕ ಕೋಮುದ್ವೇಷ ಬಿತ್ತಲು ಪ್ರಯತ್ನಿಸಿದ್ದಾರೆ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಬೆದರಿಕೆ ಒಡ್ಡಿದ್ದಾರೆ ಎಂದು ಸರ್ಕಾರದ ಪರ ವಕೀಲರು ಆಪಾದನೆ ಮಾಡಿದ್ದರು.

ಬಳಿಕ, ಶೆಹ್ಜಾದ್ ನಗರ ಪೊಲೀಸ್ ಠಾಣೆಯಲ್ಲಿ ಆಜಂ ಖಾನ್ ವಿರುದ್ಧ ದೂರು ದಾಖಲಿಸಲಾಗಿತ್ತು.

ಈ ಸಂಬಂಧ ತೀರ್ಪು ನೀಡಿರುವ ಜನಪ್ರತಿನಿಧಿಗಳ ನ್ಯಾಯಾಲಯ, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 505(1)(ಬಿ) (ಸಾರ್ವಜನಿಕರಲ್ಲಿ ಭಯ ಮೂಡಿಸುವ ಉದ್ದೇಶದಿಂದ ನಡೆಸಲಾಗಿರುವ ಕೃತ್ಯ) ಅಡಿ ಆಜಂ ಖಾನ್ ಅವರು ದೋಷಿ ಎಂದು ಘೋಷಿಸಿದೆ.

ಈ ಮೊದಲೂ, ದ್ವೇಷ ಭಾಷಣದ ಮತ್ತೊಂದು ಪ್ರಕರಣದಲ್ಲಿ ಆಜಂ ಖಾನ್ ದೋಷಿ ಎಂದು ಘೋಷಿಸಿದ್ದ ನ್ಯಾಯಾಲಯವೊಂದು ಅವರಿಗೆ 3 ವರ್ಷಗಳ ಸಜೆ ವಿಧಿಸಿತ್ತು. ಇದಾದ ಬಳಿಕ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು.

ನಿರ್ಮಾಪಕನ ವಿರುದ್ಧ ಮಾನನಷ್ಟ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರ್ವಜನಿಕವಾಗಿ ಮಾಧ್ಯಮಗಳ ಮುಖಾಂತರ ತಮ್ಮ ತೇಜೋವಧೆ ಮಾಡಲಾಗುತ್ತಿದೆ’ ಎಂದು ಆರೋಪಿಸಿರುವ ನಟ ಸುದೀಪ್, ನಿರ್ಮಾಪಕ ಎಂ.ಎನ್. ಕುಮಾರ್ ಮತ್ತು ಎಂ.ಎನ್. ಸುರೇಶ್ ವಿರುದ್ಧ ಎಸಿಎಂಎಂ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಾನನಷ್ಟದ ದೂರು ದಾಖಲಿಸಿದ್ದಾರೆ.

ಪ್ರಾಥಮಿಕ ಹಂತದ ಪ್ರಕ್ರಿಯೆ ಅನುಸಾರ 13ನೇ ಎಸಿಎಂಎಂ ನ್ಯಾಯಾಲಯ ವಿಚಾರಣೆಯನ್ನು ಆಗಸ್ಟ್ 17ಕ್ಕೆ ಮುಂದೂಡಿದೆ.

‘ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ನಿರ್ಮಾಪಕ ಎಂ.ಎನ್. ಕುಮಾರ್ ಹಾಗೂ ಎಂ.ಎನ್ ಸುರೇಶ್ ಅವರು ಸಾಮಾಜಿಕ ಮತ್ತು ಮುಖ್ಯವಾಹಿನಿ ಮಾಧ್ಯಮಗಳ ಮುಖಾಂತರ ನನ್ನ ವಿರುದ್ಧ ಇಲ್ಲಸಲ್ಲದ ಅಪಪ್ರಚಾರ ನಡೆಸುತ್ತಿದ್ದಾರೆ’ ಎಂದು ಆರೋಪಿಸಿ ಸುದೀಪ್ ಈ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

‘ಸುದೀಪ್ ಸಿನಿಮಾಗೆ ಕಾಲ್ ಶೀಟ್ ಕೊಡ್ತೀನಿ ಅಂತಾ ಹಣ ಪಡೆದು ಈಗ ಡೇಟ್ ಕೊಡುತ್ತಿಲ್ಲ’ ಎಂದು ಎಂ. ಎನ್. ಕುಮಾರ್ ಈ ಮೊದಲು ಆರೋಪ ಮಾಡಿದ್ದರು. ಈ ಆರೋಪವನ್ನು ಕೆಲ ನಿರ್ಮಾಪಕರೂ ಬೆಂಬಲಿಸಿ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದರು. ಈ ಬಗ್ಗೆ ಸುದೀಪ್ ಅವರ ಮ್ಯಾನೇಜರ್ ಮಾಧ್ಯಮಗೋಷ್ಠಿ ನಡೆಸಿ ಎಚ್ಚರಿಕೆ ನೀಡಿದ್ದರು.

ಎಲ್ಲರ ಆರೋಪಗಳಿಗೆ ನನ್ನ ಬಳಿ ಉತ್ತರವಿಲ್ಲ: ಸುದೀಪ್



ಸುದೀಪ್

ನ್ಯಾಯಾಲಯದ ಆವರಣದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಸುದೀಪ್, ‘ಚಲನಚಿತ್ರ ವಾಣಿಜ್ಯ ಮಂಡಳಿ ನಮ್ಮ ಮಾತೃ ಸಂಸ್ಥೆ. ಪ್ರತಿ ಸಂಘದ ಮೇಲೆ ಅಪಾರ ಗೌರವವಿದೆ. ಇಬ್ಬರು ಬಹಳ ಬೇಕಾದವರಾಗಿದ್ದ ಕಾರಣ ಇತ್ಯರ್ಥಪಡಿಸಲು ನ್ಯಾಯಾಲಯಕ್ಕೆ ಬಂದಿದ್ದೇನೆ. ನನ್ನ ತಪ್ಪಿದ್ದಲ್ಲಿ ಸರಿಪಡಿಸಿಕೊಳ್ಳುತ್ತೇನೆ ಎಂದು ಅರ್ಜಿಯಲ್ಲೇ ತಿಳಿಸಿದ್ದೇನೆ. ಇಲ್ಲ ಎಂದಾದಲ್ಲಿ ಒಪ್ಪಿಕೊಳ್ಳುವುದಕ್ಕೆ ಸಿದ್ಧವಿಲ್ಲ’ ಎಂದು ಹೇಳಿದರು.

‘ಯಾವುದೇ ಸುಳ್ಳು ಅಥವಾ ಸತ್ಯವಿರಲಿ ಬಹಿರಂಗವಾಗಿ ಹೊರಗಡೆ ಬಂದೇ ಬರುತ್ತದೆ. ನಾನು ಸರಿಯಾದ ಮಾರ್ಗದಲ್ಲಿದ್ದೇನೆ ಎಂದುಕೊಂಡಿದ್ದೇನೆ. ಕಲಾವಿದನಾಗಬೇಕಾದರೆ ಎಲ್ಲರ ತೊಂದರೆಗಳಿಗೆ ಪರಿಹಾರ ಕೊಡುತ್ತೇನೆ ಎಂದು ಚಾರಿಟೆಬಲ್ ಟ್ರಸ್ಟ್ ತೆರೆದಿಲ್ಲ. ಒಬ್ಬರು ತಪ್ಪು ಆರೋಪ ಮಾಡಿದ್ದಕ್ಕೆ ನ್ಯಾಯಾಲಯದ ಮೆಟ್ಟಿಲೇರಿದ್ದೇನೆ. ಎಲ್ಲರ ಆರೋಪಗಳಿಗೆ ನನ್ನ ಬಳಿ ಉತ್ತರವಿಲ್ಲ. ಎಲ್ಲಿ ಇತ್ಯರ್ಥವಾಗಬೇಕೋ ಅಲ್ಲಿ ಇತ್ಯರ್ಥವಾಗಲಿ. ಈ ನಿಟ್ಟಿನಲ್ಲಿ ನ್ಯಾಯಾಲಯಕ್ಕಿಂತ ಉತ್ತಮ ಜಾಗ ಬೇರೊಂದಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ನಾನು ಸಂಪಾದನೆ ಮಾಡಿರುವ ಹೆಸರನ್ನು ಅಷ್ಟು ಬೇಗ ಹಾಳು ಮಾಡಬಹುದು ಎಂದುಕೊಂಡರೆ ನಾನು ಹೆಸರೇ ಸಂಪಾದಿಸಿಲ್ಲ ಎಂದರ್ಥ. ನಾನು ಕೆಲಸ ಮಾಡಲು ಬಂದಿದ್ದೇನೆ. ಯಾರೂ ಇಲ್ಲಿ ಶಾಶ್ವತ ಅಲ್ಲ. ಕೆಲಸ ಮಾಡೋಣ. ಕೆಲಸ ಮಾಡಿಕೊಂಡು ಇಲ್ಲಿಯವರೆಗೂ ಬಂದಿದ್ದೇನೆ ಎಂದರೆ ನನ್ನ ಕೆಲಸ ಮಾತಾಡಲಿ, ನಾನಲ್ಲ’ ಎಂದು ಹೇಳಿದರು.

‘ನಮ್ಮ ಕೈಗೆ ಸುದೀಪ್ ಸಿಗುತ್ತಿಲ್ಲ’



ಎಂ.ಎನ್. ಕುಮಾರ್

‘ನಾನು ಸುದೀಪ್ ಅವರ ವಿರುದ್ಧ ಆರೋಪ ಮಾಡಿಲ್ಲ. ನಾನು ವಾಣಿಜ್ಯ ಮಂಡಳಿಗೆ ನೀಡಿದ್ದು ಮನವಿ ಪತ್ರ. ನಮ್ಮ ಕೈಗೆ ಸುದೀಪ್ ಸಿಗುತ್ತಿಲ್ಲ, ಅವರ ಮ್ಯಾನೇಜರ್ ಕೂಡಾ ಸ್ಪಂದಿಸುತ್ತಿಲ್ಲ ಎಂಬ ನೋವನ್ನು ಮಂಡಳಿಗೆ ತಿಳಿಸಿದ್ದೆವು. ನನಗೆ ನೋಟಿಸ್ ಸಿಕ್ಕಿದ ಬಳಿಕ, ಮುಂದಿನ ಕ್ರಮದ ಬಗ್ಗೆ ನಿರ್ಧರಿಸುತ್ತೇನೆ. ವಾಣಿಜ್ಯ ಮಂಡಳಿಯಲ್ಲೇ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಇಲ್ಲಿ ಆಗದೇ ಇದ್ದರೆ ನ್ಯಾಯಾಲಯದ ಮೆಟ್ಟಿಲೇರುತ್ತೇನೆ’ ಎಂದು ನಿರ್ಮಾಪಕ ಎಂ.ಎನ್.ಕುಮಾರ್ ಅವರು ಹೇಳಿದರು.

ಔತಣಕ್ಕೆ ಮಮತಾ ಗೈರು; ಸಭೆಗೆ ಹಾಜರು

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಇದೇ 17ರಂದು ವಿರೋಧ ಪಕ್ಷಗಳು ಆಯೋಜಿಸಿರುವ ಔತಣಕೂಟಕ್ಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗೈರಾಗಲಿದ್ದು, 18ರಂದು ನಡೆಯಲಿರುವ ಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಟಿಎಂಸಿ ಮೂಲಗಳು ಶನಿವಾರ ತಿಳಿಸಿವೆ. ಜೂನ್ 27ರಂದು ಸೆವೊಕ್ ವಾಯುನೆಲೆಯಲ್ಲಿ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶವಾದಾಗ ಮಮತಾ ಗಾಯಗೊಂಡಿದ್ದು, ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಕರ್ನಾಟಕ ಸಿ.ಎಂ ಸಿದ್ದರಾಮಯ್ಯ ಈ ಔತಣ ಆಯೋಜಿಸಿದ್ದಾರೆ.

ಗಡ್ಕರಿಗೆ ಬೆದರಿಕೆ ಕೈದಿ ವಿಚಾರಣೆ

ಬೆಳಗಾವಿ: ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಕೊಲೆ ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿನ ಕೈದಿಯನ್ನು ನಾಗಪುರದ ಪೊಲೀಸರ ತಂಡ ಗುರುವಾರ ಮತ್ತೊಮ್ಮೆ ವಿಚಾರಣೆಗೆ ಒಳಪಡಿಸಿತು.

ಲಷ್ಕರ್-ಎ-ತಯಬಾ ಮತ್ತು ಪಿಎಫ್‌ಐ ಜೊತೆ ಈತ ನಂಟು ಹೊಂದಿರುವ ಶಂಕೆಯಿಂದ ಈ ವಿಚಾರಣೆ ನಡೆಸಲಾಗಿದೆ.

‘ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿ ಇಲ್ಲಿನ ಹಿಂಡಲಗಾ ಜೈಲು ಸೇರಿದ ಜಯೇಶ್ ಪೂಜಾರಿ ಎಂಬಾತ, ನಿತಿನ್ ಗಡ್ಕರಿ ಅವರನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ. ಜೈಲಿನೊಳಗೆ ಇದ್ದುಕೊಂಡೇ ಮೊಬೈಲ್ ಬಳಸಿ, ಗಡ್ಕರಿ ಅವರ ನಾಗಪುರದ ಕಚೇರಿಗೆ ಕರೆ ಮಾಡಿದ್ದ. ತನ್ನ ಪಕ್ಕದ ಸೆಲ್‌ನಲ್ಲಿ ಇರುವ ಅಫ್ಸರ್ ಪಾಷಾ ಸೂಚನೆ ಮೇರೆಗೆ ಈ ಬೆದರಿಕೆ ಕರೆ ಮಾಡಿದ್ದಾನೆ ಎಂಬ ಸುಳಿವು ಪೊಲೀಸರಿಗೆ ಸಿಕ್ಕಿದೆ. ಮೊಬೈಲ್ ಒದಗಿಸಿದ ಅಫ್ಸರ್ ಪಾಷಾನೇ ಭಯೋತ್ಪಾದನಾ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ ಅನುಮಾನವಿದೆ’ ಎಂದು ಮೂಲಗಳು ತಿಳಿಸಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	89.05	2,010	395
ಹಾರಂಗಿ	2,859	2,842.74	1,162	50
ಕಬಿನಿ	2,284	2,270.08	2,273	800
ಹೇಮಾವತಿ	2,922	2,893.25	690	200
ಲಿಂಗನಮಕ್ಕಿ	1,819	1,755.3	10,839	1,645
ಸೂಪಾ (ಮೀ)	564	527.78	1,189.97	2,634.26
ಮಾಣಿ	595	573.82	814	00
ತುಂಗಭದ್ರಾ	1,633	1,587.43	6,521	256
ಮಲಪ್ರಭಾ	2,079.50	2,042.96	00	194
ಘಟಪ್ರಭಾ	2,175	2,089.06	3,074	93
ಭದ್ರಾ	186	141.3	835	164
ಆಲಮಟ್ಟಿ (ಮೀ)	519.60	508.60	8,327	561
ನಾರಾಯಣಪುರ (ಮೀ)	492.25	486.81	00	50

* ನೆಲಮಟ್ಟದಿಂದ

ಜಿ20 ಮೂರನೇ ಸಭೆ ಪೂರ್ಣ: ಭಾರತೀಯ ನಿಯೋಗದ ಮುಖ್ಯಸ್ಥ ಅಮಿತಾಭ್ ಕಾಂತ್ ಸಂತಸ

ಹಂಪಿ ಶೆರ್ಪಾ ಸಭೆ ನಿರೀಕ್ಷೆಗೂ ಮೀರಿ ಯಶಸ್ವಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಹಂಪಿಯಲ್ಲಿ ಶನಿವಾರ ಸಂಜೆ ಕೊನೆಗೊಂಡ ಜಿ20 ಮೂರನೇ ಶೆರ್ಪಾ ಸಭೆ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಭಾರತ ಮುಂದಿಟ್ಟಿರುವ ಬಹುತೇಕ ಎಲ್ಲ ಪ್ರಸ್ತಾವಗಳನ್ನು ಇತರ ದೇಶಗಳು ಒಪ್ಪಿವೆ’ ಎಂದು ಭಾರತೀಯ ನಿಯೋಗದ ಮುಖ್ಯಸ್ಥ ಅಮಿತಾಭ್ ಕಾಂತ್ ಹೇಳಿದರು.

‘ಆಫ್ರಿಕಾ ಒಕ್ಕೂಟವನ್ನು ಜಿ20 ಗುಂಪಿಗೆ ಸೇರಿಸುವ ಪ್ರಸ್ತಾವ ಸಹಿತ ಹಲವು ಅಭಿವೃದ್ಧಿ ಕೇಂದ್ರಿತ ಪ್ರಸ್ತಾವಗಳನ್ನು ಭಾರತ ಮುಂದಿಟ್ಟಿತ್ತು. ಅವುಗಳನ್ನು ಇತರ ದೇಶಗಳು ಒಪ್ಪಿದ್ದು, ಸಭೆಯು ನಿರೀಕ್ಷೆಯನ್ನೂ ಮೀರಿ ಯಶಸ್ವಿಯಾಗಿದೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಜಿ20 ಅಧ್ಯಕ್ಷತೆ ವಹಿಸಿರುವ ಭಾರತದಲ್ಲಿ ಈ ಹಿಂದೆ ಹಲವು ಸಭೆಗಳು ನಡೆದಿವೆ. ಆದರೆ ಎಲ್ಲಾ ಕಾರ್ಯಸೂಚಿಗಳನ್ನು ಚರ್ಚಿಸುವುದು ಸಾಧ್ಯವಾಗಿರಲಿಲ್ಲ. ಹಂಪಿಯ ಶೆರ್ಪಾ ಸಭೆಯಲ್ಲಿ ಎಲ್ಲಾ 45 ಕಾರ್ಯಸೂಚಿಗಳ ಬಗ್ಗೆಯೂ ಚರ್ಚಿಸಿ, ಕರಡು ಸಿದ್ಧಪಡಿಸುವ ಕೆಲಸ ಆಗಿದೆ. ಸೆಪ್ಟೆಂಬರ್ 9 ಮತ್ತು 10ರಂದು ದೆಹಲಿಯಲ್ಲಿ ಮುಂದಿನ ಶೆರ್ಪಾ ಸಭೆ ನಡೆಯಲಿದ್ದು, ಅಲ್ಲಿ ಅಂತಿಮ ಕರಡು ಹಾಗೂ ದೆಹಲಿ ಘೋಷಣೆ ಸಿದ್ಧವಾಗಲಿದೆ’ ಎಂದು ಅವರು ವಿವರಿಸಿದರು.

‘ರಷ್ಯಾ-ಉಕ್ರೇನ್ ಯುದ್ಧ ಸಹಿತ ಜಾಗತಿಕ ರಾಜಕೀಯ ವಿಚಾರಗಳನ್ನು ಚರ್ಚಿಸುವ ವೇದಿಕೆ ಇದಾಗಿರಲಿಲ್ಲ. ಅನೌಪಚಾರಿಕ ಚರ್ಚೆಯ ವೇಳೆ ಈ ವಿಷಯಗಳು ಬಂದಿವೆಯೇ ಹೊರತು ನಮ್ಮ ಗುರಿ ಏನಿದ್ದರೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸುವತ್ತ ಒಗ್ಗೂಡಿ ನಡೆಯುವುದು. ಭಯೋತ್ಪಾದನೆ, ಮಾದಕ ವಸ್ತು ಕಳ್ಳಸಾಗಣೆ ನಿಗ್ರಹದಂತಹ ವಿಷಯಗಳು ಕರಡು ಪ್ರಸ್ತಾವದಲ್ಲಿ ಸೇರಿವೆ. ಆಫ್ರಿಕಾ ಒಕ್ಕೂಟವನ್ನು ಜಿ20 ಗುಂಪಿಗೆ ಸೇರಿಸುವುದರಿಂದ ಹಿಂದುಳಿದ ಹಲವು ದೇಶಗಳ ಅಭಿವೃದ್ಧಿಗೆ ವೇಗ ಸಿಗಲಿದೆ’ ಎಂದರು.

ಮುಖ್ಯಾಂಶಗಳು

- 45 ಪ್ರಮುಖ ಕಾರ್ಯಸೂಚಿಗಳ ಬಗ್ಗೆ ಚರ್ಚೆ, ಕರಡು ರಚನೆ
- ಹಲವು ದ್ವಿಪಕ್ಷೀಯ ಮಾತುಕತೆಗಳಿಗೂ ವೇದಿಕೆಯಾದ ಶೆರ್ಪಾ ಸಭೆ
- 125 ಪ್ರತಿನಿಧಿಗಳು ಭಾಗಿ– ಭಾನುವಾರ ನಿರ್ಗಮನ

‘ಹಂಪಿಯಂತಹ ಸ್ಥಳ ಬೇರೆ ಇಲ್ಲ’



ಅಮಿತಾಭ್ ಕಾಂತ್

‘ಜಗತ್ತಿನಲ್ಲಿ ಹಲವು ಪಾರಂಪರಿಕ ತಾಣಗಳಿವೆ. ಹೆಚ್ಚಿನ ತಾಣಗಳಿಗೆ ನಾನು ಭೇಟಿ ನೀಡಿದ್ದೇನೆ. ಆದರೆ ಹಂಪಿಯಂತಹ ಸ್ಥಳವನ್ನು ನಾನು ಕಂಡಿಲ್ಲ. ರಾತ್ರಿ ಹೊತ್ತಲ್ಲಿ ಹಂಪಿಯ ಸೊಬಗಂತೂ ಅದ್ಭುತ. ಜಿ20 ಸಭೆಗೆ ಬಂದ ಗಣ್ಯರೆಲ್ಲ ಇಲ್ಲಿನ ಭೂ ರಚನೆ, ಸ್ಮಾರಕಗಳನ್ನು ಕಂಡು ಬೆರಗಾಗಿದ್ದಾರೆ. ಭಾರತೀಯ ಕಲೆ, ಸಂಸ್ಕೃತಿ, ಸಂಗೀತ, ನೃತ್ಯಗಳಿಂದ ಪ್ರಭಾವಿತರಾಗಿದ್ದಾರೆ’ ಎಂದು ಅಮಿತಾಭ್ ಕಾಂತ್ ಹೇಳಿದರು.

ಜಯಲಲಿತಾ ಜಪ್ತಿ ಆಸ್ತಿಯ ವಾರಸುದಾರಿಕೆ ಕೋರಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಅವರಿಂದ ವಶಪಡಿಸಿಕೊಳ್ಳಲಾದ ಬಹುಕೋಟಿ ಮೌಲ್ಯದ ಚಿನ್ನಾಭರಣ ಸೇರಿದಂತೆ ಇತರೆ ವಸ್ತುಗಳನ್ನು ಕಾನೂನುಬದ್ಧ ವಾರಸುದಾರರಾದ ನಮಗೆ ನೀಡಬೇಕು’ ಎಂದು ಜಯಲಲಿತಾ ಅವರ ಸಹೋದರರ ಮಕ್ಕಳಿಬ್ಬರು ಸಲ್ಲಿಸಿದ್ದ ಅರ್ಜಿಯನ್ನು ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಜಯಲಲಿತಾ ಸಹೋದರ ಜಯಕುಮಾರ್ ಅವರ ಮಕ್ಕಳಾದ ಜೆ. ದೀಪಕ್ ಮತ್ತು ಜೆ. ದೀಪಾ ಅವರು ಸಲ್ಲಿಸಿದ್ದ ಅರ್ಜಿಯನ್ನು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಚ್.ಎ.ಮೋಹನ್ ವಿಚಾರಣೆ ನಡೆಸಿ ವಜಾಗೊಳಿಸಿದ್ದಾರೆ.

‘ಸುಪ್ರೀಂ ಕೋರ್ಟ್ ನೀಡಿರುವ ಆದೇಶಕ್ಕೆ ವಿರುದ್ಧವಾದ ಅರ್ಥವನ್ನು ಈ ನ್ಯಾಯಾಲಯ ನೀಡಲಾಗದು. ಜಯಲಲಿತಾ ಅವರ ಕಾನೂನುಬದ್ಧ ಸಂಬಂಧಿಗಳ ಕುರಿತು ವ್ಯಾಖ್ಯಾನ ಮಾಡಲು ಈ ನ್ಯಾಯಾಲಯ ವ್ಯಾಪ್ತಿ ಹೊಂದಿಲ್ಲ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಎಲ್ಲಾ ಆಸ್ತಿಗಳನ್ನು ಅಕ್ರಮವಾಗಿ ಸಂಪಾದಿಸಲಾಗಿದೆ. ಹೀಗಾಗಿ, ಅವುಗಳನ್ನು ವಶಪಡಿಸಿಕೊಳ್ಳಲು ಆದೇಶಿಸಲಾಗಿದೆ. ಹೀಗಾಗಿ, ಈ ಆಸ್ತಿಗಳು ಸರ್ಕಾರಕ್ಕೆ ಸೇರುತ್ತವೆಯೇ ವಿನಃ ಅರ್ಜಿದಾರರಿಗೆ ಅಲ್ಲ’ ಎಂದು ಸ್ಪಷ್ಟಪಡಿಸಲಾಗಿದೆ.

‘ಅರ್ಜಿದಾರರು ಕಾನೂನಾತ್ಮಕವಾಗಿ ಜಯಲಲಿತಾ ವಾರಸುದಾರರೇ ಆಗಿದ್ದರೂ ವಾಸ್ತವದಲ್ಲಿ ಜಯಲಲಿತಾ ಅವರಿಂದ ರಾಜ್ಯ ಸರ್ಕಾರ ವಶಪಡಿಸಿಕೊಂಡಿರುವ ಮತ್ತು ಜಪ್ತಿ ಮಾಡಿರುವ ವಸ್ತುಗಳನ್ನು ಪಡೆಯಲು ಅರ್ಹರು ಎಂದು ಹೇಳಲಾಗದು’ ಎಂದು ತಿಳಿಸಿದೆ.


‘ಜಯಲಲಿತಾ ಮತ್ತು ಇತರೆ ಆರೋಪಿಗಳಾದ ವಿ.ಕೆ. ಶಶಿಕಲಾ ನಟರಾಜನ್, ವಿ.ಎನ್. ಸುಧಾಕರನ್ ಮತ್ತು ಜೆ. ಇಳವರಸಿ ಅವರಿಗೆ ಸೇರಿದ ಆಸ್ತಿಗಳನ್ನು ಪ್ರತ್ಯೇಕಿಸಲಾಗಿಲ್ಲ. ಎಲ್ಲಾ ಆರೋಪಿಗಳು ಒಟ್ಟಿಗೆ ಸೇರಿ ಬೇನಾಮಿ ಕಂಪನಿಗಳನ್ನು ಆರಂಭಿಸಿ ಅಕ್ರಮ ಹಣವನ್ನು ಅವುಗಳಲ್ಲಿ ಹೂಡಿಕೆ ಮಾಡಿ ಆಸ್ತಿ ಗಳಿಸಿದ್ದರು ಎಂದು ಹೇಳಲಾಗಿದೆ. ಹಾಗಾಗಿ, ಜಯಲಲಿತಾ ಸಾವಿನ ಕಾರಣದಿಂದ ಅವರ ವಿರುದ್ಧದ ಆರೋಪ ಕೈಬಿಟ್ಟರೂ ಅಕ್ರಮ ಮಾರ್ಗದ ಮೂಲಕ ಸಂಪಾದಿಸಿರುವ ಆಸ್ತಿಯನ್ನು ಜಯಲಲಿತಾ ಅವರ ಕಾನೂನಾತ್ಮಕ ವಾರಸುದಾರರಿಗೆ ನೀಡಲಾಗದು’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಭಾನುವಾರ, ಜುಲೈ 16, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 196 | ಪುಟ 18
• www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಳೆಗಾಲದ 'ಯಕ್ಷ' ಸಂಕಟ

• ಉದಯ ಯು.



ಮಂಗಳೂರಿನಲ್ಲಿ ಶನಿವಾರ ನಡೆದ 'ಮಹಾಕಲಿ ಮಗಧೇಂದ್ರ' ಯಕ್ಷಗಾನ ಪ್ರಸಂಗದಲ್ಲಿ ಜರಾಸಂಧ ಪಾತ್ರದಲ್ಲಿ ಸನತ್ ಆಚಾರ್ಯ

ಮಂಗಳೂರು: ಉರಿಯುವ 'ದೊಂದಿ'ಗೆ (ದೀವಟಿಗೆ) ರಾಳದ ಪುಡಿಯನ್ನು ಎರಚುತ್ತಾ..., ಪ್ರೇಕ್ಷಕರ ಮಧ್ಯದಿಂದ ಅಬ್ಬರಿಸುತ್ತಾ ವೇದಿಕೆಯ ಮೇಲೆ ಬರುವ, ದೇವೇಂದ್ರನಾದಿಯಾಗಿ ದೇವಾಧಿದೇವತೆಗಳಲ್ಲಿ ನಡುಕ ಹುಟ್ಟಿಸಿದ ಮಹಿಷಾಸುರ... ಮಳೆಗಾಲದಲ್ಲಿ ಪುತ್ತೂರಿನ ಅಡಿಕೆ ಬೆಳೆಗಾರರ ಮನೆಯಲ್ಲಿ ಬೆಳಿಗ್ಗೆಯಿಂದ ಸಂಜೆಯ ವರೆಗೂ ಅಡಿಕೆ ಸುಲಿಯುತ್ತಾನೆ.

ಹೇಗಿದ್ದೀರಿ ಎಂದು ವಿಚಾರಿಸಿದರೆ ಮುಖವನ್ನು ಆಕಾಶದತ್ತ ಎತ್ತಿ, ಹುಂ.. ಹೂಂ.. ಊಹೂಂ... ಎಂದು ಧ್ವನಿಯಲ್ಲೇ ಸಂಜ್ಞಾ-ಭಾಷೆಯಲ್ಲಿ ಮಾತನಾಡುತ್ತಾನೆ. ಮತ್ತೂ ಮಾತಿಗೆಳೆದರೆ ಬಾಯಿಯಲ್ಲಿದ್ದ ಕವಳವನ್ನು ಪಕ್ಕದ ಹೂವಿನ ಗಿಡದ ಬುಡಕ್ಕೆ ಪಿಚಕ್ಕನೆ ಉಗಿದು, ಅಡಿಕೆ ಸುಲಿಯುತ್ತಾ ಲೋಕಾಭಿರಾಮದ ಮಾತಿಗಿಳಿಯುತ್ತಾನೆ.

...ತಾಯಿಗೆ ಬಾಯಿಯಲ್ಲಿ ಬ್ರಹ್ಮಾಂಡವನ್ನು ತೋರಿದ್ದ, ತನಗಾಗಿ ಅವಲಕ್ಕಿ ತಂದಿದ್ದ ಬಾಲ್ಯದ ಸ್ನೇಹಿತ ಕುಚೇಲನಿಗೆ ಧನಕನಕಾದಿಗಳ ಮಳೆಗರೆದಿದ್ದ ಕೃಷ್ಣ (ಪಾತ್ರಧಾರಿ) ತಮ್ಮೂರಿನ ನ್ಯಾಯಬೆಲೆ ಅಂಗಡಿಯಲ್ಲಿ ಬಯೊಮೆಟ್ರಿಕ್ ಯಂತ್ರದ ಮೇಲೆ ಬೆರಳಿಟ್ಟು ಅಕ್ಕಿಗಾಗಿ ಕಾಯುತ್ತಿದ್ದ. ಗೋವರ್ಧನ ಗಿರಿಯನ್ನು ಕಿರುಬೆರಳಿನಿಂದ ಎತ್ತಿ ಹಿಡಿದು, ಮಥುರೆಯ ಜನರನ್ನು ರಕ್ಷಿಸಿದ್ದ ಆತ, ರೇಷನ್ ಅಕ್ಕಿಯನ್ನು ಮನೆಗೊಯ್ಯಲು ಬಸ್ಸಿಗೆ ಎದುರು ನೋಡುತ್ತಿದ್ದ...

ಒಳನೋಟ
ಜೀವನ ಜೋಕಾಲಿ
ಪ್ರತಿಕ್ರಿಯಿಸಿ: 9606038256
feedback@prajavani.co.in

> ಯಕ್ಷಗಾನ ಅಕಾಡೆಮಿಯು ಸರ್ಕಾರ ಹಾಗೂ ಕಲಾವಿದರ ನಡುವೆ ಸಮರ್ಥ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬೇಕು
> **ಶಿವಾನಂದ ಹೆಗಡೆ ಕೆರೆಮನೆ,** ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಮುಖ್ಯಸ್ಥ

ಯಕ್ಷಗಾನ ಕಲಾವಿದರ ಅಂದಾಜು ಸಮೀಕ್ಷೆ

32	ವೃತ್ತಿ ಮೇಳಗಳು
1300	ವೃತ್ತಿ ಕಲಾವಿದರು
7000	ಹವ್ಯಾಸಿ ಕಲಾವಿದರು

...ಒಂದು ಬಣ್ಣಬಣ್ಣದ ವೇದಿಕೆಯ ಮೇಲೆ ತೆರೆದುಕೊಳ್ಳುವ ಪೌರಾಣಿಕ ಕಥನ, ಇನ್ನೊಂದು ಬದುಕಿನ ವಾಸ್ತವ. ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಭಾಗದ ಯಕ್ಷಗಾನದ ಕಲಾವಿದರಿಗೆ ಇದೇ ಬದುಕು. ತುಳುನಾಡಿನಲ್ಲಿ 'ಪತ್ತನಾಜೆ' (ಹಬ್ಬಗಳ ಋತುವಿನ ಕೊನೆಯ ದಿನ) ಬಂತೆಂದರೆ ಯಕ್ಷಗಾನ ಪ್ರದರ್ಶನಗಳಿಗೆ ತೆರೆಬೀಳುತ್ತದೆ. ಮುಂದೆ ಪ್ರದರ್ಶನಗಳು ಆರಂಭವಾಗುವುದು ನವೆಂಬರ್ ಅಂತ್ಯ ಅಥವಾ ಡಿಸೆಂಬರ್ ತಿಂಗಳಲ್ಲಿ. ವೇದಿಕೆಯಲ್ಲಿ ಕೃಷ್ಣನಾಗಿ, ರಾಮನಾಗಿ, ಮಹಿಷಾಸುರನಾಗಿ ಅಥವಾ ಸಾಮಾಜಿಕ ಪ್ರಸಂಗಗಳಲ್ಲಿ ರಾಜನಾಗಿ, ವಿದೂಷಕನಾಗಿ ಮಿಂಚಿದ ಕಲಾವಿದರಿಗೆ, ಮಳೆಗಾಲದ ಆರಂಭದಿಂದ ಆರು ತಿಂಗಳ ಕಾಲ ಬೇರೆ ವೃತ್ತಿ ಅನಿವಾರ್ಯ.

6ನೇ ಪುಟ ನೋಡಿ

ಬಿಜೆಪಿ ಜತೆ ವಿಲೀನವೋ ಮೈತ್ರಿಯೋ • ಎಚ್‌ಡಿಕೆಗೆ ವಿಪಕ್ಷ ನಾಯಕನ ಆಮಿಷ

ಎನ್‌ಡಿಎ ಕಡೆಗೆ ಜೆಡಿಎಸ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡಲು ಸೋತಿದ್ದರೂ ಕೆಲವು ಕ್ಷೇತ್ರಗಳಲ್ಲಿ ತನ್ನದೇ ನೆಲೆ ಹೊಂದಿರುವ ಜೆಡಿಎಸ್, ಎನ್‌ಡಿಎ ಮಿತ್ರಕೂಟದ ಭಾಗವಾಗುವ ಆಲೋಚನೆಯಲ್ಲಿದೆ.

ವಿಧಾನಸಭೆ ಚುನಾವಣೆ ಸೋಲಿನಿಂದ ಕಂಗೆಟ್ಟಿರುವ ಬಿಜೆಪಿ, ಲೋಕಸಭೆ ಚುನಾವಣೆ ಹೊತ್ತಿಗಾದರೂ ಚೇತರಿಸಿಕೊಳ್ಳುವ ಲೆಕ್ಕಾಚಾರದಲ್ಲಿ ಜೆಡಿಎಸ್ ಮೊರೆ ಹೋಗಿದೆ. ಕಾಂಗ್ರೆಸ್ ಜತೆ ಸಂಬಂಧ ಹಳಸಿರುವುದರಿಂದ, ಮತ್ತೆ ತಲೆ ಎತ್ತಬೇಕಾದರೆ ಬಿಜೆಪಿ ಆಸರೆಯೇ ಸೂಕ್ತ ಎಂಬ ತರ್ಕಕ್ಕೆ ಜೆಡಿಎಸ್ ಮುಖಂಡರು ಬಂದಿದ್ದಾರೆ. ಇದೇ 18ರಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆಯಲಿರುವ ಎನ್‌ಡಿಎ ಸಭೆಯಲ್ಲಿ ಜೆಡಿಎಸ್ ಭಾಗಿಯಾಗುವುದೇ ಇಲ್ಲವೇ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಬಿರುಸುಗೊಂಡಿದೆ.

ಎನ್‌ಡಿಎ ಮೈತ್ರಿಕೂಟದ ಭಾಗವಾಗಿ, ಈಗ ಚದುರಿಹೋಗಿರುವ ವಿವಿಧ ಪಕ್ಷಗಳ ನಾಯಕರಿಗೆ ಪತ್ರ ಬರೆದಿರುವ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಮತ್ತೆ ಕೂಟವನ್ನು ಒಗ್ಗೂಡಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕೂಡ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

'ಇಲ್ಲಿಯವರೆಗೆ ಬಿಜೆಪಿಯಿಂದ ಆಹ್ವಾನ ಬಂದಿಲ್ಲ. ಬಂದ ಬಳಿಕವಷ್ಟೇ, ಸಭೆಯಲ್ಲಿ ಪಾಲ್ಗೊಳ್ಳಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲಾಗುತ್ತದೆ' ಎಂದು ಕುಮಾರಸ್ವಾಮಿಯವರ ಆಪ್ತ ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ. 'ನಾವೇ ಏಕಾಂಗಿಯಾಗಿ ಸ್ಪರ್ಧಿಸಿದರೆ 2-4 ಸ್ಥಾನದಲ್ಲಾದರೂ ಗೆಲ್ಲಬಹುದು. ಬಿಜೆಪಿ ಜತೆಗೆ ಹೋದರೆ, 2019ರಲ್ಲಿ ಕಾಂಗ್ರೆಸ್ ಜತೆಗೆ ಹೋದಂತೆ ಆಗಿ, ಇರುವ ಸ್ಥಾನವನ್ನೂ ಕಳೆದುಕೊಳ್ಳಬೇಕಾಗಬಹುದೆಂಬ ಆತಂಕ ಇದೆ. ಈ ಗೊಂದಲ ಇರುವುದರಿಂದ ಯಾವುದೇ ತೀರ್ಮಾನವೂ ಆಗಿಲ್ಲ' ಎಂದು ಮೂಲಗಳು ವಿವರಿಸಿವೆ.

ಲೆಕ್ಕಾಚಾರವೇನು?: ಭಾರಿ ಬಹುಮತ ಪಡೆದು ಕಾಂಗ್ರೆಸ್ ಅಧಿಕಾರ ಹಿಡಿದಿರುವುದರಿಂದ ಏಕಾಂಗಿಯಾಗಿ ಲೋಕಸಭೆ ಚುನಾವಣೆ ಎದುರಿಸಿದರೆ 25 ಸ್ಥಾನಗಳನ್ನು ಮರಳಿ ಗಳಿಸುವುದು ಕಷ್ಟ. ಜೆಡಿಎಸ್ ಪ್ರಭಾವವಿರುವ ಕ್ಷೇತ್ರಗಳಲ್ಲಿ ಒಂದಾಗಿ ಚುನಾವಣೆಗೆ ಹೋದರೆ ಮರ್ಯಾದೆ ಉಳಿಸಿಕೊಳ್ಳುವಷ್ಟಾದರೂ ಸ್ಥಾನಗಳನ್ನು ದಕ್ಕಿಸಿಕೊಳ್ಳಬಹುದು ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರ.

6ನೇ ಪುಟ ನೋಡಿ

18ರಂದು ಎನ್‌ಡಿಎ ಮಹತ್ವದ ಸಭೆ

ನವದೆಹಲಿ(ಪಿಟಿಐ): ಬಿಜೆಪಿ ವಿರುದ್ಧ ಒಗ್ಗಟ್ಟಾಗಲು ವಿರೋಧ ಪಕ್ಷಗಳು ಪ್ರಯತ್ನಿಸುತ್ತಿರುವ ನಡುವೆಯೇ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟವು ತನ್ನ ಶಕ್ತಿ ಪ್ರದರ್ಶನಕ್ಕಾಗಿ ಇದೇ 18ರಂದು ಮಹತ್ವದ ಸಭೆ ಹಮ್ಮಿಕೊಂಡಿದೆ.

ಈ ಸಭೆಯಲ್ಲಿ ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಸೇರಿದಂತೆ ಬಿಜೆಪಿಯ ಹಳೆಯ ಹಾಗೂ ಹೊಸ ಮಿತ್ರಪಕ್ಷಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ ನಿತ್ಯಾನಂದ ರಾಯ್ ಅವರು ಶುಕ್ರವಾರ ಚಿರಾಗ್ ಅವರನ್ನು ಭೇಟಿಯಾಗಿದ್ದರು. ಎನ್‌ಡಿಎ ಸಭೆಗೆ ಚಿರಾಗ್ ಅವರನ್ನು ಆಹ್ವಾನಿಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಪತ್ರವನ್ನು ಲೋಕ ಜನಶಕ್ತಿ ಪಕ್ಷ ಹಂಚಿಕೊಂಡಿದೆ.

6ನೇ ಪುಟ ನೋಡಿ

ಲೋಕಾಯುಕ್ತ ಪೊಲೀಸರ ಮೇಲೇ ಕಾರು ಹತ್ತಿಸಲು ಯತ್ನಿಸಿದ ಆರೋಪಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಧಿಸಲು ಹೋಗಿದ್ದ ಲೋಕಾಯುಕ್ತ ಪೊಲೀಸರ ಮೇಲೆ ಕಾರು ಹತ್ತಿಸಲು ಯತ್ನಿಸಿ ಪರಾರಿಯಾಗಲು ಮುಂದಾಗಿದ್ದ ಆಹಾರ ನಿರೀಕ್ಷಕ ಮಹಾಂತೇಗೌಡ ಬಿ. ಕಡಬಾಳು ಅವರನ್ನು ಶುಕ್ರವಾರ ರಾತ್ರಿ ಬೆನ್ನಟ್ಟಿ ಬಂಧಿಸಲಾಗಿದೆ.



ಮಹಾಂತೇಗೌಡ

ಉದ್ದಿಮೆ ಪರವಾನಗಿ ಪರಿಶೀಲನೆಗೆ ₹43 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಬೆಂಗಳೂರು ಉತ್ತರ ತಾಲ್ಲೂಕಿನ ಆಹಾರ ನಿರೀಕ್ಷಕ ಕಡಬಾಳು ಅವರನ್ನು ಸೆರೆ ಹಿಡಿಯಲು ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ತುಮಕೂರು ರಸ್ತೆಯ ಮಂಜುನಾಥ್ ನಗರದ ಶೋಭಾ ಅಪಾರ್ಟ್‌ಮೆಂಟ್ ಬಳಿ ಹಣ ಪಡೆಯುತ್ತಿದ್ದಾಗ ಈ ಕಾರ್ಯಾಚರಣೆ ನಡೆದಿದೆ.



ಲೋಕಾಯುಕ್ತ ಪೊಲೀಸರ ಟಾಟಾ ಸುಮೊ ವಾಹನಕ್ಕೆ ಆರೋಪಿಯ ಕಾರು ಡಿಕ್ಕಿಯಾಗಿರುವುದು

ರಂಗಧಾಮಯ್ಯ ಅವರ ಬಳಿ ಉದ್ದಿಮೆ ಪರವಾನಗಿ ಪರಿಶೀಲನೆಗಾಗಿ ಮಹಾಂತೇಗೌಡ, ₹1 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ₹12 ಸಾವಿರವನ್ನು ಮುಂಗಡವಾಗಿ ಪಡೆದುಕೊಂಡಿದ್ದರು. ಬಾಕಿ ಮೊತ್ತವನ್ನು ಶುಕ್ರವಾರ ನೀಡುವಂತೆ ಆರೋಪಿ ಒತ್ತಾಯಿಸಿದ್ದರು. ರಂಗಧಾಮಯ್ಯ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು. ಶುಕ್ರವಾರ ರಂಗಧಾಮಯ್ಯ ಅವರಿಂದ ₹43 ಸಾವಿರ ಲಂಚದ ಹಣ ಪಡೆದುಕೊಂಡಾಗ ಬಂಧನಕ್ಕೆ ಕಾರ್ಯಾಚರಣೆ ನಡೆಸಿದ್ದರು. ಅದನ್ನು ತಿಳಿದ ಮಹಾಂತೇಗೌಡ ಕಾರು ಏರಿ ಪರಾರಿಯಾಗಲು ಯತ್ನಿಸಿದ್ದರು.

8ನೇ ಪುಟ ನೋಡಿ

'ಗೃಹ ಲಕ್ಷ್ಮಿ'ಗೆ 19ರಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ 'ಗ್ಯಾರಂಟಿ' ಯೋಜನೆಗಳಲ್ಲಿ ಒಂದಾಗಿರುವ, ಪ್ರತಿ ಕುಟುಂಬದ ಯಜಮಾನಿಗೆ ತಿಂಗಳಿಗೆ ₹2,000 ನೀಡುವ 'ಗೃಹ ಲಕ್ಷ್ಮಿ'ಗೆ ಇದೇ 19ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ, '1.28 ಕೋಟಿ ಮಹಿಳೆಯರು ಈ ಯೋಜನೆಗೆ ಅರ್ಹರಿದ್ದು, ನೋಂದಣಿ ಪ್ರಕ್ರಿಯೆ ಮುಕ್ತಾಯಗೊಂಡ ಬಳಿಕವೇ ಸ್ಪಷ್ಟ ಚಿತ್ರಣ ಸಿಗಲಿದೆ. ಆಗಸ್ಟ್ ತಿಂಗಳಿನಿಂದ ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಲಿದೆ' ಎಂದರು.

'ಗ್ರಾಮೀಣ ಪ್ರದೇಶದವರು ಗ್ರಾಮ ಒನ್ ಅಥವಾ ಬಾಪೂಜಿ ಸೇವಾ ಕೇಂದ್ರದಲ್ಲಿ, ನಗರ ಪ್ರದೇಶದವರು ಕರ್ನಾಟಕ ಒನ್ ಅಥವಾ ಬೆಂಗಳೂರು ಒನ್ ಕೇಂದ್ರದಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಜೊತೆಗೆ ಸರ್ಕಾರದಿಂದ ನೇಮಕಗೊಂಡ ಸ್ವಯಂಸೇವಕ ಪ್ರಜಾ ಪ್ರತಿನಿಧಿಗಳ ಮೂಲಕವೂ ನೋಂದಣಿ ಮಾಡಿಸಿಕೊಳ್ಳಬಹುದು. ಪ್ರಜಾ ಪ್ರತಿನಿಧಿಗಳು ಮನೆಮನೆಗೆ ಭೇಟಿ ನೀಡಲಿದ್ದಾರೆ' ಎಂದರು.

6 ನೇ ಪುಟ ನೋಡಿ

ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯಲ್ಲಿ ಅಳವಡಿಕೆ

ರೋಗಿ ಮೇಲ್ವಿಚಾರಣೆಗೆ ರೋಬೊ

• ವರುಣ ಹೆಗಡೆ



ಬೆಂಗಳೂರು: ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಮೇಲ್ವಿಚಾರಣೆಗೆ ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯು (ಆರ್‌ಜಿಐಸಿಡಿ) ಟೆಲಿ ರೋಬೊ ಅಳವಡಿಸಿಕೊಂಡಿದೆ. ಇದರಿಂದಾಗಿ ವಾರ್ಡ್‌ಗಳಿಗೆ ತೆರಳದೆಯೂ ರೋಗಿಗಳ ನಿರ್ವಹಣೆ ವೈದ್ಯರಿಗೆ ಸಾಧ್ಯವಾಗಿದೆ.

ನಗರದಲ್ಲಿ ಕೋವಿಡ್ ಸಾಂಕ್ರಾಮಿಕ ಕಾಣಿಸಿಕೊಂಡಾಗ ಸಂಸ್ಥೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಘೋಷಿಸಿ, ಹಾಸಿಗೆಗಳನ್ನು ಮೀಸಲಿಡಲಾಗಿತ್ತು. ಇಲ್ಲಿ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ ಈ ಟೆಲಿ ರೋಬೊವನ್ನು ಬಳಸಿಕೊಳ್ಳಲಾಗಿತ್ತು. ಉತ್ತಮ ಫಲಿತಾಂಶ ದೊರೆತ ಪರಿಣಾಮ ಈಗ ಕೋವಿಡೇತರ ರೋಗಿಗಳ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ. ಈ ರೋಬೊ ವ್ಯವಸ್ಥೆಗೆ ₹ 30 ಲಕ್ಷ ವೆಚ್ಚ ಮಾಡಲಾಗಿದೆ. ಇದರ ನಿರ್ವಹಣೆಗೆ ನಿಯಂತ್ರಣ ಕೊಠಡಿ (ಕಮಾಂಡ್ ಸೆಂಟರ್) ನಿರ್ಮಿಸಲಾಗಿದ್ದು, ಇದರ ಮೂಲಕವೇ ರೋಬೊವನ್ನು ನಿಯಂತ್ರಿಸಲಾಗುತ್ತಿದೆ.

ಸಂಸ್ಥೆಯಲ್ಲಿ 60 ಐಸಿಯು ಹಾಸಿಗೆಗಳಿವೆ. ಟೆಲಿ ರೋಬೊ ಅನ್ನು ಒಂದು ಹಾಸಿಗೆಯಿಂದ ಇನ್ನೊಂದು ಹಾಸಿಗೆಗೆ ಚಲಿಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ವೈದ್ಯರು ರೋಬೊ ನೆರವಿನಿಂದ ರೋಗಿಗಳೊಂದಿಗೆ ಸಂವಹನ ನಡೆಸಬಹುದಾಗಿದೆ. ರೋಬೊ ಮೇಲೆ ನಿಗಾ ಇರಿಸಲು ನಿಯಂತ್ರಣ ಕೊಠಡಿಯಲ್ಲಿ ಬೃಹತ್ ಪರದೆಯನ್ನೂ ಅಳವಡಿಸಲಾಗಿದೆ. ಇದರಿಂದಾಗಿ ರೋಬೊ ಕಾರ್ಯವಿಧಾನ ವೀಕ್ಷಿಸುತ್ತಾ, ಸೂಚನೆಗಳನ್ನು ನೀಡಲು ಸಾಧ್ಯವಾಗಿದೆ. ಅದೇ ರೀತಿ, ರೋಬೊ ನೆರವಿನಿಂದ ರೋಗಿಯ ದತ್ತಾಂಶವನ್ನು ಸಂಗ್ರಹಿಸಿ, ವಿಶ್ಲೇಷಿಸಲು ಸಹಕಾರಿಯಾಗಿದೆ.

ಅಂಕಿ-ಅಂಶಗಳು

470	ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯ
200-250	ಆಸ್ಪತ್ರೆಗೆ ದಿನದಲ್ಲಿ ಭೇಟಿ ನೀಡುವ ಹೊರರೋಗಿಗಳ ಸರಾಸರಿ ಸಂಖ್ಯೆ
170-180	ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸರಾಸರಿ ಒಳರೋಗಿಗಳು
30	ಆಸ್ಪತ್ರೆಯಲ್ಲಿ ಲಭ್ಯ ಇರುವ ತಜ್ಞ ವೈದ್ಯರು

ರೋಗಿಗಳ ಮೇಲೆ ನಿಗಾ: ಈ ರೋಬೊ ವ್ಯವಸ್ಥೆಯಿಂದ ರೋಗಿಗಳ ಮೇಲೆ ನಿರಂತರ ನಿಗಾ ಸಾಧ್ಯವಾಗಿದೆ. ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯ ಕೆಲಸವನ್ನೂ ರೋಬೊ ಸುಲಭಗೊಳಿಸಿದೆ.

8ನೇ ಪುಟ ನೋಡಿ

ಒಳ ಪುಟಗಳು



ಚಿನಕುರಳಿ
ಪ್ರಕಾಶ್ ಶೆಟ್ಟಿ



'ನೀರು ಕೊಡುವ ಪರಿಸ್ಥಿತಿ ಇಲ್ಲ'

ಮಂಡ್ಯ: 'ಕಾವೇರಿ ನೀರು ಹರಿಸುವಂತೆ ತಮಿಳುನಾಡು ಸರ್ಕಾರವು ಕಾವೇರಿ ಮೇಲುಸ್ತುವಾರಿ ಸಮಿತಿಗೆ ಮನವಿ ಮಾಡಿದೆ. ಆದರೆ, ಸದ್ಯ ಅಲ್ಲಿಗೆ ನೀರು ಕೊಡುವ ಪರಿಸ್ಥಿತಿ ಇಲ್ಲ. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಂಚಿಕೆ ಪ್ರಕಾರ ನೀರು ಹರಿಸಬೇಕು ಎಂದು ತಮಿಳುನಾಡು ಕೇಳಿದೆ. ಆದರೆ, ಇಲ್ಲಿ ಕುಡಿಯುವ ನೀರಿಗೇ ಕೊರತೆ ಇರುವಾಗ ಅವರಿಗೆ ಕೊಡುವುದು ಹೇಗೆ ಸಾಧ್ಯ? ಈ ತಿಂಗಳೊಳಗೆ ಚೆನ್ನಾಗಿ ಮಳೆಯಾದರೆ ಮಾತ್ರ ಪರಿಸ್ಥಿತಿ ಸುಧಾರಿಸುತ್ತದೆ' ಎಂದರು.

ಕೆಎಸ್‌ಆರ್‌ಟಿಸಿ ವಿಮೆ ಎಲ್ಲ ಸಾರಿಗೆ ಸಂಸ್ಥೆಗಳಿಗೂ ಜಾರಿಗೊಳಿಸಿ: ರಾಮಲಿಂಗಾರೆಡ್ಡಿ ಸೂಚನೆ

ಮೃತ ಚಾಲಕರ ಕುಟುಂಬಕ್ಕೆ ತಲಾ ₹1 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷ ಅಪಘಾತದಲ್ಲಿ ಮೃತಪಟ್ಟಿರುವ ಕೆಎಸ್‌ಆರ್‌ಟಿಸಿ ಚಾಲನಾ ಸಿಬ್ಬಂದಿಯ ಕುಟುಂಬಕ್ಕೆ ತಲಾ ₹ 1 ಕೋಟಿ ಅಪಘಾತ ವಿಮಾ ಪರಿಹಾರ ಚೆಕ್ ಅನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಿತರಿಸಿದರು.

ಕೆಎಸ್‌ಆರ್‌ಟಿಸಿ ದೇಶದಲ್ಲಿಯೇ ಪ್ರಥಮ ಬಾರಿಗೆ ತನ್ನ ಸಿಬ್ಬಂದಿಗೆ ₹ 1 ಕೋಟಿ ಮೊತ್ತದ ಅಪಘಾತ ವಿಮೆ ಜಾರಿಗೊಳಿಸಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಪ್ರೀಮಿಯಂ ರಹಿತ ₹ 50 ಲಕ್ಷಗಳ ವಿಮೆ ಹಾಗೂ ಯುನೈಟೆಡ್ ಇಂಡಿಯಾ ಇನ್ಶ್ಯೂರೆನ್ಸ್‌ನಿಂದ ವಾರ್ಷಿಕ ₹ 885 ಪ್ರೀಮಿಯಂ ನೌಕರರ ಪಾವತಿಯಂತೆ ₹ 50 ಲಕ್ಷ ಈ ವಿಮೆಯು ಒಳಗೊಂಡಿದೆ.

ಜನವರಿಯಲ್ಲಿ ಬೆಂಗಳೂರು ಕೇಂದ್ರೀಯ ವಿಭಾಗದ ಚಾಲಕ ಜಿ.ವಿ. ಚಲಪತಿ (41) ಅವರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಲಾರಿ ಡಿಕ್ಕಿಯಾಗಿ ಮೃತಪಟ್ಟಿದ್ದರು. ಹಾಸನ ವಿಭಾಗದ ಚಾಲಕ/ನಿರ್ವಾಹಕ ಪಿ.ಎನ್. ನಾಗರಾಜು (52) ಅವರು ಬೈಕ್ ಹೋಗುತ್ತಿದ್ದಾಗ ಕಾರು ಡಿಕ್ಕಿಯಾಗಿ ಮೃತಪಟ್ಟಿದ್ದರು. ಅವರ ಕುಟುಂಬಗಳಿಗೆ ಈ ವಿಮೆಯ ಚೆಕ್ ವಿತರಣೆ ಮಾಡಲಾಯಿತು. ಇದಲ್ಲದೇ ನಿಗಮದಿಂದ ನೀಡುವ ಪರಿಹಾರದ ಮೊದಲ ಕಂತು ಈಗಾಗಲೇ ನೀಡಲಾಗಿದೆ.

ರಾಮಲಿಂಗಾ ರೆಡ್ಡಿ ಮಾತನಾಡಿ, 'ಮೃತಪಟ್ಟ ಚಾಲನಾ ಸಿಬ್ಬಂದಿಯ ಕುಟುಂಬಗಳ ಸುಭದ್ರತೆಗಾಗಿ ನಿಗಮ ಜಾರಿಗೊಳಿಸಿರುವ ಅಪಘಾತ ಪರಿಹಾರ ವಿಮಾ ಯೋಜನೆಯು ಉತ್ತಮವಾಗಿದೆ. ಇದನ್ನು ಇತರೆ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಜಾರಿಗೊಳಿಸಲು ಸೂಚಿಸಲಾಗುವುದು' ಎಂದು ತಿಳಿಸಿದರು.

'ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು ಮುಂದಿನ ಜೀವನಕ್ಕಾಗಿ ಕಾಪಾಡಿಕೊಳ್ಳಬೇಕು. ಅನುಕಂಪ ಆಧಾರದ ಮೇಲಿನ ಕೆಲಸಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಸಲಹೆ ನೀಡಿದರು. ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್, ಕಾರ್ಮಿಕ ಸಂಘಟನೆಗಳ ಮುಖಂಡರಾದ ಎಚ್.ವಿ. ಅನಂತ ಸುಬ್ಬರಾವ್, ಬಿ. ಜಯದೇವರಾಜೇ ಅರಸು, ಜಿ.ಎಸ್. ಮಹದೇವಯ್ಯ, ಎಚ್.ಡಿ. ರೇವಪ್ಪ, ಎಸ್. ನಾಗರಾಜ, ವೆಂಕಟರಮಣಪ್ಪ, ಎಸ್‌ಬಿಐ ಬ್ಯಾಂಕ್ ಅಧಿಕಾರಿಗಳು ಇದ್ದರು.



ಕೆಎಸ್‌ಆರ್‌ಟಿಸಿ ಚಾಲನಾ ಸಿಬ್ಬಂದಿ ಜಿ.ವಿ. ಚಲಪತಿ ಮತ್ತು ಪಿ.ಎನ್. ನಾಗರಾಜು ಅವರ ಕುಟುಂಬದ ಸದಸ್ಯರಿಗೆ ತಲಾ ₹ 1 ಕೋಟಿ ಅಪಘಾತ ವಿಮಾ ಪರಿಹಾರ ಚೆಕ್ ಅನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬು ಕುಮಾರ್ ವಿತರಿಸಿದರು



ವಿಹಂಗಮ ಯೋಗ ಕುರಿತ ಕಾರ್ಯಾಗಾರವನ್ನು ಮಾಜಿ ಸಚಿವ ಬಿ.ಸಿ.ನಾಗೇಶ್ ಉದ್ಘಾಟಿಸಿದರು. ಜಿ ಎಸ್ ಟಿ ಹೆಚ್ಚುವರಿ ಆಯುಕ್ತ ಶಿವಪ್ರಕಾಶ್, ಆಯೋಜಕ ಅನಿಲ್ ಕಾಬ್ರ, ವಕೀಲ ಕಾಮತ್ ಇದ್ದಾರೆ

ಪಠ್ಯದಲ್ಲಿ ಪಕ್ಷದ ಸಿದ್ಧಾಂತ ಹೇರಲ್ಲ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಸಾಗರ: 'ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ತಜ್ಞರ ಸಲಹೆ ಪಡೆದು ಮುಂದುವರೆಯುತ್ತಿದ್ದೇವೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ಪಠ್ಯದೊಳಗೆ ಸೇರಿಸಿ ಅದನ್ನು ಮಕ್ಕಳ ಮೇಲೆ ಹೇರುವುದಕ್ಕೂ ಮುಂದಾಗಿಲ್ಲ' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

'ಶಿಕ್ಷಣ ಕ್ಷೇತ್ರದಲ್ಲಿ ಏನೇ ಬದಲಾವಣೆ ಮಾಡುವುದಿದ್ದರೂ ತಜ್ಞರ ಸಲಹೆ ಪಡೆಯುತ್ತೇವೆ. ಬಳಿಕ ಮುಂದಡಿ ಇಡುತ್ತೇವೆ. ರಾಜ್ಯದಲ್ಲಿ ಶಿಕ್ಷಕರ ನೇಮಕ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುತ್ತೇವೆ' ಎಂದು ಶನಿವಾರ ಮಾಧ್ಯಮದವರಿಗೆ ತಿಳಿಸಿದರು.

ಶಾಲೆಗಳಲ್ಲಿನ ಬಿಸಿಯೂಟ ಸಿಬ್ಬಂದಿ ಗಾಜಿನ ಬಳೆ ಧರಿಸುವಂತಿಲ್ಲ ಎಂದು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ ಕುರಿತ ಪ್ರಶ್ನೆಗೆ, 'ಗಾಜಿನ ಬಳೆ ಒಡೆದು ಅಡುಗೆ ಪಾತ್ರೆಯೊಳಗೆ ಬಿದ್ದರೆ ಸಮಸ್ಯೆಯಾಗಬಹುದು. ಮಕ್ಕಳ ಸುರಕ್ಷತೆ ದೃಷ್ಟಿಯಿಂದಷ್ಟೇ ಈ ಸುತ್ತೋಲೆ ಹೊರಡಿಸಲಾಗಿದೆ. ಇದನ್ನು ಧಾರ್ಮಿಕ ಚೌಕಟ್ಟಿನಡಿ ನೋಡುವುದು ಸರಿಯಲ್ಲ' ಎಂದು ಹೇಳಿದರು.

'ವಿಶ್ವ ಅಗೋಚರ ವಸ್ತುಗಳ ಆಗರ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ವಿಶ್ವವು ಅಗೋಚರ ವಸ್ತುಗಳ ಆಗರ. ಕೆಲವು ಅನುಭವಕ್ಕೆ ಬಂದರೆ ಹಲವು ವಿಷಯಗಳು ಮನುಜನ ಜ್ಞಾನ ವ್ಯಾಪ್ತಿ ಮೀರಿದೆ ಎಂದು ನ್ಯಾಸ ವಿಜ್ಞಾನಿ ಹೇಮಂತ್ ಹೇಳಿದರು.

ಕೆಂಗೇರಿಯ ಮಹೇಶ್ವರಿ ಫಾರ್ಮ್‌ನಲ್ಲಿ ಆಯೋಜಿಸಲಾಗಿದ್ದ, ವಿಹಂಗಮ ಯೋಗ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದರು.

ಸಂಶೋಧನೆ ಹಾಗೂ ಅನ್ವೇಷಣೆಗಳ ಮೂಲಕ ಸ್ಪರ್ಶಕ್ಕೆ, ಅನುಭವಕ್ಕೆ ಸಿಗುವ ಶೇ 4ರಷ್ಟು ವಸ್ತುಗಳ ಬಗ್ಗೆ ಮಾತ್ರ ಮಾಹಿತಿ ಕಲೆ ಹಾಕಲಾಗಿದೆ. ಶೇ 96ರಷ್ಟು ವಿಷಯಗಳು ಈಗಲೂ ನಿಗೂಢವಾಗಿದ್ದು, ಮಾನವನ ಜ್ಞಾನ ಸಂಪತ್ತನ್ನು ಪ್ರಶ್ನಿಸುವಂತಿದೆ ಎಂದರು.

ಯೋಗ ಕ್ರಿಯೆಯ ಮೂಲಕ ಮನುಷ್ಯನ ಚಿತ್ತದ ಮೇಲೆ ಹಿಡಿತ ಸಾಧಿಸಬಹುದಾಗಿದ್ದು, ಅಂತಃಚಕ್ಷುಗಳ ಮೂಲಕ ವಿಶ್ವದ ವಿದ್ಯಮಾನ ಗ್ರಹಿಸಲು ಸಾಧ್ಯವಾಗುತ್ತದೆ. ಇಂತಹ ಪಾರಮಾರ್ಥಿಕ ಜ್ಞಾನ ಮೂಲಕವೇ ಸಾಧು ಸಂತರು ಖಗೋಳ ವಿಜ್ಞಾನದ ಮೇಲೆ ಹಿಡಿತ ಸಾಧಿಸಲು ಯಶಸ್ವಿಯಾಗಿದ್ದರು ಎಂದು ಹೇಳಿದರು.

ವೈದ್ಯ ದೋರ್ಜಿ ಮಾತನಾಡಿ, 'ಚಿಕಿತ್ಸೆಗಿಂತ ರೋಗ ಮೂಲದ ಬಗ್ಗೆ ಅರಿವು ಹೊಂದಿರಬೇಕು. ಔಷಧವನ್ನು ನೀಡುವ ಜೊತೆಗೆ ರೋಗಿಯನ್ನು ಮಾನಸಿಕವಾಗಿ ಸದೃಢಗೊಳಿಸಬೇಕು. ಆಗ ಮಾತ್ರ ರೋಗವನ್ನು ಬುಡ ಸಮೇತ ಕಿತ್ತೊಗೆಯಬಹುದು' ಎಂದು ಹೇಳಿದರು.

ಜೀವನದ ಬೆಳವಣಿಗೆಯಲ್ಲಿ ಗುರುವಿನ ಕೃಪೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ವಕೀಲ ಎ.ಜಿ. ಕಾಮತ್ ಹೇಳಿದರು.

ವಿಹಂಗಮ ಯೋಗ ಪ್ರಕ್ರಿಯೆ ಪ್ರಾತ್ಯಕ್ಷಿಕೆ ಪ್ರದರ್ಶಿಸಲಾಯಿತು. ಮಾಜಿ ಸಚಿವ ನಾಗೇಶ್, ನೆ.ಲ. ನರೇಂದ್ರಬಾಬು, ಜಿ.ಎಸ್.ಟಿ. ಹೆಚ್ಚುವರಿ ಆಯುಕ್ತ ಶಿವಪ್ರಕಾಶ್, ಆಯೋಜಕ ಅನಿಲ್ ಕಾಬ್ರ ಇದ್ದರು.

SOBHA
PASSION AT WORK

ಶೋಭ ಲಿಮಿಟೆಡ್
CIN: L45201KA1995PLC018475
ನೋಂದಾಯಿತ ಕಛೇರಿ: 'ಶೋಭ,' ಸರ್ಜಾಪುರ–ಮಾರತಹಳ್ಳಿ ಹೊರವರ್ತುಲ ರಸ್ತೆ, ದೇವರಬೀಸನಹಳ್ಳಿ, ಬೆಳ್ಳಂದೂರ ಅಂಚೆ, ಬೆಂಗಳೂರು–560 103
ಫೋನ್: +91–80–49320000
ಇ–ಮೇಲ್: **investors@sobha.com** ವೆಬ್‌ಸೈಟ್: **www.sobha.com**

28ನೇ ವಾರ್ಷಿಕ ಮಹಾಸಭೆ, ಇ–ವೋಟಿಂಗ್ ಮಾಹಿತಿ ಮತ್ತು ಬುಕ್ ಕ್ಲೋಸರ್ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, 8ನೇ ಆಗಸ್ಟ್ 2023 ಬುಧವಾರದಂದು ಮಧ್ಯಾಹ್ನ 03.00 ಗಂಟೆಗೆ (ಐಎಸ್‌ಟಿ) ವಿಡಿಯೋ ಕಾನ್ಫರೆನ್ಸ್ (ವಿಸಿ) ಸೌಲಭ್ಯ/ ಇತರೆ ಆಡಿಯೋ ವಿಷುಯಲ್ (ಒಎವಿಎಂ) ಮುಖಾಂತರ ಕಂಪನಿಯ ಸದಸ್ಯರ 28ನೇ ವಾರ್ಷಿಕ ಮಹಾಸಭೆ (ಎಜಿಎಂ)ಯನ್ನು ಏರ್ಪಡಿಸಲಾಗಿದ್ದು ಸದರಿ ಸಭೆಯಲ್ಲಿ ಎಜಿಎಂ ಸೂಚನಾಪತ್ರದಲ್ಲಿ ಉಲ್ಲೇಖಿಸಲಾಗಿರುವ ವ್ಯಾವಹಾರಿಕ ಆಗುಹೋಗುಗಳನ್ನು ಚರ್ಚಿಸಲಾಗುತ್ತದೆ. ಭಾರತ ಸರ್ಕಾರದ ಕಂಪನಿ ವ್ಯವಹಾರಗಳ ಸಚಿವಾಲಯವು ದಿನಾಂಕ 28/12/2022 ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022 ಹಾಗೂ ದಿನಾಂಕ 5, ಜನವರಿ 2023 ರಂದು ಸೆಕ್ಯೂರಿಟೀಸ್ & ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') ಹೊರಡಿಸಿರುವ ಸುತ್ತೋಲೆ ಸಂಖ್ಯೆ **SEBI/HO/CFD/PoD-2/P/CIR/2023/4** ಗಳ ಪ್ರಕಾರ, ಕಂಪನಿಯಲ್ಲಿ ಅಥವಾ ರಜಿಸ್ಟ್ರಾರ್ & ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಮತ್ತು ಡೆಪಾಸಿಟರೀಸ್ ಇವರಲ್ಲಿ ಇಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಸದಸ್ಯರಿಗೆ, 15 ನೇ ಜುಲೈ, 2023 ರಂದು ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. (ಲಿಂಕ್ ಇನ್ ಟೈಂ) ಇವರಿಂದ ಎಲೆಕ್ಟ್ರಾನಿಕ್ ವಿಧಾನದಲ್ಲಿ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಒಳಗೊಂಡಿರುವ ವಾರ್ಷಿಕ ವರದಿ 2022–23 ಅನ್ನು ರವಾನಿಸಲಾಗುತ್ತಿದೆ. ಮೇಲೆ ತಿಳಿಸಿರುವ ಸುತ್ತೋಲೆಗಳ ಮೇರೆಗೆ ವಾರ್ಷಿಕ ಮಹಾಸಭೆಯ ಸೂಚನಾಪತ್ರ ಹಾಗೂ ವಾರ್ಷಿಕ ವರದಿಗಳ ಮುದ್ರಿತ ಪ್ರತಿಗಳನ್ನು ರವಾನಿಸುವುದು ಅಗತ್ಯವಾಗಿರುವುದಿಲ್ಲ.

ಕಂಪನಿಯ ಸಭೆಯಲ್ಲಿ ಚರ್ಚಿಸಲು ಉದ್ದೇಶಿಸಲಾಗಿರುವ ಸಾಮಾನ್ಯ ವ್ಯವಹಾರ ಮತ್ತು ವಿಶೇಷ ವ್ಯವಹಾರಗಳು ಹಾಗೂ ಇನ್ನಿತರ ವಿಷಯಗಳು ಸೇರಿದಂತೆ ಮಹಾಸಭೆಯ ಸೂಚನಾಪತ್ರವನ್ನು ಒಳಗೊಂಡಿರುವ ವಾರ್ಷಿಕ ವರದಿ 2022–23 ಕಂಪನಿಯ ವೆಬ್‌ಸೈಟ್, **www.sobha.com** ಹಾಗೂ ಸ್ಟಾಕ್ ಎಕ್ಸ್ ಚೇಂಜ್ ಗಳ ವೆಬ್ ಸೈಟ್ **www.bseindia.com www.nseindia.com** ಮತ್ತು ಲಿಂಕ್ ಇನ್ ಟೈಮ್ ವೆಬ್ ಸೈಟ್ **https://instavote.linkintime.co.in** ಗಳಲ್ಲಿ ಕೂಡಾ ಲಭ್ಯವಿರುತ್ತದೆ.

ಮಾನ್ಯ ಸದಸ್ಯರು ವಿಸಿ/ಒಎವಿಎಂ ಮುಖಾಂತರ ವಾರ್ಷಿಕ ಮಹಾಸಭೆಗೆ ಹಾಜರಾಗುವ ವಿವರಗಳಿಗಾಗಿ ಎಜಿಎಂ ಸೂಚನಾ ಪತ್ರವನ್ನು ಪರಿಶೀಲಿಸಬೇಕೆಂದು ಕೋರಲಾಗಿದೆ.

ರಿಮೋಟ್ ಇ–ವೋಟಿಂಗ್:

ಕಾಲಕಾಲಕ್ಕೆ ತಿದ್ದುಪಡಿಗೆ ಒಳಗಾಗಿರುವ ಕಂಪನಿಗಳ ಕಾಯ್ದೆ, 2013ರ ('ಕಂಪನಿಗಳ ಕಾಯ್ದೆ') ಸೆಕ್ಷನ್ 108 ಅನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಮೇರೆಗೆ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಇವರಿಂದ ಹೊರಡಿಸಲಾದ ಮಹಾಸಭೆಗಳು ಕುರಿತಾದ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ ('ಎಸ್‌ಎಸ್–2') ಮತ್ತು ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ & ಡಿಸ್ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಗಳು 2015ರ ನಿಯಮ 44ರ ಪ್ರಕಾರ ವಾರ್ಷಿಕ ಮಹಾಸಭೆಯಲ್ಲಿ ಚರ್ಚಿಸಲಾಗುವ ವ್ಯಾವಹಾರಿಕ ಆಗುಹೋಗುಗಳಿಗೆ ಸಂಬಂಧಿಸಿದಂತೆ, ಎಜಿಎಂಗೆ ಮುಂಚಿತವಾಗಿ ಹಾಗೂ ಎಜಿಎಂ ಅವಧಿಯಲ್ಲಿ ಕಂಪನಿಯು ತನ್ನ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸುತ್ತಲಿದೆ ಮತ್ತು ಸದರಿ ಉದ್ದೇಶಕಾಗಿ ಕಂಪನಿಯು ಎಲೆಕ್ಟ್ರಾನಿಕ್ ವಿಧಾನದಲ್ಲಿ ಮತದಾನ ಮಾಡುವ ಸೌಲಭ್ಯ ಒದಗಿಸಲಿಕ್ಕೆ ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. (ಇನ್ಸ್ಟಾ ವೋಟ್) ಇವರನ್ನು ನಿಯೋಜಿಸಿರುತ್ತದೆ.

ರಿಮೋಟ್ ಇ–ವೋಟಿಂಗ್‌ಗೆ ಸಂಬಂಧಿತ ವಿವರಗಳನ್ನು ಎಜಿಎಂ ಸೂಚನಾ ಪತ್ರದಲ್ಲಿ ನೀಡಲಾಗಿದೆ. ದಯವಿಟ್ಟು ಸದಸ್ಯರೆಲ್ಲ ಈ ಕೆಳಗಿನ ಅಂಶಗಳನ್ನು ಗಮನಿಸಬೇಕೆಂದು ವಿನಂತಿಸಲಾಗಿದೆ;

ಎ) ರಿಮೋಟ್ ಇ–ವೋಟಿಂಗ್ ಸೌಲಭ್ಯವು ರವಿವಾರ, ಆಗಸ್ಟ್ 5, 2023 ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಆರಂಭವಾಗುತ್ತದೆ ಮತ್ತು ಮಂಗಳವಾರ, ಆಗಸ್ಟ್ 7, 2023 ರಂದು ಸಂಜೆ 5 ಗಂಟೆಗೆ (ಐಎಸ್‌ಟಿ) ಅಂತ್ಯಗೊಳ್ಳುತ್ತದೆ. ತದನಂತರ ಲಿಂಕ್ ಇನ್ ಟೈಂ ಇವರಿಂದ ಇ–ವೋಟಿಂಗ್ ಮಾಡ್ಯೂಲ್‌ನ್ನು ಸ್ಥಗಿತಗೊಳಿಸಲಾಗುತ್ತದೆ. ಸದಸ್ಯರೊಬ್ಬರು ಒಂದು ನಿರ್ದಿಷ್ಟ ಠರಾವಿಗೆ ಮತದಾನ ಮಾಡಿದ ನಂತರ, ಅದನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಸಾಧ್ಯವಿರುವುದಿಲ್ಲ.

ಬಿ) ವಿಸಿ/ಒಎವಿಎಂ ಸೌಲಭ್ಯದ ಮುಖಾಂತರ ವಾರ್ಷಿಕ ಮಹಾಸಭೆಗೆ ಹಾಜರಾದ ಸದಸ್ಯರು ರಿಮೋಟ್ ಇ–ವೋಟಿಂಗ್ ಮೂಲಕ ಠರಾವುಗಳಿಗೆ ತಮ್ಮ ಮತ ಚಲಾಯಿಸದೇ ಇದ್ದಲ್ಲಿ ಮತ್ತು ಮತದಾನಕ್ಕೆ ಅನರ್ಹರಾಗಿರದ ಸದಸ್ಯರು, ವಾರ್ಷಿಕ ಮಹಾಸಭೆ ಅವಧಿಯಲ್ಲಿ ಇ–ವೋಟಿಂಗ್ ವಿಧಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ಸಿ) ಕಟ್–ಆಫ್ ದಿನಾಂಕ ಎಂದರೆ ಬುಧವಾರ ಆಗಸ್ಟ್ 01, 2023 ಕ್ಕೆ ಸದಸ್ಯರ ನೊಂದಣಿ ಪುಸ್ತಕ/ಫಲಾನುಭವಿ ಮಾಲಿಕರ ನೊಂದಣಿ ಪುಸ್ತಕದಲ್ಲಿ ಹೆಸರು ನಮೂದಾಗಿರುವ ವ್ಯಕ್ತಿಗಳು ಮಾತ್ರ ವಾರ್ಷಿಕ ಮಹಾಸಭೆಯ ಸೂಚನಾ ಪತ್ರದಲ್ಲಿ ನಮೂದಿಸಲಾದ ವಿಷಯಗಳಿಗೆ ಮತದಾನ ಮಾಡಲು ರಿಮೋಟ್ ಇ–ವೋಟಿಂಗ್/ಇ–ವೋಟಿಂಗ್ ಸೌಲಭ್ಯ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಡಿ) ರಿಮೋಟ್ ಇ–ವೋಟಿಂಗ್ ಮುಖಾಂತರ ತಮ್ಮ ಮತಗಳನ್ನು ಚಲಾಯಿಸಿರುವ ಸದಸ್ಯರು ಕೂಡ ವಾರ್ಷಿಕ ಮಹಾಸಭೆಗೆ ಹಾಜರಾಗಬಹುದು, ಆದರೆ ಪುನಃ ವಾರ್ಷಿಕ ಮಹಾಸಭೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

ಇ) ಕಂಪನಿಯ ಷೇರುಗಳನ್ನು ಹೊಂದಿರುವ ಮತ್ತು ಪ್ರಕಟಣೆಯು ರವಾನೆಗೊಂಡ ಬಳಿಕ ಕಂಪನಿಯ ಸದಸ್ಯನಾಗುವ ಮತ್ತು ಕಟ್–ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು **instameet@linkintime.co.in / enotices@linkintime.co.in** ವಿಳಾಸಕ್ಕೆ ಮನವಿ ಸಲ್ಲಿಸುವ ಮೂಲಕ ಅಥವಾ ಲಿಂಕ್ ಇನ್ ಟೈಂ ನೀಡಿರುವ ಸಹಾಯವಾಣಿ 022–49186000 / 022–49186175 ಸಂಖ್ಯೆಗೆ ಕರೆ ಮಾಡಿ ತಮ್ಮ ಲಾಗಿನ್–ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬಹುದು. ಕಟ್–ಆಫ್ ದಿನಾಂಕದಂದು ಸದಸ್ಯ ಆಗಿಲ್ಲದಿರುವ ವ್ಯಕ್ತಿಯು, ಸದರಿ ಎಜಿಎಂ ಸೂಚನಾ ಪತ್ರವನ್ನು ಮಾಹಿತಿಗಾಗಿ ಮಾತ್ರ ಎಂದು ಭಾವಿಸತಕ್ಕದ್ದು.

ಷೇರುದಾರರು ತಮ್ಮ ಇ–ಮೇಲ್ ವಿಳಾಸ ಮತ್ತು ಬ್ಯಾಂಕ್ ವಿವರಗಳನ್ನು ನೋಂದಣಿ ಮಾಡಿಕೊಳ್ಳುವ ವಿಧಾನ:

ಎ) ಡಿಮ್ಯಾಟ್ ಷೇರುದಾರರ ತಾತ್ಕಾಲಿಕ ನೋಂದಣಿ: ಡಿಮ್ಯಾಟ್ ಮಾದರಿಯಲ್ಲಿ ಕಂಪನಿಯ ಇಕ್ವಿಟಿ ಷೇರುಗಳನ್ನು ಹೊಂದಿರುವ ಕಂಪನಿ ಸದಸ್ಯರು ಮತ್ತು ತಮ್ಮ ಇ–ಮೇಲ್ ವಿಳಾಸಗಳನ್ನು ನೊಂದಣಿ ಮಾಡಿಸಿಕೊಂಡಿರದ ಸದಸ್ಯರು ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. ಇವರ **www.linkintime.co.in** ವೆಬ್‌ಸೈಟ್‌ನಲ್ಲಿರುವ ಇನ್ವೆಸ್ಟರ್ ಸರ್ವೀಸಸ್ ಟ್ಯಾಬ್ ಕ್ಲಿಕ್ ಮಾಡಿ, ಇ–ಮೇಲ್ ನೋಂದಣಿ ತಲೆಬರಹದಡಿ ಇರುವ **https://linkintime.co.in/emailreg/email_register.html** ಲಿಂಕ್‌ಗೆ ಭೇಟಿ ನೀಡಿ, ಅದರಲ್ಲಿ ನೀಡಲಾಗಿರುವ ನೋಂದಣಿ ಮಾರ್ಗಸೂಚಿಗಳ ಪ್ರಕಾರ ಮುಂದುವರೆದು, ತಾತ್ಕಾಲಿಕವಾಗಿ ತಮ್ಮ ಇ–ಮೇಲ್ ವಿಳಾಸವನ್ನು ನೊಂದಾಯಿಸಿಕೊಳ್ಳಬಹುದು. ಸದಸ್ಯರು ತಮ್ಮ ಹೆಸರು, ಡಿಪಿಐಡಿ, ಕ್ಲೈಂಟ್ ಐಡಿ, ಪಾನ್, ಮೊಬೈಲ್ ನಂಬರ್ ಮತ್ತು ಇ–ಮೇಲ್ ಐಡಿ ವಿವರಗಳನ್ನು ನೀಡಬೇಕೆಂದು ಕೋರಲಾಗಿದೆ. ಯಾವುದೇ ವಿಚಾರಣೆ ಇದ್ದಲ್ಲಿ, ಸದಸ್ಯರು ತಮ್ಮ ವಿಚಾರಣೆಯನ್ನು ಆರ್‌ಟಿಎ ಇವರ **rnt.helpdesk@linkintime.co.in** ಇ–ಮೇಲ್ ವಿಳಾಸಕ್ಕೆ ಮೇಲ್ ರವಾನಿಸುವ ಮೂಲಕ ಸ್ಪಷ್ಟೀಕರಣ ಪಡೆದುಕೊಳ್ಳಬಹುದು. ಷೇರುದಾರರು ತಮ್ಮ ವಿವರಗಳನ್ನು ಸಲ್ಲಿಸಿದ ನಂತರ, ಅವರಿಗೆ ಒಂದು ಒಟಿಪಿ ರವಾನೆಯಾಗುತ್ತದೆ ಮತ್ತು ಸದರಿ ಒಟಿಪಿಯನ್ನು ಲಿಂಕ್‌ನಲ್ಲಿ ನಮೂದಿಸಿ ಪರಿಶೀಲನೆಯನ್ನು ಪೂರ್ತಿಗೊಳಿಸಬೇಕು.

ಬಿ) ಡಿಮ್ಯಾಟ್ ಷೇರುದಾರರ ಶಾಶ್ವತ ನೋಂದಣಿ: ಡಿಮ್ಯಾಟ್ ಮಾದರಿಯಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಸದಸ್ಯರು, ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಇವರಿಂದ ನಿಗದಿಪಡಿಸಲಾಗಿರುವ ಪ್ರಕ್ರಿಯೆಗಳ ಪ್ರಕಾರ ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಇವರಲ್ಲಿ ತಮ್ಮ ಡಿಮ್ಯಾಟ್ ಷೇರುದಾರಿಕೆಯನ್ನು ನವೀಕರಿಸಿಕೊಳ್ಳಬೇಕೆಂದು ಕೋರಲಾಗಿದೆ.

ಸಿ) ಭೌತಿಕ ಷೇರುಗಳನ್ನು ಹೊಂದಿರುವ ಷೇರುದಾರರ ಇ–ಮೇಲ್ ಐಡಿ ನೋಂದಣಿ: ಕಂಪನಿಯ ಇಕ್ವಿಟಿ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಕಂಪನಿಯ ಸದಸ್ಯರು ಮತ್ತು ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು, ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. ಇವರ **www.linkintime.co.in** ವೆಬ್‌ಸೈಟ್‌ನಲ್ಲಿರುವ ಇನ್ವೆಸ್ಟರ್ ಸರ್ವೀಸಸ್ ಟ್ಯಾಬ್ ಕ್ಲಿಕ್ ಮಾಡಿ, ಇ–ಮೇಲ್/ಬ್ಯಾಂಕ್ ನೋಂದಣಿ ತಲೆಬರಹದಡಿ ಇರುವ **https://linkintime.co.in/emailreg/email_register.html** ಲಿಂಕ್‌ಗೆ ಭೇಟಿ ನೀಡಿ, ಅದರಲ್ಲಿ ನೀಡಲಾಗಿರುವ ನೋಂದಣಿ ಮಾರ್ಗಸೂಚಿಗಳ ಪ್ರಕಾರ ನೊಂದಾಯಿಸಿಕೊಳ್ಳಬಹುದು. ಸದಸ್ಯರು ತಮ್ಮ ಹೆಸರು, ಫೋಲಿಯೊ ನಂಬರ್, ಸರ್ಟಿಫಿಕೇಟ್ ನಂಬರ್, ಪಾನ್, ಮೊಬೈಲ್ ನಂಬರ್ ಮತ್ತು ಇ–ಮೇಲ್ ಐಡಿ ವಿವರಗಳನ್ನು ನೀಡಬೇಕು. ಹಾಗೂ ತಮ್ಮ ಷೇರು ಪ್ರಮಾಣ ಪತ್ರದ ಭಾವಪ್ರತಿಯನ್ನು ಪಿಡಿಎಫ್ ಅಥವಾ ಜೆಪಿಇಜಿ ಫಾರ್ಮಾಟ್‌ನಲ್ಲಿ (ಗರಿಷ್ಠ 1ಎಂಬಿ) ಅಪ್‌ಲೋಡ್ ಮಾಡಬೇಕೆಂದು ಕೋರಲಾಗಿದೆ. ಯಾವುದೇ ವಿಚಾರಣೆ ಇದ್ದಲ್ಲಿ, ಸದಸ್ಯರು ತಮ್ಮ ವಿಚಾರಣೆಯನ್ನು ಕೋರಿ ಆರ್‌ಟಿಎ ಇವರ **rnt.helpdesk@linkintime.co.in** ವಿಳಾಸಕ್ಕೆ ಮೇಲ್ ರವಾನಿಸುವ ಮೂಲಕ ಸ್ಪಷ್ಟೀಕರಣ ಪಡೆದುಕೊಳ್ಳಬಹುದು.

ಡಿ) ಭೌತಿಕ ಷೇರುಗಳನ್ನು ಹೊಂದಿರುವ ಷೇರುದಾರರ ಬ್ಯಾಂಕ್ ವಿವರಗಳ ನೋಂದಣಿ: ಭೌತಿಕ ರೂಪದಲ್ಲಿ ಕಂಪನಿಯ ಇಕ್ವಿಟಿ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ಮತ್ತು ತಮ್ಮ ಬ್ಯಾಂಕ್ ವಿವರಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು, ಲಿಂಕ್ ಇನ್ ಟೈಮ್ ಇಂಡಿಯಾ ಪ್ರೈ, ಲಿ. ಇವರ **www.linkintime.co.in** ವೆಬ್‌ಸೈಟ್‌ನಲ್ಲಿರುವ ಇನ್ವೆಸ್ಟರ್ ಸರ್ವೀಸಸ್ ಟ್ಯಾಬ್ ಕ್ಲಿಕ್ ಮಾಡಿ, ಇ–ಮೇಲ್/ಬ್ಯಾಂಕ್ ನೋಂದಣಿ ತಲೆಬರಹದಲ್ಲಿರುವ **https://linkintime.co.in/emailreg/email_register.html** ಲಿಂಕ್‌ಗೆ ಭೇಟಿ ನೀಡಿ, ಅದರಲ್ಲಿ ನೀಡಲಾಗಿರುವ ನೋಂದಣಿ ಮಾರ್ಗಸೂಚಿಗಳ ಪ್ರಕಾರ ನೊಂದಾಯಿಸಿಕೊಳ್ಳಬಹುದು. ಸದಸ್ಯರು ತಮ್ಮ ಹೆಸರು, ಫೋಲಿಯೊ ನಂಬರ್, ಸರ್ಟಿಫಿಕೇಟ್ ನಂಬರ್, ಪಾನ್, ಇ–ಮೇಲ್ ಐಡಿ ಜೊತೆಗೆ ಬ್ಯಾಂಕ್ ಹೆಸರು ಮತ್ತು ಬ್ರ್ಯಾಂಚ್ ಹೆಸರು ಹೊಂದಿರುವ ಷೇರುದಾರರ ಮೊದಲ ಹೆಸರು ಮುದ್ರಣಗೊಂಡಿರುವ ಒಂದು ಚೆಕ್ ಹಾಳೆಯ ಪ್ರತಿ, ಖಾತೆಯ ಮಾದರಿ, ಬ್ಯಾಂಕ್ ಅಕೌಂಟ್ ನಂಬರ್, ಎಂಐಸಿಆರ್ ಹಾಗೂ ಐಎಫ್‌ಎಸ್‌ಸಿ ಕೋಡ್ ವಿವರಗಳನ್ನು ಪಿಡಿಎಫ್ ಅಥವಾ ಜೆಪಿಇಜಿ ಮಾದರಿಯಲ್ಲಿ ನೀಡಬೇಕೆಂದು ಕೋರಲಾಗಿದೆ. ಯಾವುದೇ ವಿಚಾರಣೆ ಇದ್ದಲ್ಲಿ, ಸದಸ್ಯರು ತಮ್ಮ ವಿಚಾರಣೆಯನ್ನು ಕೋರಿ ಆರ್‌ಟಿಎ ಇವರ **rnt.helpdesk@linkintime.co.in** ವಿಳಾಸಕ್ಕೆ ಮೇಲ್ ರವಾನಿಸುವ ಮೂಲಕ ಸ್ಪಷ್ಟೀಕರಣ ಪಡೆದುಕೊಳ್ಳಬಹುದು. ಷೇರುದಾರರು ತಮ್ಮ ವಿವರಗಳನ್ನು ಸಲ್ಲಿಸಿದ ನಂತರ, ಅವರಿಗೆ ಒಂದು ಒಟಿಪಿ ರವಾನೆಯಾಗುತ್ತದೆ ಮತ್ತು ಸದರಿ ಒಟಿಪಿಯನ್ನು ಲಿಂಕ್‌ನಲ್ಲಿ ನಮೂದಿಸಿ ಪರಿಶೀಲನೆಯನ್ನು ಪೂರ್ತಿಗೊಳಿಸಬೇಕು.

ಒಂದು ವೇಳೆ, ರಿಮೋಟ್ ಇ–ವೋಟಿಂಗ್‌ಗೆ ಸಂಬಂಧಿಸಿದಂತೆ ಸದಸ್ಯರಿಗೆ ಯಾವುದೇ ರೀತಿಯ ವಿಚಾರಣೆಗಳು/ದೂರು ದುಮ್ಮಾನಗಳಿದ್ದಲ್ಲಿ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಪದೇ ಪದೇ ಕೇಳಲಾಗುವ ಪ್ರಶ್ನೆಗಳು ಮತ್ತು ಇನ್ಸ್ಟಾ ವೋಟ್ ಇ–ವೋಟಿಂಗ್ ಮ್ಯಾನುಯಲ್ ಪರಿಶೀಲಿಸಬಹುದು ಅಥವಾ **enotices@linkintime.co.in** ವಿಳಾಸಕ್ಕೆ ಮನವಿ ಸಲ್ಲಿಸುವ ಮೂಲಕ ಅಥವಾ ಲಿಂಕ್ ಇನ್ ಟೈಂ ನೀಡಿರುವ ಸಹಾಯವಾಣಿ 022–49186000/6175 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು.

ದಾಖಲಾತಿ ದಿನಾಂಕ ಹಾಗೂ ಬುಕ್ ಕ್ಲೋಸರ್ ಮತ್ತು ಡಿವಿಡೆಂಡ್:

ಶುಕ್ರವಾರ, ಜುಲೈ 28, 2023 ನ್ನು ದಾಖಲಾತಿ ದಿನವಾಗಿ ನಿಶ್ಚಯಿಸಲಾಗಿದೆ ಮತ್ತು ಶನಿವಾರ, ಜುಲೈ 29, 2023 ರಂದು ಕಂಪನಿಯ ಸದಸ್ಯರ ನೊಂದಣಿ ಪುಸ್ತಕ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಮುಚ್ಚಲಾಗುತ್ತದೆ. ರೂ 10/– ಮೌಲ್ಯದ ಪ್ರತಿ ಇಕ್ವಿಟಿ ಷೇರ್‌ಗೆ ರೂ. 3.00/– ಅಂತಿಮ ಡಿವಿಡೆಂಡ್‌ನ್ನು ನಿರ್ದೇಶಕರ ಮಂಡಳಿಯು ಶಿಫಾರಸ್ಸು ಮಾಡಿರುತ್ತದೆ, ಒಂದು ವೇಳೆ ವಾರ್ಷಿಕ ಮಹಾಸಭೆಯಲ್ಲಿ ಕಂಪನಿಯ ಸದಸ್ಯರು ಇದನ್ನು ಅನುಮೋದಿಸಿದಲ್ಲಿ, ಸದರಿ ಮೊತ್ತವನ್ನು ಎಜಿಎಂ ದಿನಾಂಕದಿಂದ 5 ದಿನಗಳೊಳಗೆ ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ ಮತ್ತು ಕಂಪನಿಗಳ ಕಾಯ್ದೆ, 2013 ರ ನಿಯಮಗಳನ್ವಯ ಸದರಿ ಮೊತ್ತವನ್ನು ಷೇರುದಾರರಿಗೆ ಪಾವತಿಸಲಾಗುತ್ತದೆ. ಒಂದು ವೇಳೆ ಕಂಪನಿಯು ಡಿವಿಡೆಂಡ್‌ನ್ನು ಯಾವುದೇ ಸದಸ್ಯರ ಬ್ಯಾಂಕ್ ಖಾತೆಗೆ ಎಲೆಕ್ಟ್ರಾನಿಕ್ ಅಥವಾ ಇನ್ನಾವುದೇ ವಿಧಾನದಲ್ಲಿ ಪಾವತಿಸಲು ಸಾಧ್ಯವಾಗದಿದ್ದಲ್ಲಿ, ಸದಸ್ಯರು ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಿರದಿದ್ದಲ್ಲಿ, ಅಂತಹ ಸದಸ್ಯರಿಗೆ ಅಂಚೆ ಸೇವೆಗಳ ಅಥವಾ ಕೊರಿಯರ್ ಸೇವೆಗಳ ಮೂಲಕ ತ್ವರಿತವಾಗಿ ಕಂಪನಿಯಿಂದ ಡಿವಿಡೆಂಡ್ ವಾರಂಟ್/ಚೆಕ್ ರವಾನಿಸಲಾಗುತ್ತದೆ.

ವಾರ್ಷಿಕ ಮಹಾಸಭೆಯಲ್ಲಿ ಮಾತನಾಡುವ ಅವಕಾಶಕ್ಕಾಗಿ ನೊಂದಣಿಯ ಕುರಿತು:

ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ತಮ್ಮ ವಿಚಾರಗಳನ್ನು ವಿಷದಪಡಿಸಲು ಇಚ್ಛಿಸುವ ಅಥವಾ ಪ್ರಶ್ನೆಗಳನ್ನು ಕೇಳಬಯಸುವ ಸದಸ್ಯರು, ಆಗಸ್ಟ್ 01, 2023 (ಬೆಳಿಗ್ಗೆ 9:00 ಗಂಟೆ ಐಎಸ್‌ಟಿ) ಇಂದ ಆಗಸ್ಟ್ 5, 2023 (ಸಂಜೆ 5:00 ಗಂಟೆ ಐಎಸ್‌ಟಿ) ವರೆಗೆ ತಮ್ಮ ನೊಂದಾಯಿತ ಇ–ಮೇಲ್ ವಿಳಾಸದ ಮುಖಾಂತರ ತಮ್ಮ ಹೆಸರು, ಡಿಪಿಐಡಿ ಮತ್ತು ಕ್ಲೈಂಟ್ ಐಡಿ/ಫೋಲಿಯೊ ನಂಬರ್, ಪಾನ್, ಮೊಬೈಲ್ ನಂಬರ್ ನಮೂದಿಸಿ ತಮ್ಮನ್ನು ತಾವು ಸ್ಪೀಕರ್ ಎಂದು ನೊಂದಣಿ ಮಾಡಿಕೊಳ್ಳಲು **investors@sobha.com** ವಿಳಾಸಕ್ಕೆ ಒಂದು ಮನವಿಯನ್ನು ಸಲ್ಲಿಸಬೇಕು. ತಮ್ಮನ್ನು ತಾವು ಸ್ಪೀಕರ್ ಎಂದು ನೊಂದಣಿ ಮಾಡಿಕೊಂಡಿರುವ ಸದಸ್ಯರಿಗೆ ಮಾತ್ರ ಎಜಿಎಂ ಸಂದರ್ಭದಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು/ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಗುತ್ತದೆ. ಕಂಪನಿಯ, ಮಹಾಸಭೆಯಲ್ಲಿ ಕಾಲಾವಕಾಶದ ಲಭ್ಯತೆಯ ಆಧಾರವನ್ನು ಗಮನದಲ್ಲಿಟ್ಟುಕೊಂಡು, ಸ್ಪೀಕರ್‌ಗಳ ಸಂಖ್ಯೆಯನ್ನು ಸೀಮಿತಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಹೂಡಿಕೆದಾರರ ವಿಚಾರಣೆ/ ದೂರು/ದುಮ್ಮಾನಗಳನ್ನು **investors@sobha.com** ವಿಳಾಸಕ್ಕೆ ಸಲ್ಲಿಸಬಹುದು.

ದಿನಾಂಕ: ಜುಲೈ 15, 2023
ಸ್ಥಳ: ಬೆಂಗಳೂರು

ಶೋಭ ಲಿಮಿಟೆಡ್ ಪರವಾಗಿ,
ವಿಘ್ನೇಶ್ವರ ಜಿ. ಭಟ್ಟ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾಧಿಕಾರಿ

Proclamation of sale (0.21.r.66)
Form No.29 (Civil)

Spot Sale 05/08/2023
Court Sale 10/08/2023

IN THE COURT OF LXXXVIII ADDITIONAL CITY CIVIL AND SESSIONS JUDGE (COMMERCIAL) AT BANGALORE (CCH 89)

Com. O.S. No. 7301/2014
IN
COM. EXE. No. 353 OF 2022

BETWEEN: Sri. N. Madhusudhana Reddy, S/o. late N. Dasaradha Rami Reddy, Proprietor, M/s. Sapna Deepam Developers, Having office at Windsor Castle, (Earlier Known as Sapna Mahal), No. 125, Cunningham Road, 50/1, Palace Road, Bangalore- 560 001. **...DECREE HOLDER**

AND:
1. **Mrs. TAMANNA,** D/o. Shyam Mangaram Ganglani, Aged about 44 years,
2. **Mrs. SAPNA,** D/o. Shyam Mangaram Ganglani, Aged about 42 years,
3. **Mr. SHYAM MANGARAM GANGLANI,** S/o. late M.N. Ganglani, Aged about 70 years,
4. **Smt. GEETHA GANGLANI,** W/o. Shyam Mangaram Ganglani, Aged 63 years,
5. **Mr. SHYAIR GANGLANI,** S/o. Shyam Mangaram Ganglani, Aged about 31 years,
6. **Mr. SHAIRE GANGLANI,** D/o. Shyam Mangaram Ganglani, Aged 31 years,

All residing at No. 101, 1st Floor, Prestige Exotica Apartments, Cunningham Crescent Road, Bangalore- 560 001. **...JUDGEMENT DEBTOR**

Notice is hereby given that under Rule 64 of Order XXI of the Code of Civil Procedure in Commercial O.S.No.7301/2014 and order has been passed by this Hon'ble Court for recovery of Rs.20,90,41,566/- at 18% p.a decided by this Executing Court sale of the attached property mentioned in schedule annexed to in satisfaction of the claim of Decree Holder was Plaintiff and Judgement Debtors were Defendants in the suit(i) mentioned in the margin amounting with was Defendant **Rs.50,65,93,132/-** cost and interest up to date of sale to a sum of **Rs. 59,77,79,895/-**.

The sale will be by public auction, and the property will be put up for sale in the lots specified in the schedule. The sale will be of the property of the judgment-debtors above named as mentioned in the schedule below, and the liabilities and claims attaching to the said property, so far as they have been ascertained are those specified in the schedule against each lot.

In the absence of any order of postponement, the sale will be held at spot on 05.08.2023 and court sale on 10.08.2023 at 11 Am in the court premises of Commercial Court, BSNL Building Bangalore-560 001. In the event, however, of the debt above specified and of the cost of the sale being tendered or paid before the knocking down of any lot, the sale will be stopped.

At the sale, the public generally are invited to bid either personally or by duly authorised agent. No bid by, or on behalf of, the judgment creditors above mentioned however, will be accepted, nor will any sale to them be valid without the express permission of the court previously given. The following are the further.

SCHEDULE PROPERTY

Number of lot	Description of property to be sold, with the name of each owner where there are more judgment debtors than one	The revenue assessed upon the estate or part of the estate, if the property to be sold is an interest in an estate or a part of an estate paying revenue to Government	Details of any encumbrances to which the property is liable	Claims, if any, have been put forward to the property, and any other known particulars bearing on its nature and value	The value which of the property as stated by the decree holder	The value which of the property as stated by the Judgement debtor
3	**1. Mrs. TAMANNA,** D/o. Shyam Mangaram Ganglani, Aged about 44 years **2. Mrs. SAPNA,** D/o. Shyam Mangaram Ganglani, Aged about 42 years	**Composite Property / Suit A Schedule Property** All that is piece and parcel of the property Windsor Castle apartment bearing No.50/1, New No.125, presently bearing BBMP Katha No.78-118-50/1, measuring East to West 150 feet, North to South 120 feet, and in all measuring East to West 150 feet, North to South 120 feet, and in all measuring 18,000 sq ft., situated in Cunningham Road (Palace Road), Bangalore-560 052 and bounded on the: East by: Private Property bearing No.126, West by: Private Property bearing No.50/10 Legacy Mycon DUV Apartments, North by: Cunningham Road, South by: Property No.50/A/3, Palace Road. **Item No. 1 :** Apartment bearing Flat No.001 located on the first floor measuring 4870 sq.ft (Khata No.78-118-50/1) Super built-up area situated in the Suit A Schedule Property, together with 2 covered mechanical car parking in the basement 1 open parking on the ramp towards the basement and a proportionate share in the land 1635 sq feet and the common areas such a passages, lifts lobbies, stairway, staircase contained building constructed in the Suit A Schedule Property. **Item No. 2 :** Apartment bearing flat No.201 on the third floor measuring 5270 sq.ft (Khata No.78-118-50/1-2) super built-up area situated in the Suit A Schedule property, together with 2 covered mechanical car parking in the basement, 1 open parking on the ramp towards the basement and a proportionate share in the land 1635 sqft and the common areas such as passages, lifts, lobbies, stairway, staircase contained building constructed in the Suit A Schedule Property. **Item No. 3** Apartment bearing Flat No.601 on the seventh floor measuring 5270 sq ft. (Khata No.78-118-50/1-6) super built-up area situated in the Suit A Schedule property, together with 2 covered mechanical car parking in the basement, 1 open parking on the ramp towards the basement and a proportionate share in the land 1635 sqft and the common areas such as passages, lifts, lobbies, stairway, staircase contained building constructed in the Suit A Schedule Property.				**Rs. 59,77,79,895/-**

CONDITIONS OF SALE : -

1. The particulars specified in the schedule below have been stated to the best of the information of the court, but the court will not be answerable for any error, mis-statement or omission in this proclamation.
2. The amount by which the biddings are to be increased shall be determined by the officer conducting the sale. In the event of any dispute arising as to the amount of bid or as to the bidder the lot shall at once be again put up to auction.
3. The highest bidder shall be declared to be the purchaser of any lot, provided always that he is legally qualified to bid, and provided that it shall be in the discretion of the court or officer holding the sale to decline acceptance of the highest bid when the price ordered appears so clearly inadequate as to make it advisable to do so.
4. For reasons recorded, it shall be in the discretion of the officer conducting the sale to adjourn it subject always to the provisions of Rule 69 order XXI.
5. In the case of moveable property, the price of each lot shall paid at the time of sale or as soon after as the officer holding the sale directs and in default of payment the property shall forthwith be again put up and resold.
6. In the case of immoveable property, the person declared to be the purchaser shall pay immediately after such declaration a deposit of 25 per cent, on the amount of his purchase money to the office conducting the sale, and in default of such deposit the property shall forthwith be put up again and resold.
7. The full amount of the purchase money shall be paid by the purchaser before the court closes on the fifteenth day after the sale of the property exclusive of such day, or if the fifteenth day be Sunday or other holiday, then the on first office day after the fifteenth day.
8. In default of payment of this balance of purchase money within the period allowed, the property shall be resold after the issue of a fresh notification of sale. The deposit after defraying the expenses of the sale may, if the court thinks fit be forfeited to Government and the defaulting purchaser shall forfeit all claim to the property or to any part of the sum of which it may be subsequently sold.

Given under my hand & seal of the court, this 13th day of July 2023.

Judge
Sheristedar, City Civil Court, Bengaluru.

||ಭಾರತೀಯ ವಿದ್ಯಾರಂಗದ ದಿಗ್ಗಜನಿಗೆ||

ಭಾವಪೂರ್ಣ ಶ್ರದ್ಧಾಂಜಲಿ



ಕೀ|| ಶೇ|| ಡಾ|| ಬಿ. ಎಸ್. ರಾವ್

ಸ್ಥಾಪಕರು ಮತ್ತು ಅಧ್ಯಕ್ಷರು ಶ್ರೀಚೈತನ್ಯ ಶಿಕ್ಷಣ ಸಂಸ್ಥೆಗಳು

ಜನನ: 15-08-1947

ಮಾನವೀಯತೆಯ ಹರಿಕಾರ ಉತ್ಕೃಷ್ಟ ವ್ಯಕ್ತಿತ್ವ ಉಳ್ಳ ಅವತಾರ ಪುರುಷ ಸ್ಟೆತಸ್ಕೋಪ್ ಹಿಡಿದ ಕೈಯಲ್ಲಿ ಲೇಖನಿ ಹಿಡಿದು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ' ಉಂಟು ಮಾಡಿದ ಸಾಧಕ. ಆಧುನಿಕ ಶಿಕ್ಷಣದಿಂದ ಎಲ್ಲವೂ ಸಾಧ್ಯ ಎಂದು ನಂಬಿ ವಿದ್ಯಾರ್ಥಿಗಳ ಎದೆಯಲ್ಲಿ ಅಕ್ಷರ ಬಿತ್ತುವ ಉತ್ತಮ ಶಿಕ್ಷಣ ನೀಡುವ ದೃಢಸಂಕಲ್ಪದಿಂದ ಶಿಕ್ಷಣ ಕ್ಷೇತ್ರದಲ್ಲಿ ಹಗಲಿರುಳು ದುಡಿದು ರಾಷ್ಟ್ರೀಯ, ಅಂತರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಹಳ್ಳಿಹಳ್ಳಿಗು ತಲುಪಿಸಿ, ಲಕ್ಷಾಂತರ ವಿದ್ಯಾರ್ಥಿಗಳ ಬಾಳಿನಲ್ಲಿ ಆಶಾಕಿರಣದ ದೀಪ ಬೆಳಗಿದ ಮಹಾನ್ ವ್ಯಕ್ತಿ. ಐಐಟಿ, ಮೆಡಿಕಲ್ ಕ್ಷೇತ್ರದ ರ್‍ಯಾಂಕ್‌ಗಳಲ್ಲಿ ವರ್ಷದಿಂದ ವರ್ಷಕ್ಕೆ ಉತ್ತಮ ಫಲಿತಾಂಶ ನೀಡಿ ಲಕ್ಷಾಂತರ ವಿದ್ಯಾರ್ಥಿಗಳು ಕಂಡ ಇಂಜಿನಿಯರ್ ಮತ್ತು ವೈದ್ಯರಾಗುವ ಕನಸನ್ನು ನನಸು ಮಾಡಿ ದೇಶಕ್ಕೆ ಕೊಡುಗೆಯಾಗಿ ನೀಡಿದ ಶಿಕ್ಷಣ ತಜ್ಞ. ಪೋಷಕರ ಮನಸ್ಸನ್ನು ಗೆದ್ದು ವಿದ್ಯಾರ್ಥಿಗಳ ಏಳಿಗೆಗೆ ದುಡಿದ ಕಾಯಕಯೋಗಿ. ಅಕ್ಷರ, ಅರಿವು ಉದ್ಯೋಗ ನೀಡಿ ಸಾವಿರಾರು ಶಿಕ್ಷಕರ ಕುಟುಂಬಗಳ ರಕ್ಷಿಸಿದ ಅನ್ನದಾತ. ವಿದ್ಯಾರ್ಥಿಗಳಿಗೆ ಆಧಾರವಾಗಿ ಕೊನೆ ಉಸಿರಿರುವವರೆಗೂ ವಿದ್ಯಾರ್ಥಿಗಳ ನಡುವೆ ಜೀವಿಸಿ ಅವರ ಅಭಿವೃದ್ಧಿಗೋಸ್ಕರ ಶ್ರಮಿಸಿದ ಚಿರಂಜೀವಿ. ಎಲ್ಲರ ಹೃದಯದಲ್ಲಿ ಅಚ್ಚರಿಯದ ಸ್ಥಾನ ಪಡೆದು ಶಿಕ್ಷಣ ಕ್ಷೇತ್ರಕ್ಕೆ ಆದರ್ಶಪ್ರಾಯರಾಗಿ ಸಾಧನೆ ಮಾಡಿದ ಮಹಾಪುರುಷನಿಗೆ ಕಣ್ಣೀರಿನ ವಿದಾಯ.

ಇಂತಿ ದುಃಖತಪ್ತರು

ಕುಟುಂಬ ಸದಸ್ಯರು, ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿ.

ಶ್ರೀಚೈತನ್ಯ ಟೆಕ್ನೋ ಸ್ಕೂಲ್ಸ್ ಹಾಗೂ ಪಿಯು ಕಾಲೇಜುಗಳು-ಕರ್ನಾಟಕ

ವ್ಯಕ್ತಿ ಅಪಹರಿಸಿದ್ದ 7 ಮಂದಿ ಬಂಧನ

ಬೆಂಗಳೂರು: ₹ 30 ಲಕ್ಷ ಸಾಲ ವಾಪಸ್ ನೀಡಲು ಸತಾಯಿಸುತ್ತಿದ್ದ ಕಾರಣಕ್ಕೆ ವ್ಯಕ್ತಿಗಳಿಬ್ಬರನ್ನು ಅಪಹರಿಸಿ ಅಕ್ರಮ ಬಂಧನದಲ್ಲಿಟ್ಟಿದ್ದ ಏಳು ಮಂದಿ ಆರೋಪಿಗಳನ್ನು ಎಚ್.ಎಸ್.ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಗಳಾದ ನಂದನ್ ಹಾಗೂ ಕಾರ್ತಿಕ್ ಅವರನ್ನು ಶುಕ್ರವಾರ ರಾತ್ರಿ ಅಪಹರಣ ಮಾಡಲಾಗಿತ್ತು. ಇದರ ವಿಡಿಯೊವನ್ನು ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಟ್ಟಿದ್ದರು. ತ್ವರಿತ ಕಾರ್ಯಾಚರಣೆ ನಡೆಸಿ ಕೆಲವೇ ಗಂಟೆಗಳಲ್ಲಿ ಇಬ್ಬರನ್ನೂ ರಕ್ಷಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘₹30 ಲಕ್ಷ ಸಾಲ ಪಡೆದಿದ್ದ ದೂರುದಾರ, ವಾಪಸು ಕೊಟ್ಟಿರಲಿಲ್ಲ. ಇದೇ ಕಾರಣಕ್ಕೆ ಅಪಹರಣ ಮಾಡಲಾಗಿತ್ತು’ ಎಂದರು.

ಪೆಡ್ಲರ್ ನೀಡಿದ್ದ ಸುಳಿವು • ₹12 ಕೋಟಿ ಮೌಲ್ಯದ ಡ್ರಗ್ಸ್ ಸಾಗಿಸುತ್ತಿದ್ದ ಮೂವರ ಸೆರೆ

ವಾಹನದ ‘ರಹಸ್ಯ ಪೆಟ್ಟಿಗೆ’ಯಲ್ಲಿ ಗಾಂಜಾ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸರಕು ಸಾಗಣೆ ವಾಹನದ ಚಾರ್ಸಿ ಕಂಪಾರ್ಟ್‌ಮೆಂಟ್ ಕೆಳಗೆ ರಹಸ್ಯ ಪೆಟ್ಟಿಗೆ ನಿರ್ಮಿಸಿ ಗಾಂಜಾ ಸಾಗಿಸುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ರಾಜಸ್ಥಾನದ ಚಂದ್ರಬಾನು ಬಿಸ್ನೋಯಿ, ಆಂಧ್ರಪ್ರದೇಶದ ಲಕ್ಷ್ಮಿಮೋಹನ್ ದಾಸ್ ಹಾಗೂ ಸಲ್ಮಾನ್ ಬಂಧಿತರು. ಚಾಮರಾಜಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ₹12 ಕೋಟಿ ಮೌಲ್ಯದ 1,500 ಕೆ.ಜಿ ಗಾಂಜಾ ಹಾಗೂ ಸರಕು ಸಾಗಣೆ ವಾಹನ ಜಪ್ತಿ ಮಾಡಲಾಗಿದೆ’ ಎಂದು ಕಮಿಷನರ್ ಬಿ. ದಯಾನಂದ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಚಾಮರಾಜಪೇಟೆ ಬಳಿ ಆರೋಪಿ ಸಲ್ಮಾನ್, ಗಾಂಜಾ ಮಾರುತ್ತಿದ್ದ. ಈತನನ್ನು ಬಂಧಿಸಿ, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಎಲ್ಲಿಂದ ಗಾಂಜಾ ತರುತ್ತಿದ್ದ ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿತ್ತು. ವಿಚಾರಣೆ ನಡೆಸಿದಾಗ, ಗಾಂಜಾ ಸಾಗಣೆ ಜಾಲದ ಬಗ್ಗೆ ಬಾಯ್ಬಿಟ್ಟಿದ್ದ’ ಎಂದು ಹೇಳಿದರು.

ಮೂರು ವಾರ ಕಾರ್ಯಾಚರಣೆ: ‘ಆರೋಪಿ ಚಂದ್ರಬಾನು, ಎಂಬಿಎ ವ್ಯಾಸಂಗ ಮಾಡುತ್ತಿದ್ದ. ಇನ್ನೊಬ್ಬ ಆರೋಪಿ ಲಕ್ಷ್ಮಿಮೋಹನ್ ದಾಸ್, ಬಿ.ಎ ಪದವೀಧರ. ಇಬ್ಬರು ಒಟ್ಟಿಗೆ ಸೇರಿ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡಿನ ಹಲವು ಪೆಡ್ಲರ್‌ಗಳಿಗೆ ಗಾಂಜಾ ಪೂರೈಕೆ ಮಾಡುತ್ತಿದ್ದರು’ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ನಕಲಿ ನೋಂದಣಿ ಸಂಖ್ಯೆ ಫಲಕ

‘ಆಂಧ್ರಪ್ರದೇಶದಲ್ಲಿ ಗಾಂಜಾ ಬೆಳೆಯುತ್ತಿದ್ದವರ ಜೊತೆ ಆರೋಪಿಗಳು ಒಡನಾಟ ಹೊಂದಿದ್ದರು. ಗಾಂಜಾ ಖರೀದಿಸಿ ವಿಶಾಖಪಟ್ಟಣದ ಬಳಿ ಸಂಗ್ರಹಿಸಿಡುತ್ತಿದ್ದ ಆರೋಪಿಗಳು, ಆಯಾ ರಾಜ್ಯಗಳ ಪೆಡ್ಲರ್‌ಗಳ ಬೇಡಿಕೆಗೆ ತಕ್ಕಷ್ಟು ಗಾಂಜಾ ಕಳುಹಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಫ್ಲಿಪ್‌ಕಾರ್ಟ್ ಬಾಕ್ಸ್‌ಗಳಲ್ಲಿ ಗಾಂಜಾ ತುಂಬುತ್ತಿದ್ದರು. ಸರಕು ಸಾಗಣೆ ವಾಹನದ ಕಂಪಾರ್ಟ್‌ಮೆಂಟ್ ಕೆಳಗೆ ನಿರ್ಮಿಸಿರುತ್ತಿದ್ದ ಪೆಟ್ಟಿಗೆಯಲ್ಲಿ ಬಾಕ್ಸ್‌ಗಳನ್ನು ಇರಿಸುತ್ತಿದ್ದರು. ಕಂಪಾರ್ಟ್‌ಮೆಂಟ್ ಖಾಲಿ ಇರುವಂತೆ ನೋಡಿಕೊಳ್ಳುತ್ತಿದ್ದರು. ಚೆಕ್‌ಪೋಸ್ಟ್ ಸಿಬ್ಬಂದಿ ಹಾಗೂ ಪೊಲೀಸರಿಗೆ ಅನುಮಾನ ಬರುತ್ತಿರಲಿಲ್ಲ’ ಎಂದು ಹೇಳಿದರು.

‘ಗಾಂಜಾ ಸಾಗಿಸುತ್ತಿದ್ದ ವಾಹನಕ್ಕೆ ನಕಲಿ ನೋಂದಣಿ ಸಂಖ್ಯೆ ಫಲಕ ಅಳವಡಿಸುತ್ತಿದ್ದರು. ನಗರದಿಂದ ನಗರಕ್ಕೆ ಫಲಕವನ್ನೂ ಬದಲಾಯಿಸಿ, ನಿಗದಿತ ಸ್ಥಳಕ್ಕೆ ಗಾಂಜಾ ತಲುಪಿಸುತ್ತಿದ್ದರು. ಈ ಜಾಲದಲ್ಲಿ ಮತ್ತಷ್ಟು ಆರೋಪಿಗಳು ಭಾಗಿಯಾಗಿರುವ ಮಾಹಿತಿಯಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

‘ಮೂರು ವಾರ ನಿರಂತರವಾಗಿ ಕಾರ್ಯಾಚರಣೆ ನಡೆಸಿ ಜಾಲದ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿತ್ತು. ಇತ್ತೀಚೆಗೆ ವಿಶಾಖಪಟ್ಟಣ ಬಳಿ ವಾಹನ ಸಮೇತವಾಗಿ ಆರೋಪಿಗಳನ್ನು ಸೆರೆ ಹಿಡಿಯಲಾಯಿತು’ ಎಂದು ಹೇಳಿದರು.

ಸಿಗದ ವರ್ಗಾವಣೆ: ಶಿಕ್ಷಕಿ ಆತ್ಮಹತ್ಯೆ

ದೊಡ್ಡಬಳ್ಳಾಪುರ: ಪ್ರೌಢಶಾಲೆಗೆ ವರ್ಗಾವಣೆ ಸಿಗದ ತೂಬಗೆರೆ ಹೋಬಳಿಯ ತುರುವನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಜ್ಯೋತಿ (48) ಖಿನ್ನತೆಯಿಂದ ಶುಕ್ರವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಗರದ ಸೋಮೇಶ್ವರ ಬಡಾವಣೆಯಲ್ಲಿ ವಾಸವಾಗಿದ್ದರು. ಮೂಲತಃ ಚಿತ್ರದುರ್ಗ ಜಿಲ್ಲೆ ನಲ್ಲಿಕಟ್ಟೆ ಗ್ರಾಮದ ಜ್ಯೋತಿ ಅವರು 12 ವರ್ಷ ಬನವತಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿದ್ದರು. ಇತ್ತೀಚೆಗಷ್ಟೇ ತೂಬಗೆರೆ ಹೋಬಳಿಯ ತುರುವನಹಳ್ಳಿ ಶಾಲೆಗೆ ವರ್ಗಾವಣೆಯಾಗಿದ್ದರು.

ಸುದ್ದಿ 2 ನಿಮಿಷ

ಡಿಸೆಂಬರ್‌ನೊಳಗೆ ನಿವೇಶನ ಹಂಚಿಕೆ: ಸೊಸೈಟಿ ಭರವಸೆ

ಬೆಂಗಳೂರು: ‘ಕರ್ನಾಟಕ ಪೋಸ್ಟಲ್ ಆ್ಯಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಹಣದ ಅವ್ಯವಹಾರ ನಡೆದಿಲ್ಲ. ಬಹುತೇಕ ಸದಸ್ಯರಿಗೆ ಡಿಸೆಂಬರ್‌ನೊಳಗೆ ನಿವೇಶನ ಹಂಚಿಕೆ ಮಾಡಲಾಗುವುದು’ ಎಂದು ಸೊಸೈಟಿ ಅಧ್ಯಕ್ಷ ಜಯರಾಮಯ್ಯ ತಿಳಿಸಿದರು.

‘ಸದಸ್ಯರಿಂದ ನಿವೇಶನಕ್ಕಾಗಿ ಸಂಗ್ರಹಿಸಿರುವ ಠೇವಣಿ ಹಣವನ್ನು ಭೂಮಿ ಖರೀದಿಗೆ ವಿನಿಯೋಗಿಸಿದೆ. ಡೆವಲಪರ್ ಆರ್.ಜಿ. ತಿಲಕ್ ಬಡಾವಣೆ ನಿರ್ಮಾಣದಲ್ಲಿ ವಿಳಂಬ ಮಾಡಿದ್ದು, ಅವರ ಮೇಲೆ ದಾವೆ ಹೂಡಲಾಗಿದೆ’ ಎಂದು ಹೇಳಿದರು.

‘ಸಂದೇಶ್ ನಗರ 1ನೇ ಹಂತದಲ್ಲಿ 680 ನಿವೇಶನ ಹಂಚಿಕೆ ಮಾಡಲಾಗಿದ್ದು, 515 ನಿವೇಶನಗಳ ನೋಂದಣಿ ಪ್ರಕ್ರಿಯೆಯೂ ಮುಗಿದಿದೆ. ಉಳಿದವರು ನೋಂದಣಿಗೆ ಮುಂದಾಗಿಲ್ಲ. ಸಂದೇಶ್ ನಗರ 2ನೇ ಹಂತದಲ್ಲಿ ಬಡಾವಣೆ ನಿರ್ಮಾಣ ಕಾರ್ಯ ನಡೆಯುತ್ತಿದೆ. ಸಂದೇಶ್ ನಗರ 3ನೇ ಹಂತದ ಬಡಾವಣೆ ನಿರ್ಮಾಣಕ್ಕೆ ಜಮೀನುಗಳನ್ನು ಸಂಘದ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲಾಗಿದೆ’ ಎಂದು ಮಾಹಿತಿ ನೀಡಿದರು.

‘ಸಂದೇಶ್ ಲೇಕ್ ಸೈಡ್ 1, 2, 3, 4ನೇ ಹಂತದ ಬಡಾವಣೆಗೆ ಸುಮಾರು 102 ಎಕರೆಯಲ್ಲಿ ನಿವೇಶನ ರಚಿಸಲು ಉದ್ದೇಶಿಸಲಾಗಿದ್ದು, 90 ಎಕರೆ ಭೂಪರಿವರ್ತಿತ ಜಮೀನನ್ನು ಸಂಘದ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲಾಗಿದೆ. ಸದಸ್ಯರು ಮತ್ತು ಸಹ ಸದಸ್ಯರಿಗೆ ನಿವೇಶನ ಹಂಚಲಾಗುತ್ತದೆ. ಡಿಸೆಂಬರ್ ವೇಳಗೆ ಬಹುತೇಕರಿಗೆ ನಿವೇಶನ ದೊರೆಯಲಿದ್ದು, ಮುಂದಿನ ವರ್ಷದ ಮಾರ್ಚ್ ವೇಳೆಗೆ ಎಲ್ಲ ನೋಂದಣಿ ಪ್ರಕ್ರಿಯೆ ಮುಗಿಯಲಿದೆ’ ಎಂದು ಜಯರಾಮಯ್ಯ ವಿವರಿಸಿದರು.

ಕಾರ್ಯಪಾಲಕ ಎಂಜಿನಿಯರ್ ಕಚೇರಿ ಸ್ಥಳಾಂತರಕ್ಕೆ ವಿರೋಧ



ಬೆಂಗಳೂರು: ಬಿಬಿಎಂಪಿ ದಾಸರಹಳ್ಳಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಕಚೇರಿ ಸ್ಥಳಾಂತರಿಸುವುದನ್ನು ವಿರೋಧಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದ್ದಾರೆ.

‘ಈ ಕಚೇರಿ ಸ್ಥಳಾಂತರಿಸಬಾರದು ಎಂದು ಮಾಜಿ ಶಾಸಕ ಆರ್. ಮಂಜುನಾಥ್ ಪತ್ರ ಬರೆದಿದ್ದರೂ ಪ್ರಯೋಜನವಾಗಿಲ್ಲ’ ಎಂದು ವಿನಾಯಕ ಭಟ್ ನೇತೃತ್ವದಲ್ಲಿ ಸ್ಥಳೀಯರು ಶನಿವಾರ ದಾಸರಹಳ್ಳಿ ವಲಯದ ಜಂಟಿ ಆಯುಕ್ತರಿಗೆ ಮನವಿ ಸಲ್ಲಿಸಿದರು.

‘ಶಾಸಕ ಆರ್. ಮುನಿರಾಜು ಅವರ ಕಚೇರಿಗೆ ಹತ್ತಿರವಾಗುತ್ತದೆ ಎಂಬ ಕಾರಣಕ್ಕೆ ಎಚ್ಎಂಟಿ ಬಡಾವಣೆಯಿಂದ ಸ್ಥಳಾಂತರಿಸಲು ಮುಂದಾಗಿದ್ದಾರೆ. ಈಗ ವಿಶಾಲವಾದ ಕಟ್ಟಡದಲ್ಲಿ ತೊಂದರೆ ಇಲ್ಲದಂತೆ ಕಾರ್ಯನಿರ್ವಹಿಸುತ್ತಿದೆ. ಮೇಲಧಿಕಾರಿಗಳು ಮತ್ತು ಜನಪ್ರತಿನಿಧಿಗಳನ್ನು ಕೆಲವೊಂದು ಗುತ್ತಿಗೆದಾರರು ದಾರಿ ತಪ್ಪಿಸಿ ಈ ಕಚೇರಿಯನ್ನು ಅಧೀಕ್ಷಕ ಎಂಜಿನಿಯರ್ ಕಚೇರಿಗೆ ಸ್ಥಳಾಂತರಿಸುವಂತೆ ಮಾಡುತ್ತಿದ್ದಾರೆ’ ಎಂದು ಮನವಿಯಲ್ಲಿ ಆರೋಪಿಸಿದ್ದಾರೆ. ಈ ಕಚೇರಿಯನ್ನು ಪ್ರಸ್ತುತ ಇರುವಲ್ಲಿಯೇ ಮುಂದುವರಿಸಬೇಕು. ಸ್ಥಳಾಂತರಕ್ಕೆ ಕಾರಣರಾಗಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

ಸಂಚಾರ ಪೊಲೀಸರು– ಸ್ಥಳೀಯರ ನಡುವೆ ಜಟಾಪಟಿ • ದೂರು– ಪ್ರತಿದೂರು

ಪರಾರಿಗೆ ಯತ್ನಿಸಿದ್ದವನ ಔಡಿ ಕಾರು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತರಾಗಿ ಚಾಲನೆ ಮಾಡಿ ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಲು ಯತ್ನಿಸಿದ್ದ ಪಳನಿವೇಲ್ ಮುತುವೇಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸರು, ಔಡಿ ಕಾರು ಜಪ್ತಿ ಮಾಡಿದ್ದಾರೆ.

ಕಾರು ಜಪ್ತಿ ವಿಚಾರವಾಗಿ ಸಂಚಾರ ಪೊಲೀಸರು ಹಾಗೂ ಸ್ಥಳೀಯರ ನಡುವೆ ಜಟಾಪಟಿ ನಡೆದಿದ್ದು, ಈ ಸಂಬಂಧ ಕೋಣನಕುಂಟೆ ಠಾಣೆಯಲ್ಲಿ ದೂರು–ಪ್ರತಿದೂರು ದಾಖಲಾಗಿವೆ. ಜಟಾಪಟಿ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

‘ರಾಜಕಾರಣಿಯೊಬ್ಬರಿಂದ ಕಾನ್‌ಸ್ಟೆಬಲ್‌ಗೆ ಕರೆ ಮಾಡಿಸಿದ್ದ ಪಳನಿವೇಲ್, ಪಾನಮತ್ತ ಸ್ಥಿತಿಯಲ್ಲಿ ಕಾರು ಸಮೇತ ಸ್ಥಳದಿಂದ ಹೊರಟು ಹೋಗಲು ಪ್ರಯತ್ನಿಸಿದ್ದ. ಇದಕ್ಕೆ ಕೆಲ ಪೊಲೀಸರು ಸಹಕರಿಸಿದ್ದರು. ಬಡವರಿಗೆ ಒಂದು ನ್ಯಾಯ, ಶ್ರೀಮಂತರಿಗೆ ಒಂದು ನ್ಯಾಯವೇ?’ ಎಂದು ಸ್ಥಳೀಯರು ದೂರು ನೀಡಿದ್ದಾರೆ.



ಮದ್ಯ ಸೇವಿಸಿ ಚಾಲನೆ ಮಾಡಿದ ಆರೋಪದಡಿ ಪಳನಿವೇಲ್ ಅವರಿಗೆ ಸಂಚಾರ ಪೊಲೀಸರು ದಂಡದ ರಸೀದಿ ನೀಡಿದರು

ಪ್ರತಿದೂರು ನೀಡಿರುವ ಪೊಲೀಸರು, ‘ಡ್ರಿಂಕ್ ಆ್ಯಂಡ್ ಡ್ರೈವ್ ತಪಾಸಣೆ ವೇಳೆ ಕೆಲ ಸ್ಥಳೀಯರು, ಮಾಧ್ಯಮದವರ ಹೆಸರು ಹೇಳಿಕೊಂಡು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ತಾವು ಪುನೀತ್ ಕೆರೆಹಳ್ಳಿ ಕಡೆಯವರೆಂದು ಅವರೆಲ್ಲ ಹೇಳುತ್ತಿದ್ದರು’ ಎಂದು ಆರೋಪಿಸಿದ್ದಾರೆ.

ಅಪಘಾತದ ಸಂದರ್ಭದಲ್ಲಿ ಪರಾರಿಗೆ ಯತ್ನ: ‘ಆಸ್ಪತ್ರೆಯೊಂದರ ವಿಭಾಗದ ಮುಖ್ಯಸ್ಥರೆಂದು ಹೇಳಿಕೊಳ್ಳುವ ಪಳನಿವೇಲ್, ಶುಕ್ರವಾರ ರಾತ್ರಿ ಮದ್ಯ ಸೇವಿಸಿ ತಮ್ಮ ಔಡಿ ಕಾರು (ಕೆಎ 03 ಎನ್‌ಸಿ 8338) ಚಲಾಯಿಸಿಕೊಂಡು ಹೊರಟಿದ್ದರು. ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿದ್ದರು. ಅದನ್ನು ನೋಡಿದ್ದ ಸ್ಥಳೀಯರು, ಕರ್ತವ್ಯದಲ್ಲಿದ್ದ ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಕಾರು ತಡೆದಿದ್ದ ಪೊಲೀಸರು, ಪಳನಿವೇಲ್‌ನನ್ನು ವಿಚಾರಿಸುತ್ತಿದ್ದರು. ಅದೇ ವೇಳೆ ಸಮೀಪದಲ್ಲಿಯೇ ವಾಹನವೊಂದು ಉರುಳಿಬಿದ್ದು ಅಪಘಾತವಾಗಿತ್ತು. ರಕ್ಷಣೆಗೆಂದು ಎಲ್ಲ ಪೊಲೀಸರು, ಸ್ಥಳಕ್ಕೆ ಓಡಿ ಹೋಗಿದ್ದರು. ಆಗ ಪಳನಿವೇಲ್, ಕಾರು ಚಲಾಯಿಸಿಕೊಂಡು ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದರು’ ಎಂದು ಹೇಳಿವೆ.

ಕಾರು ಅಡ್ಡಗಟ್ಟಿ ಪೊಲೀಸರಿಗೆ ತರಾಟೆ: ಪಳನಿವೇಲ್ ಕಾರು ಅಡ್ಡಗಟ್ಟಿದ್ದ ಸ್ಥಳೀಯರು, ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದ್ದರು. ಪಳನಿವೇಲ್ ಪರಾರಿಯಾಗುತ್ತಿದ್ದರೂ ಮೌನ ವಹಿಸಿರುವುದು ಏಕೆ ಎಂದು ಪ್ರಶ್ನಿಸಿದ್ದರು. ಇದೇ ವಿಚಾರವಾಗಿ ಸ್ಥಳೀಯರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಸ್ಥಳೀಯರ ಎದುರೇ ಆಲ್ಕೋಮೀಟರ್ ಹಿಡಿದು ಪಳನಿವೇಲ್ ಅವರನ್ನು ಪೊಲೀಸರು ತಪಾಸಣೆ ನಡೆಸಿದರು. ಮದ್ಯ ಕುಡಿದಿದ್ದುಗೊತ್ತಾಗುತ್ತಿದ್ದಂತೆ ಪ್ರಕರಣ ದಾಖಲಿಸಿಕೊಂಡು, ಕಾರು ಜಪ್ತಿ ಮಾಡಿದರು. ನ್ಯಾಯಾಲಯದಲ್ಲಿ ದಂಡ ಪಾವತಿಸಿ ಕಾರು ಬಿಡಿಸಿಕೊಳ್ಳುವಂತೆ ನೋಟಿಸ್ ನೀಡಿ ಕಳುಹಿಸಿದರು ಎಂಬುದಾಗಿ ಮೂಲಗಳು ಹೇಳಿವೆ.

‘ಕಮಿಷನ್ ವಂಚನೆ: ಕೆಲಸದಿಂದ ವಜಾ’

‘ಸ್ಪರ್ಶ ಆಸ್ಪತ್ರೆಯ ಬ್ರ್ಯಾಂಡಿಂಗ್ ಮುಖ್ಯಸ್ಥರಾಗಿ ಪಳನಿವೇಲ್ ಕೆಲಸ ಮಾಡುತ್ತಿದ್ದರು. 2022–23ನೇ ಸಾಲಿನಲ್ಲಿ ಆಸ್ಪತ್ರೆಯ ಬ್ರ್ಯಾಂಡಿಂಗ್ ಕೆಲಸಕ್ಕಾಗಿ ಸುಮಾರು ₹ 8 ಕೋಟಿ ಬಜೆಟ್ ಮಾಡಿ, ಖಾಸಗಿಯವರಿಗೆ ಗುತ್ತಿಗೆ ನೀಡಿದ್ದರು. ಇದಕ್ಕೆ ಪ್ರತಿಯಾಗಿ ಗುತ್ತಿಗೆದಾರರಿಂದ ಶೇ 4ರಿಂದ ಶೇ 10ರಷ್ಟು ಕಮಿಷನ್ ಪಡೆದು ಆಸ್ಪತ್ರೆಗೆ ವಂಚಿಸಿದ್ದರು. ಈ ಸಂಬಂಧ ಆಸ್ಪತ್ರೆಯ ಸಿಇಒ ಜೋಸೆಫ್ ಅವರು ವಿಧಾನಸೌಧ ಠಾಣೆಗೆ ಫೆ. 3ರಂದು ದೂರು ನೀಡಿದ್ದರು. ಇದಾದ ನಂತರ, ಪಳನಿವೇಲ್ ಅವರನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಔಡಿ ಕಾರು ಖರೀದಿಸಿದ್ದ ಪಳನಿವೇಲ್, ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದು ಮೂಲಗಳು ಹೇಳಿವೆ.

₹ 2.31 ಕೋಟಿ ಮೌಲ್ಯದ ಚಿನ್ನಾಭರಣ ಸುಲಿಗೆ

ಬೆಂಗಳೂರು: ಆಭರಣ ಮಳಿಗೆಯಿಂದ ಮನೆಯತ್ತ ಹೊರಟಿದ್ದ ಯುವಕರಿಬ್ಬರ ದ್ವಿಚಕ್ರ ವಾಹನವನ್ನು ಕೆಳಗೆ ಬೀಳಿಸಿ ₹ 2.31 ಕೋಟಿ ಮೌಲ್ಯದ ಚಿನ್ನಾಭರಣ ಸುಲಿಗೆ ಮಾಡಲಾಗಿದ್ದು, ಕಾಟನ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಗರ್ತಪೇಟೆ ಮುಖ್ಯರಸ್ತೆಯಲ್ಲಿರುವ ಕೇಸರ್ ಜ್ಯುವೆಲರ್ಸ್ ಮಳಿಗೆ ಮಾಲೀಕ ರಾಜ್ ಜೈನ್ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲ ಹೇಳಿವೆ.

‘ರಾಜ್ ಜೈನ್ ಅಕ್ಕನ ಮಗ ಆದಿತ್ಯ ಚೌಪದ್ ಹಾಗೂ ಮನನ್, ಚಿನ್ನಾಭರಣದ ಬ್ಯಾಗ್ ಸಮೇತ ಜುಲೈ 12ರಂದು ಸಂಜೆ ಮಳಿಗೆಯಿಂದ ಮನೆಯತ್ತ ಹೊರಟಿದ್ದರು. ಒಲಾ ಎಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ಡೆಡ್ ಹೌಸ್ ಬಳಿಯ ಮೇಲ್ಸೇತುವೆಯಲ್ಲಿ ಸಾಗುತ್ತಿದ್ದರು. ಬೈಕ್‌ನಲ್ಲಿ ಬಂದಿದ್ದ ಆರೋಪಿಗಳಿಬ್ಬರು, ಆದಿತ್ಯ ಅವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಬೀಳಿಸಿದ್ದರು. ನಂತರ, ಚಿನ್ನಾಭರಣವಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದಾರೆ’.

‘3 ಕೆ.ಜಿ 780 ಗ್ರಾಂ ತೂಕದ ಚಿನ್ನಾಭರಣ ಬ್ಯಾಗ್‌ನಲ್ಲಿತ್ತು ಎಂಬುದಾಗಿ ದೂರುದಾರ ಹೇಳಿದ್ದಾರೆ. ಆದಿತ್ಯ ಹಾಗೂ ಮನನ್ ಅವರರಿಂದಲೂ ಹೇಳಿಕೆ ಪಡೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

₹450 ಹಂಚಿಕೆಗೆ ಜಗಳ: ಗೆಳೆಯನ ಕೊಂದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬಿಣ ಮಾರಿದ್ದರಿಂದ ಬಂದ ₹ 450 ಹಂಚಿಕೊಳ್ಳುವ ವಿಚಾರವಾಗಿ ನಡೆದ ಜಗಳದಲ್ಲಿ ಗುರುಮೂರ್ತಿ (34) ಅವರನ್ನು ಕೊಲೆ ಮಾಡಿದ್ದ ಆರೋಪದಡಿ ತಿಂಡ್ಲು ನಿವಾಸಿ, ಸ್ನೇಹಿತ ಪ್ರಭುನನ್ನು (39) ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಯಶವಂತಪುರ ನಿವಾಸಿ ಗುರುಮೂರ್ತಿ ಉರುಫ್ ಮೂರ್ತಿ, ಚಿಂದಿ ಆಯುವ ಕೆಲಸ ಮಾಡಿಕೊಂಡಿದ್ದರು. ಜುಲೈ 8ರಂದು ದೊಣ್ಣೆಯಿಂದ ಹೊಡೆದು ಗುರುಮೂರ್ತಿಯನ್ನು ಕೊಲೆ ಮಾಡಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಗುರುಮೂರ್ತಿ ಹಾಗೂ ಪ್ರಭು, ಒಟ್ಟಿಗೆ ಚಿಂದಿ ಆಯುತ್ತಿದ್ದರು. ಕಬ್ಬಿಣ, ಪೀಠೋಪಕರಣ ಹಾಗೂ ಇತರೆ ವಸ್ತುಗಳನ್ನು ಆಗಾಗ ಕಳ್ಳತನ ಮಾಡುತ್ತಿದ್ದ ಇಬ್ಬರು, ಅದನ್ನು ಮಾರಿ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು. ನಿತ್ಯವೂ ಒಟ್ಟಿಗೆ ಮದ್ಯದ ಪಾರ್ಟಿ ಮಾಡುತ್ತಿದ್ದರು. ಇವರಿಬ್ಬರ ಜೊತೆ ಇನ್ನೊಬ್ಬ ಸ್ನೇಹಿತನಿದ್ದ’ ಎಂದರು.

‘ಕಳವು ಮಾಡಿದ್ದ ಕಬ್ಬಿಣದ ರಾಡ್‌ಗಳನ್ನು ಗುಜರಿ ಅಂಗಡಿಗೆ ಮಾರಿದ್ದರು. ಇದರಿಂದ ಬಂದಿದ್ದ ₹ 450 ಅನ್ನು ಪ್ರಭು ತನ್ನ ಬಳಿ ಇಟ್ಟುಕೊಂಡಿದ್ದ. ಮಲ್ಲೇಶ್ವರ ಬಳಿ ಸೇರಿದ್ದ ಇಬ್ಬರೂ, ಹಣ ಹಂಚಿಕೊಳ್ಳುವ ಬಗ್ಗೆ ಮಾತನಾಡುತ್ತಿದ್ದರು. ‘ಹಣ ನನ್ನ ಬಳಿ ಇರಲಿ. ಬೆಳಿಗ್ಗೆ ಕೊಡುತ್ತೇನೆ’ ಎಂದು ಪ್ರಭು ಹೇಳಿದ್ದ. ಅದಕ್ಕೆ ಗುರುಮೂರ್ತಿ, ಒಪ್ಪಿರಲಿಲ್ಲ.’

‘ಹಣ ಹಂಚಿಕೆ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ನಡೆದು, ಆರೋಪಿ ಪ್ರಭು, ದೊಣ್ಣೆಯಿಂದ ಗುರುಮೂರ್ತಿ ತಲೆಗೆ ಹೊಡೆದಿದ್ದ. ಗುರುಮೂರ್ತಿ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

ಹಿಡಿಯಲು ಹೋಗಿದ್ದ ಆಟೊ ಚಾಲಕ: ‘ಜಗಳ ಬಿಡಿಸಲು ಹೋಗಿದ್ದ ಆಟೊ ಚಾಲಕ ಹಾಗೂ ಇತರರಿಗೆ ಆರೋಪಿ ಬೆದರಿಕೆಯೊಡ್ಡಿ ಪರಾರಿಯಾಗಿದ್ದ. ರಕ್ತದ ಕಲೆಗಳಿದ್ದ ಬಟ್ಟೆ ಬದಲಾಯಿಸಿಕೊಂಡು ಮೆಜೆಸ್ಟಿಕ್‌ಗೆ ಹೋಗಿದ್ದ ಆರೋಪಿ, ಅಲ್ಲಿಂದ ನಾಪತ್ತೆಯಾಗಿದ್ದ ಎಂದರು.

ನಗರದಲ್ಲಿ ಇಂದು

33ನೇ ವರ್ಷದ ಅಖಂಡ ಭಜನಾ ಯಜ್ಞ ಕಾರ್ಯಕ್ರಮ: ಮುಖ್ಯ ಅತಿಥಿ: ಆರತಿ ವಿ.ಬಿ., ಆಯೋಜನೆ: ಶ್ರೀನಿವಾಸ ಸಹೋದರರ ಸಂಘ, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಬೆಳಿಗ್ಗೆ 7.30

ಹಿಂಗುಳಾಂಬಿಕಾ ದೇವಿಯ ಪೂಜೆ, ಆರಾಧನೆ ಹಾಗೂ ಗೊಂಧಳ್ ಕಾರ್ಯಕ್ರಮ: ಆಯೋಜನೆ: ಶ್ರೀ ಹಿಂಗುಳಾಂಬಿಕ ಭಾವಸಾರ ಕ್ಷತ್ರಿಯ ಸೇವಾ ಸಮಿತಿ, ಸ್ಥಳ: ಭವಾನಿ ಕಲ್ಯಾಣ ಮಂಟಪ, ಗಾಂಧಿ ಬಜಾರ್, ಬಸವನಗುಡಿ, ಬೆಳಿಗ್ಗೆ 8ರಿಂದ

ರಂಗಪ್ರವೇಶ: ಜೆ. ಮನು, ಮುಖ್ಯ ಅತಿಥಿ: ದಿನೇಶ ಗುಂಡೂರಾವ್, ವೇದಾಂತಂ ರಾಮಲಿಂಗ ಶಾಸ್ತ್ರಿ, ಎಂ. ಸೂರ್ಯಪ್ರಸಾದ್, ಪಿ. ಪ್ರವೀಣ್ ಕುಮಾರ್, ಅವಿಜಿತ್ ದಾಸ್, ಆಯೋಜನೆ: ರಾಜರಾಜೇಶ್ವರಿ ಕಲಾನಿಕೇತನ, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಮಲ್ಲೇಶ್ವರ, ಬೆಳಿಗ್ಗೆ 9

ರಾಜ್ಯಮಟ್ಟದ ಪದಾಧಿಕಾರಿಗಳ ಸಮಾವೇಶ: ಪ್ರತಿಭಾ ಪುರಸ್ಕಾರ ಮತ್ತು ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಸಂತೋಷ್ ಲಾಡ್, ಉಪಸ್ಥಿತಿ: ಕೆ. ನಾಗೇಶ್ವರರಾವ್, ಮುಕುಟಸಿಂಗ್ ಮೀನಾ, ವಿ.ಎಸ್. ರಾಜ, ಎನ್. ಅರುಣ್‌ಬಾಬು, ಆಯೋಜನೆ: ಅಖಿಲ ಭಾರತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಕಾರ್ಮಿಕ ಕಲ್ಯಾಣ ಸಂಘಗಳ ಒಕ್ಕೂಟ ರಾಜ್ಯ ಶಾಖೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಚಾತುರ್ಮಾಸ್ಯ ವ್ರತ: ಸುಗುಣೇಂದ್ರತೀರ್ಥ ಸ್ವಾಮೀಜಿ, ಸುಶೀಂದ್ರತೀರ್ಥ ಸ್ವಾಮೀಜಿ, ಆಯೋಜನೆ: ಪುತ್ತಿಗೆಶ್ರೀ ಸುವರ್ಣ ಚಾತುರ್ಮಾಸ್ಯ ಸಮಿತಿ, ಸ್ಥಳ: ಗೋವರ್ಧನ ಕ್ಷೇತ್ರ, ಉಡುಪಿ ಪುತ್ತಿಗೆ ಶಾಖಾ ಮಠ, ಬಸವನಗುಡಿ, ಬೆಳಿಗ್ಗೆ 10



ಸುಗುಣೇಂದ್ರತೀರ್ಥ ಸ್ವಾಮೀಜಿ

ರಾಜ್ಯಮಟ್ಟದ ಮಡಿವಾಳ ಮಾಚಿದೇವರ ಪ್ರಶಸ್ತಿ ಹಾಗೂ ಶೈಕ್ಷಣಿಕ ಪ್ರತಿಭಾ ಪುರಸ್ಕಾರ ಪ್ರದಾನ: ಸಾನ್ನಿಧ್ಯ: ಬಸವ ಮಾಚಿದೇವ ಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ, ಉದ್ಘಾಟನೆ: ಎನ್. ಚೆಲುವರಾಯ ಸ್ವಾಮಿ, ಪ್ರಿಯಾಂಕ್ ಖರ್ಗೆ, ಉಪಸ್ಥಿತಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರಶಸ್ತಿ ಪುರಸ್ಕೃತರು: ಮಹೇಂದ್ರ ಮುನ್ನೋತ್ ಜೈನ್, ಅಶೋಕ್ ದೊಮ್ಮಲೂರು, ಬಿ. ಶ್ರೀಧರ್, ಟಿ.ಎಂ. ಪ್ರಸಾದ್, ಮೈಲಾರಿ ಮಡಿವಾಳರ್, ಆಯೋಜನೆ: ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 10.30

‘ಸಾತ್ವಿಕ ಪ್ರಶಸ್ತಿ’ ಪ್ರದಾನ ಸಮಾರಂಭ: ಪ್ರದಾನ: ಪಟ್ಟದಮಲಯ ಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ಕೆ.ಎಂ. ರೇವಣ್ಣ, ಉಪಸ್ಥಿತಿ: ಎಚ್.ಎಂ. ಶಂಕರಪ್ಪ, ಕೆ.ಎಸ್. ವಿಶ್ವನಾಥ್, ಆಯೋಜನೆ: ಬಸವ ವಿದ್ಯಾಭಿವೃದ್ಧಿ ಕೇಂದ್ರ, ಸ್ಥಳ: ಈಶ್ವರ ಸೇವಾ ಮಂಡಳಿ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 10.30

ಚಾಲಕರಿಗೆ ‘ಅಪ್ಪು ನಿಧಿ’ ಲೋಕಾರ್ಪಣೆ: ಧನಂಜಯ್, ಮುಖ್ಯ ಅತಿಥಿಗಳು: ಕೆ. ಗೋಪಾಲಯ್ಯ, ಗೋಪಾಲಕೃಷ್ಣ ದೇಶಪಾಂಡೆ, ದಯಾನಂದ್ ಟಿ.ಕೆ., ರಮೇಶ್ ಹೊಳ್ಳ, ಗೋವಿಂದ್ ಎಸ್., ಮಂಜುಳಾ, ರಾಹುಲ್ ಪಾಂಡೆ, ಆಯೋಜನೆ: ಚೇತನಾಧಾರೆ ಟ್ರಸ್ಟ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30



ಧನಂಜಯ್

ಕನ್ನಡ ಚಳವಳಿಗೆ ಮಹಿಳೆಯರ ಕೊಡುಗೆ– ಕುರಿತು ಚಿಂತನಾಗೋಷ್ಠಿ ಹಾಗೂ ಕನ್ನಡಪರ ಹೋರಾಟಗಾರ್ತಿಯರಿಗೆ ಗೌರವ ಸಮರ್ಪಣೆ: ಉದ್ಘಾಟನೆ: ಎಚ್.ಎಲ್. ಪುಷ್ಪಾ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಮುಖ್ಯ ಅತಿಥಿಗಳು: ತಲಕಾಡು ಚಿಕ್ಕರಂಗೇಗೌಡ, ಆರ್.ಎ. ಪ್ರಸಾದ್, ಎಸ್. ರಾಮಲಿಂಗೇಶ್ವರ, ಆಯೋಜನೆ: ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30



ಎಚ್.ಎಲ್. ಪುಷ್ಪಾ

ಹಳೆ ವಿದ್ಯಾರ್ಥಿಗಳ ಸಮಾವೇಶ: ಮುಖ್ಯ ಅತಿಥಿಗಳು: ಕೆ.ಎ. ದಯಾನಂದ್, ವಿನಾಯಕ್ ಗರ್ಗ್, ಟಿ. ಗೋಪಾಲಕೃಷ್ಣ, ರೀತಿ ಜಿ. ಮುನೇಗೌಡ, ಆಯೋಜನೆ ಹಾಗೂ ಸ್ಥಳ: ಜವಹರ್ ನವೋದಯ ವಿದ್ಯಾಲಯ, ಬಾಗಲೂರು, ಬೆಳಿಗ್ಗೆ 10.30

ದತ್ತಿ ಉಪನ್ಯಾಸಗಳು: ‘ಕನ್ನಡ ರಂಗಭೂಮಿ ಮತ್ತು ನಾಟ್ಯಶಾಸ್ತ್ರ ಒಂದು ಅವಲೋಕನ’: ಚನ್ನಬಸವಸ್ವಾಮಿ ಹಿರೇಮಠ, ‘ಕರ್ನಾಟಕದಲ್ಲಿ ರೈತ ಚಳವಳಿಗಳು’: ಎಂ.ಜಿ. ನಾಗರಾಜ್, ಉಪಸ್ಥಿತಿ: ಕೆ. ಬೋರಯ್ಯ, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿ, 37ನೇ ವಾರ್ಷಿಕ ಸಮಾರಂಭ: ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಮುಖ್ಯ ಅತಿಥಿ: ಬೈರತಿ ಸುರೇಶ್, ಆಯೋಜನೆ: ವಿಜಯ ಭವಾನಿ ವೆಲ್ಫೇರ್ ಅಸೋಸಿಯೇಷನ್, ಸ್ಥಳ: ಕೆಕೆಎಂಪಿ ಕಲ್ಯಾಣ ಮಂಟಪ, ವಸಂತನಗರ, ಬೆಳಿಗ್ಗೆ 11

ಆರ್‌ಪಿಐ ರಾಜ್ಯ ಕಾರ್ಯಕಾರಿಣಿ ಸದಸ್ಯರ ಸಮಾವೇಶ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಸಣ್ಣಾ ನಾಯಕ್, ದಿಕ್ಸೂಚಿ ನುಡಿ: ಪಿ.ಎಲ್. ರಮೇಶ್, ಅತಿಥಿಗಳು: ಬಾರ್‌ಸಿಂಗ್, ಎ.ಬಿ. ಹೊಸಮನಿ, ನರಸಿಂಗ್ ಪಟೇಲ್, ಎಂ. ಲಗುಮಯ್ಯ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಸ್ಥಳ: ಮರಾಠ ಮಹಾಮಂಡಳ ಸಭಾಂಗಣ, ಗಾಂಧಿನಗರ, ಮಧ್ಯಾಹ್ನ 12.30

ಪದ್ಮಭೂಷಣ ಪಿ. ಸುಶೀಲ ಮತ್ತು ಕಲೈಮಾಮಣಿ ಎಲ್. ಆರ್. ಈಶ್ವರಿಗೆ ಸನ್ಮಾನ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಬಿ. ಸರೋಜಾದೇವಿ, ಭಾರತಿ ವಿಷ್ಣುವರ್ಧನ್, ಅಧ್ಯಕ್ಷತೆ: ದೊಡ್ಡರಂಗೇಗೌಡ, ಆಯೋಜನೆ: ಸಂಗೀತರತ್ನ ವಿದ್ಯಾಲಯ, ಚಿ. ಉದಯ ಶಂಕರ್ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಸುವರ್ಣ ಮಹೋತ್ಸವ ಸಮಾರೋಪ: ಅಧ್ಯಕ್ಷತೆ: ಸಿ.ಬಿ. ಅನಂತಕೃಷ್ಣನ್, ಮುಖ್ಯ ಅತಿಥಿಗಳು: ವಿ.ಎಸ್. ಶ್ರೀನಿವಾಸ್, ಭವ್ಯ, ಮಳವಳ್ಳಿ ಮಹದೇವ ಸ್ವಾಮಿ, ಅರ್ಜುನ್ ಯೋಗಿ, ಆಯೋಜನೆ: ಎಚ್‌ಎಎಲ್ ಲಲಿತಕಲಾ ಸಂಘ, ಸ್ಥಳ: ಡಾ.ವಿ.ಎಂ. ಘಾಟ್ಗೆ ಸಭಾಂಗಣ, ಎಚ್‌ಎಎಲ್ ಮಧ್ಯ ಬಡಾವಣೆ, ಮಾರತ್ತಹಳ್ಳಿ, ಸಂಜೆ 4

ನಂರುಶಿ ಕಡೂರು ಅವರ ಗಜಲ್ ಗಾಯನ್ ಹಾಗೂ ‘ಕುರುಡು ಕಂದೀಲು’ ಕೃತಿ ಲೋಕಾರ್ಪಣೆ: ಎಸ್.ಜಿ. ಸಿದ್ಧರಾಮಯ್ಯ, ಉದ್ಘಾಟನೆ: ಪಿಚ್ಚಳ್ಳಿ ಶ್ರೀನಿವಾಸ್, ಕೃತಿ ಪರಿಚಯ: ಅಬ್ದುಲ್ ಹೈ. ತೋರಣಗಲ್ಲು, ಅಧ್ಯಕ್ಷತೆ: ರಾಧಾಕೃಷ್ಣ ಪಲ್ಲಕ್ಕಿ, ಆಯೋಜನೆ: ನೇರಿಶಾ ಪ್ರಕಾಶನ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

‘ಚಕ್ರವ್ಯೂಹ–ದ್ರೌಪದಿ ಪ್ರತಾಪ’ ಯಕ್ಷಗಾನ ಪ್ರಸಂಗ: ಪ್ರದರ್ಶನ: ಪೆರ್ಡೂರು ಮೇಳ ಮತ್ತು ಅತಿಥಿ ಕಲಾವಿದರು, ಆಯೋಜನೆ: ಸಂತೋಷ್ ಶೆಟ್ಟಿ ಕುಟುಂಬ, ಸ್ಥಳ: ಸಂಚನ ನಿಲಯ, ಸೋಮೇಶ್ವರ ದೇವಾಲಯದ ಎದುರು, ಹುಳಿಮಾವು, ಸಂಜೆ 4

‘ದಿ ಕೇರಳಾ ಸ್ಟೋರಿ’ ಬಗ್ಗೆ ಚರ್ಚೆ: ಜೆ. ನಂದಕುಮಾರ್, ಸುದಿಪ್ತೊ ಸೇನ್, ಆಯೋಜನೆ: ಮಂಥನ ಬೆಂಗಳೂರು, ಸ್ಥಳ: ಯುವಪಥ, 4ನೇ ಬ್ಲಾಕ್, ಜಯನಗರ, ಸಂಜೆ 5.30

ಸಂಗೀತ ಕಛೇರಿ: ಗಾಯನ: ಮಾಧುರಿ ಕೌಶಿಕ್, ಪಿಟೀಲು: ಕಾರ್ತಿಕೇಯ ಆರ್., ಮೃದಂಗ: ಕೌಶಿಕ್ ಶ್ರೀಧರ್, ಘಟ: ಓಂಕಾರ್ ರಾವ್, ಆಯೋಜನೆ ಹಾಗೂ ಸ್ಥಳ: ಶ್ರೀ ರಾಮ ಲಲಿತ ಕಲಾ ಮಂದಿರ, ಬನಶಂಕರಿ 2ನೇ ಹಂತ, ಸಂಜೆ 5.30

ಸಾಧಕರಿಗೆ ಸನ್ಮಾನ ಹಾಗೂ ಯಕ್ಷಗಾನ ಪ್ರದರ್ಶನ: ಅಧ್ಯಕ್ಷತೆ: ರವೀಂದ್ರ ಭಟ್ಟ, ಮುಖ್ಯ ಅತಿಥಿಗಳು: ಸುಧೀರ್ ಹೆಗಡೆ, ಚಂದ್ರಶೇಖರ ಹೆಬ್ಬಾರ್, ಕರುಣಾಕರ ಹೆಗ್ಡೆ ಆನಗಳ್ಳಿ, ವಿನಾಯಕ ಹೆಗಡೆ ಕಲಗದ್ದೆ, ರಾಘವೇಂದ್ರ ಬೆಟ್ಟಕೊಪ್ಪ, ಸನ್ಮಾನಿತರು: ಶಶಿಕುಮಾರ ತಿಮ್ಮಯ್ಯ, ಯಕ್ಷಗಾನ: ಸಿರಿಕಲಾ ಮೇಳ ಹಾಗೂ ಅತಿಥಿ ಕಲಾವಿದರಿಂದ ‘ಲವಕುಶ’ ಯಕ್ಷಗಾನ, ಆಯೋಜನೆ: ಸಿರಿಕಲಾ ಮೇಳ, ಸ್ಥಳ: ಉದಯಭಾನು ಕಲಾಸಂಘ, ಗವಿಪುರ, ಸಂಜೆ 4

ಸಂಗೀತ ಕಛೇರಿ: ಗಾಯನ: ಅನನ್ಯಾ ರವಿಕಿರಣ್, ತಬಲಾ: ಕೌಶಿಕ್ ಭಟ್, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಗಾಯನ ಮತ್ತು ಕೊಳಲು ಜುಗಲ್ ಬಂದಿ: ಗಾಯನ: ಸಿದ್ಧಾರ್ಥ ಬೆಳ್ಮಣ್ಣು, ಕೊಳಲು, ಷಡ್ಜ ಗೋಡ್ಖಿಂಡಿ, ತಬಲಾ: ರೂಪಕ್ ಕಲ್ಲೂರ್ಕರ್, ಹಾರ್ಮೋನಿಯಂ: ಗೌರವ್ ಗಡಿಯಾರ್, ಆಯೋಜನೆ: ಸಪ್ತಕ ಬೆಂಗಳೂರು, ಎಂ.ಎಸ್. ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜು, 15ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5.30

‘ಹಸ್ಬೆಂಡ್–360’ ಹಾಸ್ಯ ನಾಟಕ ಪ್ರದರ್ಶನ: ರಚನೆ: ನಾಗವೇಣಿ ರಂಗನ್, ನಿರ್ದೇಶನ: ಅರ್ಚನಾ ಶ್ಯಾಮ್, ವಿಜಯ್ ಜೋಯಿಸ್, ಆಯೋಜನೆ: ಅಂತರಂಗ, ಸ್ಥಳ: ಪ್ರಭಾತ್ ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.15

ಎಟಿಎಂ ಕಸ್ಟೋಡಿಯನ್ ಸೇರಿ ಐವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಸಿಐಸಿಐ ಬ್ಯಾಂಕ್ ಎಟಿಎಂ ಘಟಕದ ಯಂತ್ರಗಳಿಗೆ ತುಂಬಬೇಕಿದ್ದ ₹ 24.17 ಲಕ್ಷ ಸಮೇತ ಪರಾರಿಯಾಗಿದ್ದ ಕಸ್ಟೋಡಿಯನ್ ಸೇರಿ ಐವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕ್ಯಾಶ್ ಮ್ಯಾನೇಜ್‌ಮೆಂಟ್ ಆ್ಯಂಡ್ ಪೇಮೆಂಟ್ ಸಲ್ಯೂಷನ್ಸ್ (ಸಿ.ಎಂ.ಎಸ್) ಕಂಪನಿ ವ್ಯವಸ್ಥಾಪಕ ಸಿದ್ದರಾಜು ಕಳ್ಳತನ ಸಂಬಂಧ ದೂರು ನೀಡಿದ್ದರು. ಬಂಧಿತರಿಂದ ಸುಮಾರು ₹ 21 ಲಕ್ಷ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮಾಜಿ ಉದ್ಯೋಗಿಯ ಸಂಚು: ‘ಸಿ.ಎಂ.ಎಸ್ ಕಂಪನಿಯಲ್ಲಿದ್ದ ಪ್ರಮುಖ ಆರೋಪಿ, ಕೆಲ ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟಿದ್ದ. ಎಟಿಎಂ ಘಟಕಗಳಿಗೆ ಹಣ ತುಂಬುವ ವಿಷಯ ಆತನಿಗೆ ಗೊತ್ತಿತ್ತು. ಕಡಿಮೆ ಸಮಯದಲ್ಲಿ ಹೆಚ್ಚು ಹಣ ಸಂಪಾದಿಸಬೇಕೆಂದು ತೀರ್ಮಾನಿಸಿದ್ದ ಈತ, ಹಾಲಿ ಉದ್ಯೋಗಿಗಳ ಜೊತೆ ಸೇರಿ ಸಂಚು ರೂಪಿಸಿ ಕೃತ್ಯ ಎಸಗಿದ್ದ’ ಎಂದು ಅಧಿಕಾರಿ ತಿಳಿಸಿದರು.

‘ವಿವಿಧ ಬ್ಯಾಂಕ್‌ಗಳ ಎಟಿಎಂ ಘಟಕಗಳಿಗೆ ಹಣ ತುಂಬುವ ಜವಾಬ್ದಾರಿಯನ್ನು ಸಿ.ಎಂ.ಎಸ್ ಕಂಪನಿ ವಹಿಸಿಕೊಂಡಿದೆ. ಕಸ್ಟೋಡಿಯನ್ ಹಾಗೂ ಇತರರು, ₹ 32 ಲಕ್ಷ ಸಮೇತ ಎಟಿಎಂ ಘಟಕಗಳತ್ತ ತೆರಳಿದ್ದರು. ತಮ್ಮ ಬಳಿಯ ಐಡಿ ನಂಬರ್ ಬಳಸಿ ಕೆಲ ಯಂತ್ರಗಳಿಗೆ ಹಣ ತುಂಬಿದ್ದರು. ₹ 24.17 ಲಕ್ಷ ಉಳಿಸಿಕೊಂಡಿದ್ದ ಆರೋಪಿಗಳು, ಅದರ ಸಮೇತ ಪರಾರಿಯಾಗಿದ್ದರು’ ಎಂದು ಹೇಳಿದರು.


‘ಜುಲೈ 7ರಂದು ಮತ್ತೊಂದು ತಂಡದ ಸಿಬ್ಬಂದಿ, ಹಣ ತುಂಬಲು ಎಟಿಎಂ ಘಟಕಕ್ಕೆ ಹೋದಾಗ ಕಳ್ಳತನ ಸಂಗತಿ ಗೊತ್ತಾಗಿತ್ತು. ಸ್ಥಳ ಪರಿಶೀಲನೆ ನಡೆಸಿದಾಗ, ಸಿಬ್ಬಂದಿಯೇ ಹಣ ಕದ್ದುಕೊಂಡು ಹೋಗಿರುವುದು ಮೇಲ್ನೋಟಕ್ಕೆ ಕಂಡುಬಂದಿತ್ತು’ ಎಂದರು.

‘ಕಳ್ಳತನ ಬಳಿಕ ತಲಾ ₹ 5 ಲಕ್ಷ ಹಂಚಿಕೊಂಡಿದ್ದ ಆರೋಪಿಗಳು, ನಗರ ತೊರೆದಿದ್ದರು. ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ತಲೆಮರೆಸಿಕೊಂಡಿದ್ದರು’ ಎಂದು ಅಧಿಕಾರಿ ತಿಳಿಸಿದರು.

ಬಿಜೆಪಿ ಮುಖಂಡ ಮಣಿಕಂಠ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಚಿತ್ತಾಪುರ: ಸ್ಥಳೀಯ ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್ ಆಗಿರುವ ಅಶ್ವಥರಾಮ ತುಕಾರಾಮ ರಾಠೋಡ್ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವ ಹಾಗೂ ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಅವರನ್ನು ಬಂಧಿಸಿ ಬಿಡುಗಡೆ ಮಾಡಿರುವ ಘಟನೆ ಶುಕ್ರವಾರ ಜರುಗಿದೆ.



ಮಣಿಕಂಠ ರಾಠೋಡ್

ಕಳೆದ ಮೇ 10ರಂದು ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಣಿಕಂಠ ರಾಠೋಡ್ ಅವರ ವಿರುದ್ಧ ದಾಖಲಾಗಿರುವ ವಿವಿಧ ಪ್ರಕರಣಗಳಡಿ ಅವರನ್ನು ವಶಕ್ಕೆ ಪಡೆದ ಪೊಲೀಸ್ ಅಧಿಕಾರಿಗಳು ತೀವ್ರ ವಿಚಾರಣೆ ನಂತರ ಠಾಣೆಯಲ್ಲಿಯೇ ಜಾಮೀನು ನೀಡಿ ಬಿಡುಗಡೆ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರ ಪೊಲೀಸರು ಮಣಿಕಂಠ ಅವರ ಧ್ವನಿ ಮಾದರಿ ಸಂಗ್ರಹ ಮಾಡಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಆರೋಪದ ಬೆನ್ನಲ್ಲೆ ಬಂಧನ: ಸಚಿವ ಪ್ರಿಯಾಂಕ್ ಖರ್ಗೆ ಅವರ ಕೈಗೊಂಬೆಯಾಗಿರುವ ಪೊಲೀಸರು ಬಿಜೆಪಿ ಕಾರ್ಯಕರ್ತರನ್ನು ಟಾರ್ಗೆಟ್ ಮಾಡಿ ಪ್ರಕರಣ ದಾಖಲಿಸುತ್ತಿದ್ದಾರೆ ಎಂದು ಅಶ್ವಥರಾಮ ರಾಠೋಡ್ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದರು. ಅದರ ಬೆನ್ನಲ್ಲೆ ಪೊಲೀಸರು ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

ಎಚ್ಚರಿಕೆ ವಹಿಸಲು ಡಿಜಿಪಿ ಡಾ.ಎಂ.ಎ. ಸಲೀಂ ಸಲಹೆ

‘ನಲವತ್ತೈದು ರೀತಿಯ ಸೈಬರ್ ವಂಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಜಿಟಲ್ ಕ್ರಾಂತಿಯಾದಂತೆ ಅದೇ ವೇಗದಲ್ಲಿ ಸೈಬರ್ ಅಪರಾಧ ಪ್ರಕರಣಗಳೂ ದೇಶದಾದ್ಯಂತ ಹೆಚ್ಚುತ್ತಿವೆ. 45 ಬಗೆಯ ಸೈಬರ್ ವಂಚನೆ ಪ್ರಕರಣಗಳು ನಡೆಯುತ್ತಿವೆ’ ಎಂದು ಸಿಐಡಿ ಡಿಜಿಪಿ ಡಾ.ಎಂ.ಎ. ಸಲೀಂ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಲ್ಲಿ ಶನಿವಾರ ಆಯೋಜಿಸಿದ್ದ ‘ಸೈಬರ್ ಅಪರಾಧಗಳು ಹಾಗೂ ಕೃತಕ ಬುದ್ಧಿಮತ್ತೆ ಸಾಮರ್ಥ್ಯ’ ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಒಟಿಪಿ ವಂಚನೆ, ಒಎಲ್‌ಎಕ್ಸ್ ಹಾಗೂ ಇತರ ವಸ್ತುಗಳ ಮಾರಾಟ ಜಾಲತಾಣ, ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್ ವಿಡಿಯೊ ಕರೆ, ಡೆಬಿಟ್–ಕ್ರೆಡಿಟ್ ಕಾರ್ಡ್ ಸ್ಕಿಮ್ಮಿಂಗ್, ಲಿಂಕ್ ಕಳುಹಿಸಿ ವಂಚನೆ, ಉಡುಗೊರೆ ಆಮಿಷ, ಹೂಡಿಕೆ, ಟ್ರೇಡಿಂಗ್ ಆ್ಯಪ್ ವಂಚನೆ, ವೈವಾಹಿಕ ಜಾಲತಾಣ ವಂಚನೆ, ಎನಿ ಡೆಸ್ಕ್, ಟೀಮ್ ವ್ಯೀವರ್, ಕ್ವಿಕ್ ಸಪೋರ್ಟ್, ಉದ್ಯೋಗದ ಹೆಸರಿನಲ್ಲಿ, ಸಿಮ್ ಕಾರ್ಡ್ ಬ್ಲಾಕ್, ನಕಲಿ ಖಾತೆ ಸೃಷ್ಟಿಸಿ ವಂಚನೆ... ಹೀಗೆ ನಾನಾ ಸ್ವರೂಪದಲ್ಲಿ ವಂಚನೆ ಪ್ರಕರಣಗಳು ನಡೆಯುತ್ತಿವೆ. ಇದರ ಬಗ್ಗೆ ಎಲ್ಲರೂ ಎಚ್ಚರಿಕೆ ವಹಿಸಬೇಕು’ ಎಂದು ಸಲೀಂ ಹೇಳಿದರು.

‘ಶೇ 5ರಷ್ಟು ಸಾಮಾನ್ಯ ಅಪರಾಧಗಳು ನಡೆದರೆ, ಶೇ 20ರಷ್ಟು ಸೈಬರ್ ಅಪರಾಧಗಳು ನಡೆಯುತ್ತಿವೆ. ದಾಖಲಾದ ಪ್ರಕರಣಗಳ ಪೈಕಿ ಶೇ 17ರಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ’ ಎಂದು ವಿವರಿಸಿದರು.



ನಗರದಲ್ಲಿ ಎಫ್‌ಕೆಸಿಸಿಐ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಸಿಐಡಿ ಡಿಜಿಪಿ ಡಾ.ಎಂ.ಎ. ಸಲೀಂ (ಎಡದಿಂದ ಎಡನೆಯವರು) ಅವರಿಗೆ ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ.ಗೋಪಾಲ್ ರೆಡ್ಡಿ ನೆನಪಿನ ಕಾಣಿಕೆ ನೀಡಿದರು. ಹಿರಿಯ ಉಪಾಧ್ಯಕ್ಷ ರಮೇಶ್ ಚಂದ್ರ ಲಾಹೋಟಿ, ಉಪಾಧ್ಯಕ್ಷ ಎಂ.ಜೆ ಬಾಲಕೃಷ್ಣ ಇದ್ದರು

– ಪ್ರಜಾವಾಣಿ ಚಿತ್ರ

‘ಶಿಕ್ಷಣವನ್ನು ಅರ್ಧದಲ್ಲೇ ಮೊಟಕುಗೊಳಿಸಿದವರು ಈ ಜಾಲದಿಂದ ಸುಲಭವಾಗಿ ಹಣ ಮಾಡಲು ಬರುತ್ತಿದ್ದಾರೆ. ಆರೋಪಿಗಳು ಹಿಂದುಳಿದ ಪ್ರದೇಶಗಳಿಂದ ಬಂದವರೇ ಹೆಚ್ಚು. ವಂಚನೆ ನಡೆಯುತ್ತಿರುವುದು ಗೊತ್ತಾದ ತಕ್ಷಣವೇ ಸೈಬರ್ ಠಾಣೆಗಳಿಗೆ ದೂರು ನೀಡಬೇಕು. ಬ್ಯಾಂಕ್ ಖಾತೆಗಳ ಬಗ್ಗೆ ಸದಾ ಎಚ್ಚರಿಕೆ ವಹಿಸಬೇಕು. ಬೆಂಗಳೂರಿನಲ್ಲಿ ಉತ್ತಮ ಸೈಬರ್ ಲ್ಯಾಬ್ ಇದೆ. ಸೈಬರ್ ತಜ್ಞರ ಸಲಹೆ ಪಡೆದು ಪ್ರಕರಣ ಪತ್ತೆ ಹಚ್ಚಲಾಗುತ್ತಿದೆ’ ಎಂದರು.

ಎಫ್‌ಕೆಸಿಸಿಐಯ ಐಟಿ–ಬಿಟಿ ಸಮಿತಿ ಮುಖ್ಯಸ್ಥೆ ರೂಪಾ ರಾಣಿ ಮಾತನಾಡಿ, ‘ತಂತ್ರಜ್ಞಾನ ಆಧಾರಿತ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಕಷ್ಟಪಟ್ಟು ಉಳಿಸಿದ ಹಣ ಕ್ಷಣಾರ್ಧದಲ್ಲಿ ಖಾತೆಯಿಂದ ಖಾಲಿ ಆಗುತ್ತಿದೆ’ ಎಂದು ಹೇಳಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ. ಗೋಪಾಲರೆಡ್ಡಿ ಮಾತನಾಡಿ, ‘ತಂತ್ರಜ್ಞಾನ ನಿರೀಕ್ಷೆಗೂ ಮೀರಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಆದರೆ, ಜನಸಾಮಾನ್ಯರು ಹಾಗೂ ಉದ್ದಿಮೆದಾರರಿಗೆ ಸೈಬರ್ ಅಪರಾಧ ಭಯ ಕಾಡುತ್ತಿದೆ. ಸಂಸ್ಥೆಗಳ ದತ್ತಾಂಶ ಸುರಕ್ಷಿತವಾಗಿ ಕಾಪಾಡಿಕೊಳ್ಳುವುದೇ ಸವಾಲಿನಿಂದ ಕೂಡಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಕಂಪನಿಗಳ ದತ್ತಾಂಶ ಕದಿಯುವವರ ಸಂಖ್ಯೆ ಹೆಚ್ಚಾಗಿದೆ. ಕಂಪನಿಗಳಿಗೆ ಸಂಬಂಧಿಸಿದ ಪಾಸ್‌ವರ್ಡ್ ಅನ್ನು ಬೇರೆ ಯಾರಿಗೂ ನೀಡಬಾರದು. ಅನುಮಾನ ಬಂದರೆ ಸೈಬರ್ ಠಾಣೆಗೆ ಮಾಹಿತಿ ನೀಡಬೇಕು

ಡಾ.ಎಂ.ಎ.ಸಲೀಂ, ಡಿಜಿಪಿ, ಸಿಐಡಿ

‘ಸರ್ಕಾರದ ಯೋಜನೆಗೆ ನಕಲಿ ಆ್ಯಪ್’

ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ ಹಾಗೂ ಗೃಹಜ್ಯೋತಿಗೆ ಸಂಬಂಧಿಸಿದಂತೆ ನಕಲಿ ಆ್ಯಪ್ ಸೃಷ್ಟಿಸಿರುವ ಸೈಬರ್ ವಂಚಕರು ಸಾರ್ವಜನಿಕರ ವೈಯಕ್ತಿಕ ಮಾಹಿತಿ ಕಲೆ ಹಾಕಿ ದುರ್ಬಳಕೆ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ. ಜನ ಸಾಮಾನ್ಯರು ಈ ಬಗ್ಗೆ ಎಚ್ಚರಿಕೆ ವಹಿಸುವಂತೆ ಸಲೀಂ ತಿಳಿಸಿದರು.

ಎಸ್‌ಟಿಗೆ ಸೇರಿಸಿ: ಕೊಡವ ಬುಡಕಟ್ಟು ಜನಾಂಗ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡವ ಬುಡಕಟ್ಟು ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು, ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕಾಂಗ್ರೆಸ್ ಶಾಸಕ ಎ.ಎಸ್. ಪೊನ್ನಣ್ಣ ಅವರ ನೇತೃತ್ವದಲ್ಲಿ ತಮ್ಮನ್ನು ಶನಿವಾರ ಭೇಟಿ ಮಾಡಿದ ಕೊಡವ ರಾಷ್ಟ್ರೀಯ ಮಂಡಳಿಯ ನಿಯೋಗಕ್ಕೆ ಮುಖ್ಯಮಂತ್ರಿ ಈ ಭರವಸೆ ನೀಡಿದರು.

‘ಕೊಡಗರು ಎಂದು ನಮೂದಾಗಿರುವ ಕೊಡವ ಸಮುದಾಯದ ಹೆಸರನ್ನು ಕೊಡವ ಎಂದು ತಿದ್ದುಪಡಿ ಮಾಡಿ ಗೆಜೆಟ್ ಅಧಿಸೂಚನೆ ಹೊರಡಿಸಲು ಕೂಡ ಕ್ರಮ ವಹಿಸಲಾಗುವುದು’ ಎಂದರು. ಕೊಡವ ರಾಷ್ಟ್ರೀಯ ಮಂಡಳಿ ಎನ್. ಯು. ನಾಚಪ್ಪ ನೇತೃತ್ವದ 30 ಜನರ ನಿಯೋಗ ಮತ್ತು ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಕೆ.ಟಿ. ಪೆಮ್ಮಯ್ಯ, ಉಪಾಧ್ಯಕ್ಷ ಕರ್ನಲ್ ವಿವೇಕ್ ಮುತ್ತಣ್ಣ ಮತ್ತಿತರರು ಇದ್ದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಶೀಘ್ರ ಜಾರಿ: ಉಪ ಮುಖ್ಯಮಂತ್ರಿ ಶಿವಕುಮಾರ್

ನಾಗರಿಕರ ಮನೆಗೇ ಆಸ್ತಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ಮನೆ ಬಾಗಿಲಿಗೇ ಆಸ್ತಿ ದಾಖಲೆಗಳನ್ನು ತಲುಪಿಸುವ ವ್ಯವಸ್ಥೆಯನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಶೀಘ್ರ ಜಾರಿಗೊಳಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಶನಿವಾರ ಬ್ರ್ಯಾಂಡ್ ಬೆಂಗಳೂರು ಕುರಿತು ನಡೆದ ಸಂವಾದ ಕಾರ್ಯಕ್ರಮದ ನಂತರ ಸುದ್ದಿಗಾರರ ಜತೆ ಮಾತನಾಡಿದರು.

ಮುಖ್ಯಮಂತ್ರಿಯಾಗಿದ್ದ ಎಸ್.ಎಂ ಕೃಷ್ಣ ಅವರ ಅವಧಿಯಲ್ಲಿ ರೈತರ ಮನೆಬಾಗಿಲಿಗೆ ಪಹಣಿ ನೀಡುವ ‘ಭೂಮಿ’ ವ್ಯವಸ್ಥೆ ಜಾರಿಗೆ ತರಲಾಗಿತ್ತು. ಅದೇ ಮಾದರಿಯಲ್ಲಿ ಬೆಂಗಳೂರಿನ ನಾಗರಿಕರಿಗೂ ಸೌಲಭ್ಯ ಕಲ್ಪಿಸಲಾಗುವುದು. ಇದರಿಂದ ಯಾರ ಬಳಿ ಎಷ್ಟು ಆಸ್ತಿ ಇದೆ ಎಂಬ ಮಾಹಿತಿ ಹಾಗೂ ತೆರಿಗೆ ಪಾವತಿಯ ಸ್ಪಷ್ಟಚಿತ್ರಣ ದೊರಕಲಿದೆ.



ವಿಧಾನಸೌಧದಲ್ಲಿ ಶನಿವಾರ ಆಯೋಜಿಸಿದ್ದ ‘ಬ್ರ್ಯಾಂಡ್ ಬೆಂಗಳೂರು’ ಸಂವಾದ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು. ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ವಿವಿಧ ನಾಗರಿಕ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಕಾನೂನು ಪ್ರಕಾರ ತೆರಿಗೆ ಕಟ್ಟುವವರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು. ತೆರಿಗೆ ವಂಚನೆ ತಡೆಗಟ್ಟಿ, ಆದಾಯ ಸಂಗ್ರಹಕ್ಕೆ ಆದ್ಯತೆ ನೀಡಲಾಗುವುದು. ಕೈಗೆತ್ತಿಕೊಂಡಿರುವ ಯೋಜನೆಗಳಿಗೆ ಅಗತ್ಯ ಸಂಪನ್ಮೂಲ ಸಂಗ್ರಹಿಸಲಾಗುವುದು ಎಂದರು.

ಬೆಂಗಳೂರು ಅಭಿವೃದ್ಧಿ ವಿಚಾರದಲ್ಲಿ ಇದುವರೆಗೆ ಸಾರ್ವಜನಿಕರು, ಸಂಘಸಂಸ್ಥೆಗಳಿಂದ ಮೂವತ್ತು ಸಾವಿರಕ್ಕೂ ಹೆಚ್ಚು ಸಲಹೆಗಳು ಬಂದಿವೆ. ವಾರ್ಡ್‌ವಾರು ಸಭೆಗಳನ್ನು ಆಯೋಜಿಸಲಾಗುವುದು. ಆ ಮೂಲಕ ಸ್ಥಳೀಯ ನಾಗರಿಕರ ಅಭಿಪ್ರಾಯ ಪಡೆಯಲಾಗುವುದು.

ವಿದ್ಯಾರ್ಥಿಗಳ ಸಲಹೆಗಾಗಿ ಪ್ರೌಢಶಾಲೆ, ಕಾಲೇಜುಗಳಲ್ಲಿ ಸಂವಾದ, ಚರ್ಚೆ ಆಯೋಜಿಸಲಾಗುವುದು ಎಂದರು.

ಪಾದಚಾರಿ ಮಾರ್ಗ ತೆರವು: ನಗರದ ಪಾದಚಾರಿ ಮಾರ್ಗಗಳ ಅತಿಕ್ರಮಣ ತೆರವಿಗೆ ಕಾರ್ಯಾಚರಣೆ ಆರಂಭಿಸಲಾಗುವುದು. ಬೀದಿಬದಿ ವ್ಯಾಪಾರಿಗಳ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಘನತ್ಯಾಜ್ಯ ಸುಗಮ ನಿರ್ವಹಣೆಗೂ ಒತ್ತು ನೀಡಲಾಗುವುದು. ವಾಹನಗಳು ಘನತ್ಯಾಜ್ಯ ವಿಲೇವಾರಿ ಮಾಡುವ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು. ಬೆಂಗಳೂರಿನ ಸ್ವಚ್ಛತೆಗೆ ಇದೇ ತಿಂಗಳಲ್ಲಿ ಕೆಲ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು. ಫ್ಲೆಕ್ಸ್, ಹೋರ್ಡಿಂಗ್ಸ್‌ಗಳ ಅಳವಡಿಕೆಗೆ ನೂತನ ಜಾಹೀರಾತು ನೀತಿ ರೂಪಿಸಲಾಗುವುದು ಎಂದರು.

ಪಿಆರ್‌ಆರ್‌ಗೆ ಡೆವಲಪರ್‌ಗಳಿಂದ ಹಣ

ಪೆರಿಫೆರಲ್ ವರ್ತುಲ್ ರಸ್ತೆ ಯೋಜನೆಯತ್ತ ಡಿಸಿಎಂ ಚಿತ್ತ

• ನವೀನ್ ಮಿನೇಜಸ್

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 65 ಕಿ.ಮೀ ಪೆರಿಫೆರಲ್ ವರ್ತುಲ್ ರಸ್ತೆ (ಪಿಆರ್‌ಆರ್) ಯೋಜನೆ ಪುನರಾರಂಭಿಸುವ ಚರ್ಚೆ ಆರಂಭಿಸಿದ್ದಾರೆ. ದೀರ್ಘಕಾಲದಿಂದ ಬಾಕಿಯಿರುವ ದೊಡ್ಡ ಯೋಜನೆಗಳನ್ನು ಪ್ರಾರಂಭಿಸಲು ಉದ್ಯಮಿಗಳು, ಡೆವಲಪರ್‌ಗಳು ಸೇರಿದಂತೆ ಹೊಸ ಮೂಲಗಳಿಂದ ಆರ್ಥಿಕ ಸಂಪನ್ಮೂಲ ಸಂಗ್ರಹಿಸಲು ಮುಂದಾಗಿದ್ದಾರೆ.

ಹೊಸೂರು ರಸ್ತೆ ಮತ್ತು ತುಮಕೂರು ರಸ್ತೆ ನಡುವಿನ ಅಧಿಸೂಚಿತ 2,500 ಎಕರೆ ಪ್ರದೇಶವನ್ನು ವೈಮಾನಿಕ ಸಮೀಕ್ಷೆ ನಡೆಸಲು ಯೋಜಿಸಿದ್ದಾರೆ. ಈ ಸಮೀಕ್ಷೆಯಿಂದ ಪ್ರಸ್ತುತ ಅಧಿಸೂಚಿಸಿರುವ ಭೂಮಿಯಲ್ಲೇ ಯೋಜನೆ ಮುಂದುವರಿಯಬೇಕೇ ಅಥವಾ ಬದಲಿಸಬೇಕೇ ಎಂಬ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಯೋಜಿಸಲಾಗಿದೆ.

‘ಒಂದು ಯೋಜನೆಗೆ ಸರ್ಕಾರ ದೊಡ್ಡ ಮೊತ್ತವನ್ನು ವಿನಿಯೋಗಿಸಲು ಸಾಧ್ಯವಿಲ್ಲ. ಹೀಗಾಗಿ ಖಾಸಗಿ ಹೂಡಿಕೆಯ ಅವಕಾಶಗಳತ್ತ ದೃಷ್ಟಿಹರಿಸಲಾಗಿದೆ. ಈ ಮೂಲಕ ಸರ್ಕಾರ ಹಾಗೂ ಹೂಡಿಕೆದಾರರಿಗೂ ಅನುಕೂಲವಾಗಬೇಕು. ಈ ಯೋಜನೆಗೆ 25 ಸಾವಿರ ಕೋಟಿಯ ಅಗತ್ಯವಿದೆ’ ಎಂದು ತಿಳಿಸಿದರು.

‘ಯೋಜನೆಗೆ ಭೂಮಿ ಕಳೆದುಕೊಳ್ಳುವವರಿಗೆ, ಸ್ವಾಧೀನ ಅಧಿಸೂಚನೆಯಾದ ಸಂದರ್ಭದಲ್ಲಿನ ನಿಯಮಗಳಂತೆ ಪರಿಹಾರ ಒದಗಿಸಲು ಸುಪ್ರೀಂಕೋರ್ಟ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹೇಳಿದೆ. ರೈತರು ಹಳೆಯ ಪರಿಹಾರಕ್ಕೆ ಒಪ್ಪುತ್ತಿಲ್ಲ. ಈ ಪರಿಹಾರದ ಬಗ್ಗೆ ಸ್ಪಷ್ಟತೆ ಇಲ್ಲದ್ದರಿಂದ ಯೋಜನೆಗೆ ಬಿಡ್ ಮಾಡಲು ಯಾರು ಮುಂದಾಗುತ್ತಿಲ್ಲ. ಈ ಪಿಆರ್‌ಆರ್ ಯೋಜನೆಯಿಂದ ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆ ಕಡಿಮೆಯಾಗಲಿದೆ’ ಎಂದರು.

‘ಪಿಆರ್‌ಆರ್ ಯೋಜನೆಯಿಂದ ಭೂಮಾಲೀಕರಿಗೆ ಹೆಚ್ಚಿನ ಪ್ರಯೋಜನವಾಗಲಿದೆ. ದೊಡ್ಡ ಭೂಮಾಫಿಯಾ ಇದರ ಹಿಂದೆ ಇದೆ ಎಂಬ ಸಂಶಯವಿದೆ. ಆದ್ದರಿಂದ, ಪ್ರಯೋಜನ ಪಡೆಯುವವರು ಯೋಜನೆಗೆ ಹಣ ಒದಗಿಸುವ ಮಾದರಿಗಳತ್ತ ನಾವು ಚರ್ಚೆ ನಡೆಸುತ್ತಿದ್ದೇವೆ’ ಎಂದು ಹೇಳಿದರು.

2013ರ ಕಾಯ್ದೆಯಂತೆ ಪರಿಹಾರ ನೀಡಬೇಕೆಂದು ಒತ್ತಾಯಿಸುತ್ತಿರುವ ರೈತರನ್ನು ಭೇಟಿ ಮಾಡಲು ಮತ್ತು ಈ ಯೋಜನೆಗೆ ಹೂಡಿಕೆ ಮಾಡಲು ಉದ್ಯಮಿಗಳೊಂದಿಗೆ ಮಾತುಕತೆ ನಡೆಸಲು ಡಿ.ಕೆ. ಶಿವಕುಮಾರ್ ಯೋಜಿಸುತ್ತಿದ್ದಾರೆ ಎಂದು ಆಪ್ತ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು (ಎನ್‌ಎಚ್‌ಎಐ) ಈ ಯೋಜನೆಯಲ್ಲಿ ತೊಡಗಿಸಿಕೊಳ್ಳಲು ಸಚಿವರಿಗೆ ಮನಸ್ಸಿಲ್ಲ. ಹೈದರಾಬಾದ್‌ನಲ್ಲಿ ನಿರ್ಮಿಸಿರುವ ಬೃಹತ್ ರಸ್ತೆಗಳ ಮಾದರಿಗಳ ಅಧ್ಯಯನ ನಡೆಸುವಂತೆ ಬಿಡಿಎ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ.

ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ಬದಲು

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಅಧ್ಯಕ್ಷ ಹಾಗೂ ಸದಸ್ಯ ಕಾರ್ಯದರ್ಶಿ ಮಧ್ಯದ ಸಂಘರ್ಷ ತಾರಕಕ್ಕೇರಿದ್ದು, ಸದಸ್ಯ ಕಾರ್ಯದರ್ಶಿ ನೇಮಕವನ್ನು ಅಧ್ಯಕ್ಷರು ವಾಪಸ್ ಪಡೆದಿದ್ದಾರೆ.

ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿದ್ದ ಗಿರೀಶ್ ಅವರನ್ನು ಸರ್ಕಾರ ಕಿಯೊನಿಕ್ಸ್‌ಗೆ ವರ್ಗಾವಣೆ ಮಾಡಿತ್ತು. ಆಗ ಮಂಡಳಿಯ ಐಟಿ ವ್ಯವಸ್ಥಾಪಕ ಸೂರಿ ಪಾಯಲ ಅವರಿಗೆ ಸದಸ್ಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ಜೂ. 7ರಂದು ವಹಿಸಲಾಗಿತ್ತು.

ಅಧ್ಯಕ್ಷ ಶಾಂತ್ ತಮ್ಮಪ್ಪ ಹಾಗೂ ಸೂರಿ ನಡುವೆ ಮಂಡಳಿ ಕಾರ್ಯಗಳಲ್ಲಿ ಗೊಂದಲ ಸೃಷ್ಟಿಯಾಗಿತ್ತು. ಮಂಡಳಿಯ ಹಲವು ಸುತ್ತೋಲೆ ಮತ್ತು ಆದೇಶವನ್ನು ಅಧ್ಯಕ್ಷರ ಸಮ್ಮತಿ ಇಲ್ಲದೆ ಸೂರಿ ಹೊರಡಿಸಿದ್ದಾರೆ. ಜಲ ನೀತಿ 1976ರ ಅನ್ವಯ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಜೂನ್ 7ರಿಂದ ಜುಲೈ 10ರವರೆಗಿನ ಹಲವು ಸುತ್ತೋಲೆ, ಕಾನೂನು ಸಲಹಾ ಸಮಿತಿಯ ಅಧ್ಯಕ್ಷರ ಅಭಿಪ್ರಾಯಗಳನ್ನು ಉಲ್ಲೇಖಿಸಿರುವ ಅಧ್ಯಕ್ಷ ಶಾಂತ್ ತಮ್ಮಯ್ಯ, ಜುಲೈ 15ರಂದು ಸದಸ್ಯ ಕಾರ್ಯದರ್ಶಿ ಹುದ್ದೆಯನ್ನು ಸೂರಿಯಿಂದ ಹಿಂಪಡೆದಿದ್ದಾರೆ.

ಸದಸ್ಯ ಕಾರ್ಯದರ್ಶಿ ಹುದ್ದೆಗೆ ಮುಖ್ಯ ಪರಿಸರ ಅಧಿಕಾರಿ–1 ಹುದ್ದೆಯಲ್ಲಿರುವ ಟಿ. ಮಹೇಶ್ ಅವರಿಗೆ ಹೆಚ್ಚುವರಿಯಾಗಿ ವಹಿಸಿ ಅಧ್ಯಕ್ಷರು ಆದೇಶಿಸಿದ್ದಾರೆ.

ಕೆರೆ ಒತ್ತುವರಿ: ತಹಶೀಲ್ದಾರ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಬಾಣಸವಾಡಿ ಕೆರೆ ಒತ್ತುವರಿ ಪ್ರಕರಣವನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಸ್ವಪ್ರೇರಣೆಯಿಂದ ದಾಖಲಿಸಿಕೊಂಡು, ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್‌ಗೆ ನೋಟಿಸ್ ನೀಡಿದೆ.

ಜೂ. 30ರಂದು ‘ಬಾಣಸವಾಡಿ ಕೆರೆ ಮತ್ತೊಮ್ಮೆ ಒತ್ತುವರಿ’ ಶೀರ್ಷಿಕೆಯಡಿ ‘ಪ್ರಜಾವಾಣಿ’ ವರದಿ ಪ್ರಕಟಿಸಿತ್ತು . ಇದನ್ನು ಪರಿಗಣಿಸಿರುವ ನ್ಯಾಯಾಲಯ, ಕೃಷ್ಣರಾಜಪುರ ಬಾಣಸವಾಡಿ ಸರ್ವೆ ನಂ. 211ರಲ್ಲಿ 42 ಎಕರೆ 38 ಗುಂಟೆ ಕೆರೆ ಅಂಗಳದಲ್ಲಿ 3ನೇ ಬಾರಿಗೆ ಒತ್ತುವರಿಯಾಗಿದೆ. ಕಟ್ಟಡಗಳು ನಿರ್ಮಾಣವಾಗಿವೆ. ಈ ಬಗ್ಗೆ ವರದಿ ನೀಡಿ ಎಂದಿದೆ.

ಕೆರೆ ಅಂಗಳದ ಅತಿಕ್ರಮಣದ ಬಗ್ಗೆ, ಅತಿಕ್ರಮಣ ಮಾಡಿದ ವ್ಯಕ್ತಿಗಳು ಮತ್ತು ಪ್ರತಿಯೊಬ್ಬರ ಒತ್ತುವರಿಯ ವಿಸ್ತೀರ್ಣ ಹಾಗೂ ಸರ್ವೆ ಸ್ಕೆಚ್ ಜೊತೆಗೆ ಆ.18ರೊಳಗೆ ವಿಶೇಷ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ತಹಶೀಲ್ದಾರ್‌ಗೆ ಸೂಚಿಸಲಾಗಿದೆ ಎಂದು ಅಭಿಯೋಜಕರು ತಿಳಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗೆ ₹9 ಕೋಟಿ ಮೌಲ್ಯದ ಭೂಮಿ ದೇಣಿಗೆ

ಪ್ರಜಾವಾಣಿ ವಾರ್ತೆ

ಕಾರಟಗಿ (ಕೊಪ್ಪಳ ಜಿಲ್ಲೆ): 100 ಹಾಸಿಗೆ ಸಾಮರ್ಥ್ಯವಿರುವ ಸರ್ಕಾರಿ ಆಸ್ಪತ್ರೆ ನಿರ್ಮಿಸಲು ಇಲ್ಲಿನ ಎಲ್‌ವಿಟಿ ಸಮೂಹ ಸಂಸ್ಥೆಯು ಪಟ್ಟಣದಿಂದ 3 ಕಿ.ಮೀ ದೂರದಲ್ಲಿಯ ಚಳ್ಳೂರಕ್ಯಾಂಪ್ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಸುಮಾರು ₹ 9 ಕೋಟಿ ಬೆಲೆ ಬಾಳುವ 6 ಎಕರೆ ಭೂಮಿ ದಾನ ಮಾಡಲು ಮುಂದಾಗಿದೆ.

ಎಲ್‌ವಿಟಿ ಸಮೂಹ ಸಂಸ್ಥೆಯ ಮುಖ್ಯಸ್ಥ ಕೆ.ಸಣ್ಣಸೂಗಪ್ಪ, ಸಹೋದರ ಕೆ. ನಾಗಪ್ಪ, ಪುತ್ರ ನಾಗರಾಜ್ ಅವರು ರಾಜಭವನದಲ್ಲಿ ಬುಧವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ಆಸ್ಪತ್ರೆಗೆ ಭೂಮಿ ದಾನ ಮಾಡುವ ವಿಷಯ ತಿಳಿಸಿದರು. ಭೂಮಿ ಹಸ್ತಾಂತರದ ಪ್ರಕ್ರಿಯೆಯನ್ನು ಶೀಘ್ರವೇ ಮುಗಿಸಿಕೊಳ್ಳುವಂತೆ ಆಸ್ಪತ್ರೆ ಆಡಳಿತಕ್ಕೆ ರಾಜ್ಯಪಾಲರು ಸೂಚಿಸಿದ್ದರು.

ಪಟ್ಟಣದಲ್ಲಿ 100 ಹಾಸಿಗೆಯ ಆಸ್ಪತ್ರೆ ನಿರ್ಮಿಸಲು 6 ಎಕರೆ ಭೂಮಿ ಅಗತ್ಯವಿರುವ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಎಲ್‌ವಿಟಿ ಸಮೂಹ ಸಂಸ್ಥೆಯ ಮುಖ್ಯಸ್ಥರೊಂದಿಗೆ ಈ ಹಿಂದೆ ಚರ್ಚಿಸಿದ್ದರು. ಶೀಘ್ರದಲ್ಲೇ ನೋಂದಣಿ ಕಾರ್ಯ ಪೂರ್ಣಗೊಳ್ಳಲಿದೆ. ಬಳಿಕ ಆಸ್ಪತ್ರೆ ನಿರ್ಮಾಣದ ಮುಂದಿನ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಸಚಿವ ಶಿವರಾಜ್ ತಂಗಡಗಿ ಅವರು ಡಿಎಚ್‌ಒ ಡಾ.ಲಿಂಗರಾಜ್ ಅವರಿಗೆ ಹೇಳಿದ್ದಾರೆ’ ಎಂದು ಆಡಳಿತ ವೈದ್ಯಾಧಿಕಾರಿ ತಿಳಿಸಿದರು.

ಚೀತಾಗೆ ಮೃತ್ಯುವಾದ ರೇಡಿಯೊ ಕಾಲರ್!

ಶಿವಪುರ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿನ ಎರಡು ಗಂಡು ಚೀತಾಗಳ ಸಾವಿಗೆ ರಕ್ತದ ನಂಜು (ಸೆಪ್ಟಿಸೇಮಿಯಾ) ಕಾರಣವಾಗಿರುವ ಸಂಗತಿ ಬಯಲಾಗಿದೆ.

ಈ ಸಿವಂಗಿಗಳ ಚಲನವಲನ ಕುರಿತ ಅಧ್ಯಯನಕ್ಕೆ ಕೊರಳಿಗೆ ತೊಡಿಸಿದ್ದ ರೇಡಿಯೊ ಕಾಲರ್ ಅವುಗಳಿಗೆ ಮೃತ್ಯುವಾಗಿ ಪರಿಣಮಿಸಿದೆ.

ದಕ್ಷಿಣ ಆಫ್ರಿಕಾದಿಂದ ತಂದಿದ್ದ ‘ತೇಜಸ್’ ಹಾಗೂ ‘ಸೂರಜ್’ ಹೆಸರಿನ ಚೀತಾಗಳು ಒಂದು ವಾರದ ಅವಧಿಯಲ್ಲಿ ಮೃತಪಟ್ಟಿದ್ದವು. ಇವುಗಳ ಸಾವಿನೊಂದಿಗೆ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಉದ್ಯಾನದಲ್ಲಿ ಮೃತಪಟ್ಟ ಚೀತಾಗಳ ಸಂಖ್ಯೆ 8ಕ್ಕೇರಿತ್ತು. ಇದು ಭಾರತದಲ್ಲಿ ಅವುಗಳ ಸಂತತಿ ಪುನರುತ್ಥಾನ ಯೋಜನೆ ಬಗ್ಗೆ ಹಲವು ಪ್ರಶ್ನೆಗಳನ್ನು ಮುಂದಿಟ್ಟಿತ್ತು.

‘ಉದ್ಯಾನದಲ್ಲಿ ಹೆಚ್ಚಿನ ಆರ್ದ್ರ ವಾತಾವರಣವಿದ್ದು, ಇದರಿಂದ ಅವುಗಳ ಕೊರಳಿಗೆ ತೊಡಿಸಿದ್ದ ರೇಡಿಯೊ ಕಾಲರ್‌ನಿಂದ ಗಾಯಗೊಂಡು ಸೋಂಕು ತಗುಲಿದೆ. ಇದರಿಂದ ರಕ್ತವು ವಿಷವಾಗಿ ಮಾರ್ಪಟ್ಟು ಚೀತಾಗಳನ್ನು ಬಲಿ ಪಡೆದಿದೆ’ ಎಂದು ಚೀತಾ ಸಂತತಿ ಪುನರುತ್ಥಾನ ಯೋಜನೆಯ ವ್ಯವಸ್ಥಾಪಕ ಮತ್ತು ಚೀತಾ ಸಂರಕ್ಷಕ ವಿನ್ಸೆಂಟ್ ವ್ಯಾನ್ ಡೆರ್ ಮೆರ್ವೆ ಸುದ್ದಿಸಂಸ್ಥೆಗೆ ಖಚಿತಪಡಿಸಿದ್ದಾರೆ.

‘ಯಾವುದೇ ಪ್ರಾಣಿಗಳಿಂದ ಇವುಗಳು ಗಾಯಗೊಂಡಿಲ್ಲ. ರಕ್ತ ವಿಷಗೊಂಡಿದ್ದರಿಂದ ಅಸುನೀಗಿವೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತದಲ್ಲಿ ಚೀತಾ ಸಂತತಿ ಪುನರುತ್ಥಾನ ಯೋಜನೆಯ ಭವಿಷ್ಯ ಕುರಿತು ಪ್ರತಿಕ್ರಿಯಿಸಿದ ಅವರು, ‘ಪುನರುತ್ಥಾನ ಯೋಜನೆಯ ಅನುಷ್ಠಾನದಲ್ಲಿ ನೈಸರ್ಗಿಕ ಸಾವು ಸಹಜವಾದುದು. ಇದು ಸರಾಸರಿ ಸಾವಿನ ಪ್ರಮಾಣವನ್ನು ದಾಟಿಲ್ಲ. ಭಾರತಕ್ಕೆ ತಂದಿರುವ ಚೀತಾಗಳ ಪೈಕಿ ಶೇ 75ರಷ್ಟು ಜೀವಂತವಾಗಿದ್ದು, ಆರೋಗ್ಯವಾಗಿವೆ. ಹಾಗಾಗಿ, ಆತಂಕಪಡಬೇಕಿಲ್ಲ’ ಎಂದಿದ್ದಾರೆ.

ಅರಣ್ಯ ಇಲಾಖೆ ಹೇಳಿದ್ದೇನು?: ಇತರೇ ಚೀತಾಗಳ ನಡುವೆ ಕಾದಾಟ ನಡೆಸಿದ ವೇಳೆ ‘ತೇಜಸ್’ ಮೃತಪಟ್ಟಿರಬಹುದು ಎಂದು ಅರಣ್ಯ ಅಧಿಕಾರಿಗಳು ಹೇಳಿದ್ದರು. ಇದಕ್ಕೆ ಅದರ ಕೊರಳಿನ ಸುತ್ತ ಗಾಯಗಳಾಗಿರುವುದನ್ನು ಅವರು ಸಕಾರಣ ನೀಡಿದ್ದರು. ಜೊತೆಗೆ, ‘ಸೂರಜ್’ ಕೊರಳು ಮತ್ತು ಹಿಂಭಾಗದಲ್ಲಿ ಗಾಯದ ಗುರುತುಗಳಾಗಿದ್ದು, ತಪಾಸಣೆ ವೇಳೆ ಕಂಡುಬಂದಿತ್ತು.

‘ಎರಡೂ ಚೀತಾಗಳ ಮರಣೋತ್ತರ ಪರೀಕ್ಷಾ ವರದಿಯನ್ನು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ರವಾನಿಸಲಾಗಿದೆ’ ಎಂದು ಪ್ರತಿಕ್ರಿಯಿಸಿದ ಕುನೊ ಉದ್ಯಾನದ ನಿರ್ದೇಶಕ ಉತ್ತಮ್ ಶರ್ಮಾ, ವರದಿಯ ಬಗ್ಗೆ ಗುಟ್ಟು ಬಿಟ್ಟುಕೊಡಲಿಲ್ಲ.

ಏನಿದು ವಿಷರಕ್ತ ಆಘಾತ?

ಗಾಯಗೊಂಡಾಗ ದೇಹವೊಕ್ಕುವ ಬ್ಯಾಕ್ಟೀರಿಯಾಗಳು ಯಾವುದಾದರೊಂದು ಅಂಗದಲ್ಲಿ ಸೇರಿಕೊಂಡು ನಂಜು ಉಂಟು ಮಾಡುತ್ತವೆ. ಕೆಲವೊಮ್ಮೆ ಉಸಿರಾಟದ ಮೂಲಕವೂ ದೇಹ ಸೇರುವ ಇವು ಶ್ವಾಸಕೋಶವನ್ನು ಸೇರುತ್ತವೆ. ಅಲ್ಲಿ ನಂಜು ಉಂಟು ಮಾಡಿ ನೇರವಾಗಿ ನೆತ್ತರನ್ನು ಸೇರುತ್ತವೆ.

ರಕ್ತದಲ್ಲಿ ನಂಜು ಹೆಚ್ಚಾದಾಗ ಅದು ವಿಷವಾಗಿ ಪರಿಣಮಿಸುತ್ತದೆ. ಇಂತಹ ವಿಷ ರಕ್ತವು ದೇಹದಲ್ಲಿ ಸಂಚರಿಸಿದಾಗ ಎಲ್ಲಾ ಅಂಗಗಳಿಗೂ ನಂಜು ಹರಡುತ್ತದೆ. ಇದು ಬಹುಅಂಗಾಂಗ ವೈಫಲ್ಯಕ್ಕೆ ಕಾರಣವಾಗುತ್ತದೆ. ದೇಹದ ತುಂಬೆಲ್ಲಾ ನಂಜು ಹರಡುವ ಕ್ರಿಯೆಗೆ ವಿಷರಕ್ತ ಆಘಾತ ಅಥವಾ ನೆತ್ತರು ನಂಜು (ಸೆಪ್ಟಿಸೇಮಿಯಾ) ಎಂದು ಕರೆಯಲಾಗುತ್ತದೆ.

ಮಣಿಪುರ ಚಲೊ ಬೆಂಬಲಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪುರ ಚಲೊ ಬೆಂಬಲಿಸಿ ಅಖಿಲ ಕರ್ನಾಟಕ ಕ್ರೈಸ್ತ ಮಾನವ ಹಕ್ಕುಗಳ ಒಕ್ಕೂಟ ವೇದಿಕೆಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

ಮಾಜಿ ಸಂಸದರಾದ ಮಾರ್ಗರೇಟ್ ಅಳ್ವ, ಆರ್ಚ್ ಬಿಷಪ್ ಪೀಟರ್ ಮಚಾಡೊ, ರೆವರೆಂಡ್ ಡೆಕ್ಸ್‌ವೆರ್, ಹ್ಯಾರಿ ಪೆರೆರಾ, ಅಖಿಲ ಕರ್ನಾಟಕ ಕ್ರೈಸ್ತ ಮಹಾಸಭೆಯ ಪ್ರದೀಪ್ ಸ್ವಾಮಿ, ವಿವಿಧ ಚರ್ಚ್‌ಗಳ ಫಾದರ್ ಹಾಗೂ ಮಣಿಪುರ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಮುಖಂಡ ಬರ್ತ್ ಲೋಮ ಮಾತನಾಡಿ, ಮಣಿಪುರದಲ್ಲಿ ಕೇವಲ ಒಂದು ಸಮುದಾಯದ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಅನೇಕ ಕ್ರೈಸ್ತ ಸಮುದಾಯದವರು ಮೃತಪಟ್ಟಿದ್ದಾರೆ ಎಂದರು. ‘ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಭೇಟಿ ರಕ್ಷಣೆ ಕೊಡುವ ಭರವಸೆ ನೀಡಿಲ್ಲ. ಕ್ರೈಸ್ತ ಸಮುದಾಯ ಸಹ ನಿಮ್ಮನ್ನು ಪ್ರೀತಿಯಿಂದ ಕಂಡಿದ್ದಾರೆ. ಕೇಂದ್ರ ಸರ್ಕಾರದ ಈ ನಡೆ ಖಂಡನೀಯ’ ಎಂದರು.

‘ಸರ್ಕಾರ ನೈತಿಕತೆ ಕಳೆದುಕೊಂಡಿದೆ’

ಚಿಕ್ಕಮಗಳೂರು: ‘ಕಾಂಗ್ರೆಸ್ ಸರ್ಕಾರದ ಕೃಪಾ ಕಟಾಕ್ಷದಲ್ಲಿ ರಾಜ್ಯದಲ್ಲಿ ಕೊಲೆಗಳು ನಡೆಯುತ್ತಿವೆ. ಎರಡೇ ತಿಂಗಳಲ್ಲಿ ರಾಜ್ಯ ಸರ್ಕಾರ ನೈತಿಕತೆ ಕಳೆದುಕೊಂಡಿದೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,‘ಜೈನ ಮುನಿ ಕೊಲೆಯಾಗಿದೆ, ಬೆಂಗಳೂರಿನಲ್ಲಿ ಟೆಕಿಗಳ ಹತ್ಯೆಯಾಗಿದೆ. ಉಳ್ಳಾಲದಲ್ಲಿ ಬಿಜೆಪಿ ಕಾರ್ಯಕರ್ತನ ಶವ ನೀರಿನಲ್ಲಿ ಸಿಗುತ್ತದೆ. ಹನುಮ ಜಯಂತಿ ಯಶಸ್ವಿಯಾಗಿಸಿದ್ದ ವೇಣುಗೋಪಾಲ್ ಕೊಲೆಯಾಗಿದೆ. ಇವೆಲ್ಲವನ್ನು ನೋಡಿದರೆ ರಾಜ್ಯದಲ್ಲಿ ಸರ್ಕಾರದ ಕೃಪೆಯಲ್ಲೇ ಕೊಲೆಗಳಾಗುತ್ತಿವೆ’ ಎಂದು ಆರೋಪಿಸಿದರು.

₹4 ಕೋಟಿ ಮೌಲ್ಯದ ಒತ್ತುವರಿ ತೆರವು

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ₹ 4.05 ಕೋಟಿ ಮೌಲ್ಯದ 3 ಎಕರೆ 10 ಗುಂಟೆ ಪ್ರದೇಶದ ಒತ್ತುವರಿ ತೆರವುಗೊಳಿಸಲಾಗಿದೆ.

5 ಕೆರೆ, ಕಟ್ಟೆ, ಕುಂಟೆ ಹಳ್ಳಗಳಲ್ಲಿ 1 ಎಕರೆ 13 ಗುಂಟೆ ಒತ್ತುವರಿಯಾಗಿತ್ತು. ಯಲಹಂಕ ತಾಲ್ಲೂಕಿನಲ್ಲಿ ಸರ್ಕಾರಿ ಗೋಮಾಳ 18 ಗುಂಟೆ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಬೀಳು 1 ಎಕರೆ, ಬೆಂಗಳೂರು ಉತ್ತರ ಮತ್ತು ಆನೇಕಲ್ ತಾಲ್ಲೂಕಿನಲ್ಲಿ ಖರಾಬ್ 12 ಗುಂಟೆ, ಯಲಹಂಕ, ಆನೇಕಲ್ ತಾಲ್ಲೂಕಿನಲ್ಲಿ ಸ್ಮಶಾನ ಭೂಮಿ 12 ಗುಂಟೆ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ ಎಂದು ಎಂದು ಜಿಲ್ಲಾಧಿಕಾರಿ ಕೆ.ಎ. ದಯಾನಂದ ತಿಳಿಸಿದ್ದಾರೆ.

ಮಳೆಗಾಲದ 'ಯಕ್ಷ' ಸಂಕಟ



ಕಾಸರಗೋಡು ಎಡನೀರು ಮಠದ ಶ್ರೀಗಳ ಚಾತುರ್ಮಾಸ್ಯದ ಅಂಗವಾಗಿ ಜುಲೈ 3ರಂದು ನಡೆದ ವಿವಿಧ ಮೇಳಗಳ ಕಲಾವಿದರ ಕೂಡುವಿಕೆಯ ಆಖ್ಯಾಯಂಬರ ಪ್ರಸಂಗ.

ಒಂದನೇ ಪುಟದಿಂದ...

ಇಲ್ಲಿ ಉದಾಹರಿಸಿದ ಪ್ರಸಂಗಗಳು ಸ್ವಲ್ಪ ಉತ್ಪ್ರೇಕ್ಷಿತವೇ ಎನಿಸಿದರೂ, ಪರಿಸ್ಥಿತಿ ತುಂಬಾ ಭಿನ್ನವಾಗಿಲ್ಲ.

ಸ್ವಲ್ಪ ಸುಧಾರಿಸಿದೆ: ಕೆಲವು ವರ್ಷಗಳ ಹಿಂದಿನವರೆಗೂ ಯಕ್ಷಗಾನ ಕಲಾವಿದರಿಗೆ ಮಳೆಗಾಲವೆಂದರೆ ಭಯ ಹುಟ್ಟುತ್ತಿತ್ತು. ಕಲೆಯನ್ನೇ ನಂಬಿದ್ದವರಿಗೆ ಈ ಆರು ತಿಂಗಳು ಅರೆ ಹೊಟ್ಟೆಯ ಜೀವನವಾಗಿರುತ್ತಿತ್ತು. ಈ ಆರು ತಿಂಗಳಲ್ಲಿ ಗದ್ದೆ ಕೆಲಸ, ಕೂಲಿ-ನಾಲಿ ಮಾಡುತ್ತಿದ್ದ ನೂರಾರು ಕಲಾವಿದರು ಕಾಣಸಿಗುತ್ತಿದ್ದರು. ಕೆಲವರಿಗೆ ಸ್ವಂತ ಜಮೀನು ಇದ್ದು, ಅಂಥವರು ತಮ್ಮದೇ ಹೊಲ-ಗದ್ದೆಯಲ್ಲಿ ಕೆಲಸ ಮಾಡಿ ಆರ್ಥಿಕವಾಗಿ ಸದೃಢರಾಗುತ್ತಿದ್ದರು. ಕೆಲವರು ಮಳೆಗಾಲದ ಖರ್ಚಿಗೆಂದೇ ಮೇಳದ ಯಜಮಾನರಿಂದ ಮುಂಗಡ ಹಣ ಪಡೆದಿರುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ.

ಎಲ್ಲರೂ ಪರ್ಯಾಯಗಳನ್ನು ಹುಡುಕಿದ್ದಾರೆ. ಕೂಲಿ ಮಾಡುವವರು, ಅಡಿಕೆ ಸುಲಿಯುವವರು ಈಗಲೂ ಇಲ್ಲವೆಂದಲ್ಲ, ಅದರ ಹೊರತಾಗಿಯೂ ಮಳೆಗಾಲದಲ್ಲಿ ಸಂಪಾದನೆಯ ದಾರಿಗಳನ್ನು ಹಲವರು ಕಂಡುಕೊಂಡಿದ್ದಾರೆ. ಇವರಲ್ಲಿ ಕೆಲವರು ಆಯ್ಕೆ ಮಾಡಿರುವ ಮಾರ್ಗಗಳ ಬಗ್ಗೆ ಹಿರಿಯ ಕಲಾವಿದರ ಆಕ್ಷೇಪವೂ ಇದೆ.

ಚಿಕ್ಕಮೇಳ: ಉಡುಪಿ- ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಚಿಕ್ಕ ಮೇಳಗಳ ಸಂಖ್ಯೆ ಹೆಚ್ಚಿದೆ. ಇಬ್ಬರು ವೇಷಧಾರಿಗಳು ಹಾಗೂ ಹಿಮ್ಮೇಳದಲ್ಲಿ ಮೂವರು ಹೀಗೆ ಒಟ್ಟು ಐವರು ಕಲಾವಿದರನ್ನು ಒಳಗೊಂಡ ಈ ತಂಡಗಳು ಮನೆಮನೆಗೆ ಹೋಗಿ ಅರ್ಧಗಂಟೆ- ಒಂದು ಗಂಟೆ ಪ್ರದರ್ಶನ ನೀಡುತ್ತವೆ. ಮನೆಯವರು ಹಣದ ಜೊತೆಗೆ ಅಕ್ಕಿ, ತೆಂಗಿನ ಕಾಯಿ, ಹಣ್ಣು ಹಂಪಲ ನೀಡುತ್ತಾರೆ. 'ಇಂಥ ಕಲಾವಿದರಿಗೆ ದಿನಕ್ಕೆ ಸಾವಿರ ರೂಪಾಯಿ ಗೌರವಧನ ಹಾಗೂ ಸಿಕ್ಕಿದ ಅಕ್ಕಿ, ಕಾಯಿಯಲ್ಲಿ ಪಾಲು ನೀಡಲಾಗುತ್ತದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಲಾವಿದರೊಬ್ಬರು ಹೇಳಿದರು.

'ಚಿಕ್ಕಮೇಳದಲ್ಲಿ ಈಚೆಗೆ ಹೆಚ್ಚು ಆದಾಯ ಬರುತ್ತಿದೆ. ಆದ್ದರಿಂದ ಮೇಳಗಳ ಸಂಖ್ಯೆ ಹೆಚ್ಚಾಗುತ್ತಿದೆ. ವಾಸ್ತವದಲ್ಲಿ ಇದರಲ್ಲಿ ಕಲೆಯ ಅಂಶ ಇರುವುದು ಅತ್ಯಲ್ಪ. ಇದು ಕಲೆಯೂ ಅಲ್ಲ, ಕಲಾವಿದರ ಆದಾಯದ ಮೂಲವಾಗಿಯಷ್ಟೇ ಇದೆ' ಎನ್ನುತ್ತಾರೆ ಅವರು.

ಇನ್ನೂ ಕೆಲವು ಮೇಳದವರು ಬೇರೆಬೇರೆ ಊರುಗಳಿಗೆ, ವಿಶೇಷವಾಗಿ ಬೆಂಗಳೂರು, ಮುಂಬೈಗೆ ಹೋಗಿ ಪ್ರದರ್ಶನ ನೀಡುತ್ತಾರೆ. ಈಗಲೂ ಅಲ್ಲಿ ಪ್ರದರ್ಶನಗಳಿಗೆ ಅವಕಾಶ ಇದ್ದರೂ ಆದಾಯ ಕಡಿಮೆಯಾಗಿದೆ. ಆದ್ದರಿಂದ ಒಂದೆರಡು ಮೇಳದವರು ಹಾಗೂ ಹೆಚ್ಚು ಖ್ಯಾತಿ ಪಡೆದ ಕಲಾವಿದರಷ್ಟೇ ಹೋಗುತ್ತಾರೆ. ಉಳಿದವರು ತಮ್ಮ ಊರಿನಲ್ಲೇ ಬೇರೆಬೇರೆ ಕೆಲಸ ಮಾಡುತ್ತಾರೆ.

'ಕಲಾವಿದರಿಗೆ ಹಿಂದೆ ಇದ್ದಷ್ಟು ಕಷ್ಟ ಈಗ ಇಲ್ಲ. ಬೇರೆಬೇರೆ ಉಪ ವೃತ್ತಿಗಳು ತೆರೆದುಕೊಂಡಿವೆ. ಸ್ವಲ್ಪ ಹೆಸರು ಗಳಿಸಿರುವ ಕಲಾವಿದರು ಸ್ವಂತ ಒಂದಿಷ್ಟು ಆಸ್ತಿ ಪಾಸ್ತಿ ಮಾಡಿಕೊಂಡಿದ್ದಾರೆ. 'ಇನ್ನೂ ಕೆಲವರು ಯಕ್ಷಗಾನ ತರಗತಿಗಳನ್ನು ನಡೆಸುತ್ತಾರೆ. ಅಲ್ಲಿ- ಇಲ್ಲಿ ಪ್ರದರ್ಶನಗಳನ್ನು ನೀಡುತ್ತಾರೆ. ಹೇಗೋ ಸಂಪಾದನೆ ಆಗುತ್ತದೆ' ಎಂದು ಹಿರಿಯ ಕಲಾವಿದ ತಾರಾನಾಥ ವರ್ಕಾಡಿ ಹೇಳುತ್ತಾರೆ.

'ಈಚಿನ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ಹಗಲು ಹೊತ್ತಿನಲ್ಲಿ ಬೇರೆ ವೃತ್ತಿ ಮಾಡುವವರು, ರಾತ್ರಿ ವೇಳೆಯಲ್ಲಿ ವೇಷ ಹಾಕಿ ಪ್ರದರ್ಶನ ನೀಡುತ್ತಾರೆ. ಇಂಥವರಿಗೆ ಯಕ್ಷಗಾನ ಒಂದು ಉಪವೃತ್ತಿ. ಇವರಿಗೆ ಮಳೆಗಾಲದಲ್ಲಿ ಮೂಲ ವೃತ್ತಿಯಿಂದ ವೇತನ ಬರುತ್ತಿರುತ್ತದೆ. ಜೀವನಕ್ಕೆ ಯಾವುದೇ ತೊಂದರೆ ಆಗುವುದಿಲ್ಲ' ಎಂದು ವರ್ಕಾಡಿ ಹೇಳುತ್ತಾರೆ.

ವೃತ್ತಿಪರ ಮೇಳಗಳಲ್ಲಿ ಎರಡು- ಮೂರು ಮೇಳದವರು ಮಳೆಗಾಲದ ಆರು ತಿಂಗಳಲ್ಲಿ ಕಲಾವಿದರಿಗೆ ಒಂದಷ್ಟು ಮಾಸಾಶನ ನೀಡುತ್ತಿದ್ದಾರೆ. ಹೆಚ್ಚಿನ ಮೇಳದವರು ಏನನ್ನೂ ಕೊಡುವುದಿಲ್ಲ ಎಂದು ಕಲಾವಿದರು ಹೇಳುತ್ತಾರೆ. ಕಲಾವಿದರಿಗೆ ಆ ಬಗ್ಗೆ ಬೇಸರವೇನೂ ಇದ್ದಂತಿಲ್ಲ. ಆದರೆ ತಮಗೆ ಸಮಾಜದಲ್ಲಿ ಗೌರವ ಹಾಗೂ ಒಂದಿಷ್ಟು ಜೀವನ ಭದ್ರತೆ ಸಿಗಬೇಕು ಎಂದು ಬಯಸುತ್ತಾರೆ.

ಬದುಕಿನ ಚೌಕಿಯಲ್ಲಿ ಬಣ್ಣ ಮಸುಕು

ಪರಿಸ್ಥಿತಿ ಎಲ್ಲಾ ಕಡೆ ಒಂದೇ ರೀತಿಯಾಗಿರುವುದಿಲ್ಲ. 'ಬದುಕಿನ 'ಚೌಕಿ'ಯಲ್ಲಿ ಬಹುತೇಕ ಯಕ್ಷ ಕಲಾವಿದರು ಬಣ್ಣ ಕಳೆದುಕೊಳ್ಳುತ್ತಿದ್ದಾರೆ. ವೃದ್ಧಾಪ್ಯದ ಭದ್ರತೆಯ ನಿರೀಕ್ಷೆಯಲ್ಲಿ ದಿನ ಕಳೆಯುತ್ತಿದ್ದಾರೆ. ಕಲೆಯನ್ನೇ ವೃತ್ತಿಯಾಗಿಸಿಕೊಂಡವರಿಗೆ ಬೇರೆ ವೃತ್ತಿ ಕಷ್ಟಸಾಧ್ಯ. ಯಕ್ಷಗಾನ ಹೊರತುಪಡಿಸಿ ಬೇರೆ ಕೆಲಸ ಗೊತ್ತಿಲ್ಲದವರಿಗೆ ಅನಿಶ್ಚಿತತೆ ಸಹಜವಾಗಿ ಕಾಡುತ್ತದೆ' ಎಂದು ಹಾಸ್ಯ ಕಲಾವಿದ ಶ್ರೀಧರ ಹೆಗಡೆ ಚಪ್ಪರಮನೆ ಹೇಳುವಾಗ, ಅವರ ಮುಖದಲ್ಲಿ ವಿಷಾದದ ಗೆರೆಗಳು ಮೂಡಿದ್ದವು.

ಯಕ್ಷರಂಗದಲ್ಲಿ ಹಾಸ್ಯದ ಮೂಲಕ ಪ್ರೇಕ್ಷಕರನ್ನು ನಗಿಸುವಲ್ಲಿ ಹೆಸರಾಗಿರುವ ಅವರು, ಯಕ್ಷಗಾನದಲ್ಲೇ ಹಲವು ವರ್ಷಗಳಿಂದ ಜೀವನ ನಡೆಸಿದ್ದಾರೆ. ಕಲಾವಿದರು ಬೆಳೆದಿದ್ದು, ಖ್ಯಾತಿಗಳಿಸಿದ್ದು, ಯಶಸ್ಸು ಕಾಣದೇ ಬಿದ್ದಿದ್ದು, ಸಂಕಷ್ಟದಲ್ಲೇ ಬದುಕು ಕಟ್ಟಿಕೊಂಡಿದ್ದು ಎಲ್ಲವನ್ನೂ ಬದುಕಿನಲ್ಲಿ ಕಂಡಿದ್ದಾರೆ.

'ತಿರುಗಾಟ ಮುಗಿದ ಬಳಿಕ ಪ್ರದರ್ಶನ ಇಲ್ಲದಿರುವಾಗ ಸಮಸ್ಯೆ ಕಾಣುತ್ತದೆ. ಇದಕ್ಕೆ ಸರ್ಕಾರ ಅಥವಾ ಅಕಾಡೆಮಿ ನೇರ ಹೊಣೆಯಲ್ಲ, ಆದರೆ, ಸಂಪೂರ್ಣ ನಿರ್ಲಕ್ಷ್ಯವೂ ಸಲ್ಲ. ಕಲಾವಿದರಿಗೆ ಯಕ್ಷಗಾನ ಅಕಾಡೆಮಿಯಿಂದ ಗುರುತಿನ ಕಾರ್ಡ್ ವಿತರಿಸಬೇಕು ಎಂಬ ಬೇಡಿಕೆ ವರ್ಷಗಳಿಂದ ಇದ್ದರೂ ಅದು ಈಡೇರಿಲ್ಲ' ಎನ್ನುತ್ತಾರೆ.

'ಕಲಾವಿದರು ಖರ್ಚುವೆಚ್ಚಗಳ ಮೇಲೆ ಸ್ವಯಂ ನಿಯಂತ್ರಣ ಹಾಕಿಕೊಳ್ಳುತ್ತಾರೆ. ದುಡಿಯುವ ಸಂದರ್ಭದಲ್ಲಿ ಸ್ವಲ್ಪ ಹಣ ಕೂಡಿಟ್ಟು ಮುಂದಿನ ಪ್ರದರ್ಶನದವರೆಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೂ ಬದುಕಿನ ಅವಶ್ಯಕತೆಗಳ ಎದುರು ಸೋಲುವುದೇ ಹೆಚ್ಚು' ಎಂದು ಕಲಾವಿದರ ಬದುಕನ್ನು ಅವರು ತೆರೆದಿಡುತ್ತಾರೆ.

'ಯಕ್ಷಗಾನದಲ್ಲಿ ವಿವಿಧ ತಿಟ್ಟುಗಳು (ಪ್ರಕಾರಗಳು) ಸಮನ್ವಯ ಸಾಧಿಸಬೇಕು. ಯಕ್ಷಗಾನ ಶಾಸ್ತ್ರೀಯವೇ, ಜನಪದೀಯವೇ ಎಂಬ ದ್ವಂದ್ವ ಬಿಡಬೇಕು. ಪ್ರತಿ ತಿಟ್ಟನ್ನು ಅಂಗೀಕರಿಸುವ ಮನೋಭಾವ ಬಂದರೆ ಯಕ್ಷಗಾನದ ವಿಸ್ತಾರ ಹೆಚ್ಚುತ್ತದೆ. ಹಾಗಾದರೆ ಕಲಾವಿದರಿಗೂ ಸಂಭಾವನೆ ಹೆಚ್ಚುತ್ತದೆ. ಈ ನಿಟ್ಟಿನಲ್ಲಿ ಅಕಾಡೆಮಿ ಶ್ರಮಿಸುವ ಅಗತ್ಯವಿದೆ' ಎಂಬುದು ಅವರ ವಾದ.




ಖ್ಯಾತ ಚಂಡೆ ವಾದಕ ವಿಘ್ನೇಶ್ವರ ಗೌಡ ಕೆಸರಕೊಪ್ಪ ಬಾಡಿಗೆ ವಾಹನ ಚಾಲನೆ ಮಾಡುತ್ತಿರುವುದು

ವೇದಿಕೆಯ ಮೇಲೆ ಚಂಡೆಯ ಅಬ್ಬರದ ಮೂಲಕ ಮನಮಾನಾಗಿರುವ ವಿಘ್ನೇಶ್ವರ ಗೌಡ ಕೆಸರಕೊಪ್ಪ ಅವರು ವೃತ್ತಿ ಬದುಕಿನ ಸಂಭಾವನೆ ಜೀವನ ನಿರ್ವಹಣೆಗೆ ಸಾಲದಾದಾಗ ಬಾಡಿಗೆ ವಾಹನ ಚಾಲನೆ ಮಾಡುತ್ತಾರೆ.

ರಂಗಶಂಕರ ಸಂಸ್ಥೆಯ ಶಂಕರ ಭಾಗವತ ಮಾಸಾಶನಕ್ಕೆ ಅಲೆದು ಸುಸ್ತಾಗಿ, 'ಕಲಾವಿದರು ಬದುಕಿರುವಾಗಲೇ ಅವರಿಗೆ ಮಾಸಾಶನ ಸಿಗುವಂತಹ ವ್ಯವಸ್ಥೆ ಆಗಬೇಕು. ಬಹುತೇಕ ಸಮಯವನ್ನು ಸಂಕಷ್ಟದಲ್ಲೇ ಕಳೆಯುವ ಕಲಾವಿದರಿಗೆ ಇಳಿವಯಸ್ಸಿನಲ್ಲಾದರೂ ನೆಮ್ಮದಿ ದೊರೆಯುವಂತೆ ಮಾಡಬೇಕು' ಎನ್ನುತ್ತಾರೆ.

ಪ್ರಸಿದ್ಧ ಭಾಗವತ ಕೊಳಗಿ ಕೇಶವ ಹೆಗಡೆ ಕೃಷಿ ಬದುಕನ್ನು ನೆಚ್ಚಿಕೊಳ್ಳುತ್ತಾರೆ.

'ಸರ್ಕಾರದ ನೆರವು ಬೇಕು'



ಜಿ.ಎಲ್. ಹೆಗಡೆ ಕುಮಟಾ

'ಯಕ್ಷಗಾನ ಬೆಳೆಸಲು ಸರ್ಕಾರ ಹಲವು ಮಗ್ಗುಲುಗಳಲ್ಲಿ ಕ್ರಮ ವಹಿಸುವ ಅಗತ್ಯವಿದೆ' ಎಂಬುದು ಯಕ್ಷಗಾನ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಜಿ.ಎಲ್. ಹೆಗಡೆ ಕುಮಟಾ ಅವರ ಅಭಿಪ್ರಾಯ.

'ಕಲಾವಿದರಿಗೆ ಅಕಾಡೆಮಿ ನೇರವಾಗಿ ಆರ್ಥಿಕ ನೆರವು ನೀಡುವುದಿಲ್ಲ. ಬದಲಾಗಿ ಯಕ್ಷಗಾನ ಕಮ್ಮಟ, ಪ್ರಯೋಗ, ಕಾರ್ಯಾಗಾರ, ತರಬೇತಿಗಳಿಗೆ ಅನುದಾನ ನೀಡುತ್ತದೆ. ಹೀಗಾಗಿ ಇಂಥ ಕಾರ್ಯಗಳಿಗೆ ಹೆಚ್ಚುವರಿ ಅನುದಾನ ಸರ್ಕಾರ ನೀಡಬೇಕು. ವಾರ್ಷಿಕವಾಗಿ ₹1.20 ಕೋಟಿ ಅನುದಾನ ಸಿಗುತ್ತಿದೆ. ಕೋವಿಡ್ ನಂತರ ₹60 ಲಕ್ಷ ಮಾತ್ರ ನೀಡಲಾಗುತ್ತಿದೆ. ಇದರಿಂದ ಕಾರ್ಯಕ್ರಮ ಸಂಘಟನೆಗೆ ಸಮಸ್ಯೆಯಾಗುತ್ತಿದೆ' ಎಂದು ಅವರು ಹೇಳುತ್ತಾರೆ.

'ರಾಜ್ಯದಲ್ಲಿ ಯಕ್ಷಗಾನ ಕಲಾವಿದರ ಸಮೀಕ್ಷೆ ಈವರೆಗೆ ಆಗಿಲ್ಲ. ಕೆಲ ಕಲಾವಿದರಿಗೆ ವೃದ್ಧಾಪ್ಯದಲ್ಲಿ ಔಷಧ ಖರ್ಚಾದರೂ ಸರಿದೂಗುತ್ತದೆ ಎಂಬ ಕಾರಣಕ್ಕೆ ₹5 ಸಾವಿರ ಸಹಾಯಧನ ನೀಡಲು ಸರ್ಕಾರದ ಎದುರು ಪ್ರಸ್ತಾವ ಇಡಲಾಗಿತ್ತು. ಆದರೆ, ಅನುಷ್ಠಾನವಾಗಿಲ್ಲ. ಸರ್ಕಾರದ ಮಾಸಾಶನ ಯೋಜನೆಯಡಿ ₹2 ಸಾವಿರ ಕೊಡುತ್ತಾರೆ. ಆದರೆ ಅದರ ಪ್ರಕ್ರಿಯೆ ತುಂಬ ತಡವಾಗುತ್ತದೆ. ಕಲಾವಿದರ ನೋಂದಣಿ ಪ್ರಕ್ರಿಯೆ ತೀರಾ ಕ್ಲಿಷ್ಟವಿದ್ದು, ಅದನ್ನು ಸರಳೀಕರಿಸಬೇಕು. ಉಡುಪಿಯಲ್ಲಿ ಇರುವ ಯಕ್ಷ ರಂಗಾಯಣದಂತೆ ಉತ್ತರ ಕನ್ನಡದಲ್ಲಿಯೂ ಯಕ್ಷ ರಂಗಾಯಣ ಅನುಷ್ಠಾನ ಮಾಡಬೇಕು' ಎಂಬುದು ಅವರು ಆಶಯ.



ತೋಟದ ಕೆಲಸದಲ್ಲಿ ನಿರತರಾಗಿರುವ ಸಿದ್ದಾಪುರದ ಕೇಶವ ಹೆಗಡೆ ಕೊಳಗಿ, ಭಾಗವತರು

ಇಂಥ ಸಾವಿರಾರು ಕಲಾವಿದರು ವೃತ್ತಿಗೂ, ವೃತ್ತಿಯಾಚೆಗೂ ಬಗೆಬಗೆಯ ಮುಖ ಧರಿಸಿ ಜೀವನ ಕಟ್ಟಿಕೊಳ್ಳುತ್ತಿದ್ದಾರೆ.

ಮುಂಬೈ ಈಗ ಬಲು ದೂರ

ಒಂದು ಕಾಲವಿತ್ತು... ಮಳೆಗಾಲ ಆರಂಭವಾಗುತ್ತಿದ್ದಂತೆ ಕರಾವಳಿ ಭಾಗದ ಯಕ್ಷಗಾನ ಮೇಳದವರು ಗಂಟು ಮೂಟೆ ಕಟ್ಟಿಕೊಂಡು ಮುಂಬೈ ಬಸ್ಸು ಹತ್ತಿಬಿಡುತ್ತಿದ್ದರು. ಮುಂಬೈಯ ಮಾಟುಂಗಾದಲ್ಲಿರುವ ಕರ್ನಾಟಕ ಸಂಘದ ಹವಾನಿಯಂತ್ರಿತ ಸಭಾಂಗಣದಲ್ಲಿ ಸುಮಾರು ಒಂದು ತಿಂಗಳ ಕಾಲ ನಿರಂತರ ಪ್ರದರ್ಶನ ನೀಡಿ, ಅರ್ಧ ವರ್ಷದ ಜೀವನಕ್ಕಾಗುವಷ್ಟು ಹಣ ಸಂಪಾದಿಸಿ ಊರಿಗೆ ಮರಳುತ್ತಿದ್ದರು.

ಮುಂಬೈಯಲ್ಲಿ ರಾತ್ರಿ ಇಡೀ ಪ್ರದರ್ಶನ ನಡೆಸಲು ಅನುಮತಿ ಇಲ್ಲದಿದ್ದರೂ, 'ಯಾವುದೋ ಮಾರ್ಗ'ದಲ್ಲಿ ಪ್ರದರ್ಶನಗಳನ್ನು ನಡೆಸಲಾಗುತ್ತಿತ್ತು. ಅಲ್ಲಿ ನೆಲೆಸಿರುವ, ಕರಾವಳಿ ಭಾಗದ ಜನರು ಟಿಕೆಟ್ ಖರೀದಿಸಿ ಪ್ರದರ್ಶನಕ್ಕೆ ಬರುತ್ತಿದ್ದರು. ಅಂತಹ ಮುಂಬೈ ಈಗ ಯಕ್ಷ ಕಲಾವಿದರಿಗೆ ದೂರವಾಗಿದೆ.

'ನವೀಕರಣಕ್ಕಾಗಿ ಕರ್ನಾಟಕ ಸಂಘದ ಕಟ್ಟಡವನ್ನು ಕೆಡವಲಾಗಿದೆ. ಬೇರೆಬೇರೆ ಉಪನಗರಗಳ ಸಭಾಂಗಣಗಳಲ್ಲಿ ಪ್ರದರ್ಶನ ನಡೆಸಬೇಕು. ರಾತ್ರಿಯಿಡೀ ಪ್ರದರ್ಶನಕ್ಕೆ ಅವಕಾಶವೇ ಇಲ್ಲ. ಟಿಕೆಟ್ ಖರೀದಿಸಿ ಆಟ ನೋಡಲು ಬರುವವರೂ ಇಲ್ಲ. ಪ್ರತಿ ಪ್ರದರ್ಶನಕ್ಕೂ ಪ್ರಾಯೋಜಕರನ್ನು ಹುಡುಕಬೇಕು. ಬರುವ ಪ್ರೇಕ್ಷಕರಿಗೆ ಟೀ–ಕಾಫಿ, ಕೆಲವೊಮ್ಮೆ ಊಟದ ವ್ಯವಸ್ಥೆಯನ್ನೂ ಮಾಡಬೇಕು. ಈಗಲೂ ಎರಡು ಮೇಳಗಳನ್ನು ಆಹ್ವಾನಿಸಿ ಪ್ರದರ್ಶನ ಏರ್ಪಡಿಸುತ್ತೇನೆ. ಸಂಪಾದನೆಗಾಗಿ ಅಲ್ಲ, ಕಲೆಯ ಮೇಲಿನ ಅಭಿಮಾನಕ್ಕೆ' ಎಂದು ಮೂರು ದಶಕಗಳಿಂದ ಮುಂಬೈಯಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸುತ್ತಾ ಬಂದಿರುವ ಮೋಹನ ರೈ ಹೇಳುತ್ತಾರೆ.



ಮೋಹನ ರೈ

'ಒಂದರನಂತರ ಒಂದರಂತೆ ಹೆಚ್ಚಿನ ಎಲ್ಲಾ ಮೇಳದವರನ್ನು ಮುಂಬೈಗೆ ಆಹ್ವಾನಿಸುತ್ತಿದ್ದೆ. ನನಗೂ ಒಳ್ಳೆಯ ಸಂಪಾದನೆಯಾಗುತ್ತಿತ್ತು. ಈಗ ಪೆರ್ಡೂರು ಮತ್ತು ಪಾವಂಜೆ ಮೇಳದವರು ಬಂದು ಪ್ರದರ್ಶನ ನೀಡುತ್ತಾರೆ. ಆದರೆ ತಿಂಗಳುಗಟ್ಟಲೆ ಪ್ರದರ್ಶನಗಳು ನಡೆಯುವುದಿಲ್ಲ. ಪ್ರಾಯೋಜಕರು ಸಿಕ್ಕಷ್ಟು ದಿನ, ಅಂದರೆ 10–15 ಪ್ರದರ್ಶನಗಳು ನಡೆಯುತ್ತವೆ' ಎಂದು ತಿಳಿಸಿದರು.

ಬಹುತೇಕ ಎಲ್ಲಾ ಪ್ರಸಂಗಗಳ ತುಣುಕುಗಳು ಈಗ ಯೂಟ್ಯೂಬ್, ಫೇಸ್‌ಬುಕ್‌ನಲ್ಲಿ ಲಭ್ಯ ಇರುತ್ತವೆ. ಆಸಕ್ತರು ಮನೆಯಲ್ಲೇ ಕುಳಿತು ಅಷ್ಟು–ಇಷ್ಟು ವೀಕ್ಷಿಸುತ್ತಾರೆ. ಆದ್ದರಿಂದ ಆಟ ನೋಡಲು ದುಡ್ಡುಕೊಟ್ಟು ಬರಬೇಕಾದ ಅಗತ್ಯವಿಲ್ಲ. ಸ್ಥಳೀಯವಾಗಿಯೂ ಕೆಲವರು ಯಕ್ಷಗಾನ ಕಲಿತು, ಆಗಾಗ ಇಲ್ಲಿ ಪ್ರದರ್ಶನ ನೀಡುತ್ತಾರೆ. ತಮ್ಮ ಮಕ್ಕಳ ಅಥವಾ ಸಂಬಂಧಿಕರ ವೇಷ ನೋಡಲು ಜನರು ಬರುತ್ತಾರೆ. ಒಟ್ಟಿನಲ್ಲಿ ಯಕ್ಷಗಾನದ ಚಟುವಟಿಕೆಗಳು ನಡೆಯುತ್ತಲೇ ಇವೆ, ಆದರೆ ಊರಿನ ಕಲಾವಿದರು ಬರುವುದು ಕಡಿಮೆಯಾಗಿದೆ ಎನ್ನುತ್ತಾರೆ ಮೋಹನ್.

'ಹಿಂದೆ ಕರಾವಳಿ ಭಾಗದ ಜನರು ಉದ್ಯೋಗಕ್ಕಾಗಿ ಬೆಂಗಳೂರಿಗಿಂತ ಮುಂಬೈ ಕಡೆಗೆ ಮುಖ ಮಾಡುತ್ತಿದ್ದರು. ಅಂಥವರಿಗೆ ಊರಿನ ಕಲೆಯ ಬಗ್ಗೆ ವಿಶೇಷವಾದ ಗೌರವ ಇತ್ತು. ಈಗ ಕರಾವಳಿ ಭಾಗದಿಂದ ಮುಂಬೈಗೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಇಲ್ಲಿಯೇ ಇರುವ ಹೊಸ ತಲೆಮಾರಿನವರಿಗೆ ಯಕ್ಷಗಾನದಲ್ಲಿ ಅಷ್ಟೊಂದು ರುಚಿ ಇಲ್ಲ. ಇದರಿಂದಾಗಿ ಪ್ರದರ್ಶನಗಳ ಸಂಖ್ಯೆ ಇಳಿಯುತ್ತಿದೆ' ಎಂದರು.'

ಪೂರಕ ಮಾಹಿತಿ: ರಾಜೇಂದ್ರ ಹೆಗಡೆ (ಶಿರಸಿ), ಬಾಲಚಂದ್ರ ಎಚ್. (ಉಡುಪಿ)

ಪ್ರಸಿದ್ಧರಿಗೆ ತಾರಾ ಪಟ್ಟ

ಬದುಕಿಗೆ ದಾರಿಯೇ ಇಲ್ಲದವರು ಯಕ್ಷಗಾನ ಕಲೆಯನ್ನು ನಂಬಿ ಬಂದು ಬದುಕು ಕಂಡುಕೊಂಡು, ದೊಡ್ಡ ಕಲಾವಿದರೆನಿಸಿದ ಉದಾಹರಣೆಗಳು ಸಾಕಷ್ಟಿವೆ. ಆದರೆ ಅಂಥವರಿಗೆ ತಾರಾ ಪಟ್ಟ ಇರಲಿಲ್ಲ. ಈಗ ಯಕ್ಷಗಾನ ಕ್ಷೇತ್ರ ಬದಲಾಗಿದೆ. ಸ್ವಲ್ಪ ಹೆಸರು ಮಾಡಿದ ಕಲಾವಿದರಿಗೆ ತಾರಾ ಪಟ್ಟ ಲಭಿಸುತ್ತದೆ. ಸಾಮಾಜಿಕ ಮಾಧ್ಯಮಗಳಲ್ಲಿ, ಸಭೆ ಸಮಾರಂಭಗಳಲ್ಲಿ ಮಿಂಚುತ್ತಾರೆ. ಸಣ್ಣ ಪುಟ್ಟ ಕಲಾವಿದರಿಗೆ ಇಂಥ ಭಾಗ್ಯ ಲಭಿಸುವುದಿಲ್ಲ.

ಪ್ರಸಿದ್ಧ ಕಲಾವಿದರಿಗಷ್ಟೆ ಮಳೆಗಾಲದ ಆಟಗಳಲ್ಲಿ ಹೆಚ್ಚು ಅವಕಾಶಗಳು ದೊರೆತರೆ, ಉಳಿದ ಕಲಾವಿದರು ಕೃಷಿ, ಹೈನುಗಾರಿಕೆ ಸೇರಿದಂತೆ ಇತರೆ ವೃತ್ತಿಗಳತ್ತ ಹೊರಳಿ ಬದುಕು ಕಟ್ಟಿಕೊಳ್ಳುತ್ತಾರೆ.

ಉಡುಪಿ ಜಿಲ್ಲೆಯೊಂದರಲ್ಲೇ 200ಕ್ಕೂ ಹೆಚ್ಚು ಹವ್ಯಾಸಿ ಯಕ್ಷಗಾನ ಮಂಡಳಿಗಳಿದ್ದು ಬೇಡಿಕೆಗೆ ಅನುಗುಣವಾಗಿ ಸಂಘದ ವಾರ್ಷಿಕೋತ್ಸವ, ಹಬ್ಬ ಹರಿದಿನಗಳು ಹಾಗೂ ಕೆಲವು ಖಾಸಗಿ ಸಮಾರಂಭಗಳಲ್ಲಿ ಪ್ರದರ್ಶನ ನೀಡುತ್ತಾರೆ. ಇಂಥ ಮೇಳಗಳಲ್ಲಿ ಶಿಕ್ಷಕರು, ಬ್ಯಾಂಕ್ ನೌಕರರು, ವೈದ್ಯರು, ಸೆಂಟ್ರಿಂಗ್ ಕೆಲಸ ಮಾಡುವವರು, ಕೃಷಿಕರು ಹೀಗೆ ಅನ್ಯ ವೃತ್ತಿಗಳಲ್ಲಿ ತೊಡಗಿಸಿಕೊಂಡವರು ಇರುತ್ತಾರೆ. ಮಳೆಗಾಲದ ಅವಧಿಯಲ್ಲಿ ಹವ್ಯಾಸಿ ಮೇಳಗಳ ಪ್ರದರ್ಶನ ಬೆರಳೆಣಿಕೆಯಷ್ಟು ಮಾತ್ರ. ಈ ಸಮಯವನ್ನು ಅವರು ತರಬೇತಿಗೆ ಬಳಸಿಕೊಳ್ಳುವುದು ಹೆಚ್ಚು. ಪ್ರಸಿದ್ಧ ಕಲಾವಿದರನ್ನು ಕರೆಸಿ ಭಾಷಾ ಶುದ್ಧಿ, ಸಂಭಾಷಣೆ, ನೃತ್ಯದ ಸೂಕ್ಷ್ಮಗಳು, ಹಾವ ಭಾವ, ಪ್ರಸಂಗಗಳಲ್ಲಿ ಪರಿಣಾಮಕಾರಿಯಾಗಿ ಅಭಿನಯಿಸುವ ಪಟ್ಟುಗಳನ್ನು ಕಲಾವಿದರಿಗೆ ಕಲಿಸಿಕೊಡಲಾಗುತ್ತದೆ. ಕಲಿಕೆಯ ಜತೆಗೆ ಯಕ್ಷಗಾನದಲ್ಲಿ ಬಳಕೆಯಾಗುವ ವೇಷಭೂಷಣ ಹಾಗೂ ಇತರ ಪರಿಕರಗಳ ತಯಾರಿಕೆಯಲ್ಲೂ ತೊಡಗಿಸಿಕೊಳ್ಳುತ್ತಾರೆ.

'ಗೃಹ ಲಕ್ಷ್ಮಿ'ಗೆ 19ರಂದು ಚಾಲನೆ

ಒಂದನೇ ಪುಟದಿಂದ...

ಅಗತ್ಯವಾದ ದಾಖಲೆಗಳು: 'ಯೋಜನೆಯಡಿ ನೋಂದಾಯಿಸಲು ಪಡಿತರ ಚೀಟಿ ಸಂಖ್ಯೆ, ಆಧಾರ್ ಕಾರ್ಡ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆಯ ಪಾಸ್‌ಬುಕ್ ಮಾಹಿತಿ ನೀಡಬೇಕು. ಆಧಾರ್ ನಂಬರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆ ಹೊರತುಪಡಿಸಿ ಪರ್ಯಾಯ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಆಗಬೇಕಿದ್ದರೆ, ಆ ಬ್ಯಾಂಕ್ ಖಾತೆಯ ಪಾಸ್‌ಬುಕ್ ನೀಡಬೇಕು. ನಿಗದಿತ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿಕೊಂಡಾಗ ಮಂಜೂರಾತಿ ಪತ್ರ ನೀಡಲಾಗುವುದು. ಪ್ರಜಾ ಪ್ರತಿನಿಧಿ ಮೂಲಕ ನೋಂದಾಯಿಸಿಕೊಂಡ ಬಳಿಕ, ಮಂಜೂರಾತಿ ಪತ್ರ ಮನೆಗೆ ತಲುಪಲಿದೆ' ಎಂದೂ ವಿವರಿಸಿದರು.

ನೋಂದಣಿಗೆ ಮೊಬೈಲ್ ಮೂಲಕ ಮಾಹಿತಿ

'ಪ್ರತಿ ಫಲಾನುಭವಿಯು ನೋಂದಣಿಗೆ ನಿಗದಿಪಡಿಸಿರುವ ದಿನ, ಸಮಯ ಮತ್ತು ಸ್ಥಳವನ್ನು 1902 ಸಂಖ್ಯೆಗೆ ಕರೆ ಮಾಡಿ ಅಥವಾ 8147500500 ಸಂಖ್ಯೆಗೆ ಎಸ್‌ಎಂಎಸ್ ಅಥವಾ ವಾಟ್ಸ್ ಆ್ಯಪ್ ಸಂದೇಶ ಕಳುಹಿಸಿ ಮಾಹಿತಿ ಪಡೆದುಕೊಳ್ಳಬಹುದು. ನಿಗದಿಪಡಿಸಿದ ದಿನ ಮತ್ತು ಸಮಯದಂದು ನೋಂದಣಿ ಕೇಂದ್ರಕ್ಕೆ ಹೋಗಲು ಸಾಧ್ಯವಾಗದೇ ಇದ್ದರೆ, ಅದೇ ಸೇವಾ ಕೇಂದ್ರಕ್ಕೆ ಮುಂದಿನ ದಿನಗಳಲ್ಲಿ ಸಂಜೆ 5ಗಂಟೆಯಿಂದ 7ರವರೆಗಿನ ಅವಧಿಯಲ್ಲಿ ತೆರಳಿ ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗುವುದು' ಎಂದು ಲಕ್ಷ್ಮೀ ಹೆಬ್ಬಾಳಕರ ವಿವರಿಸಿದರು.

ಎನ್‌ಡಿಎ ಕಡೆಗೆ ಜೆಡಿಎಸ್?

ಒಂದನೇ ಪುಟದಿಂದ...

'ಈ ವಿಷಯದಲ್ಲಿ ಕುಮಾರಸ್ವಾಮಿ ಜತೆಗೆ ಬಿಜೆಪಿ ವರಿಷ್ಠರು ಎರಡು ಸುತ್ತಿನ ಮಾತುಕತೆ ನಡೆಸಿದ್ದಾರೆ. ಒಂದು ಪಕ್ಷವನ್ನು ಬಿಜೆಪಿ ಜತೆ ವಿಲೀನಗೊಳಿಸುವುದು. ಆಗ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರನ್ನಾಗಿ ಮಾಡುತ್ತೇವೆ. ನಿಮ್ಮ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ ಎಂದು ವರಿಷ್ಠರು ಭರವಸೆ ನೀಡಿದ್ದಾರೆ' ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

'ಈ ಪ್ರಸ್ತಾವಕ್ಕೆ ಕುಮಾರಸ್ವಾಮಿ ಒಪ್ಪಿಲ್ಲ. ಕರ್ನಾಟಕದಲ್ಲಿ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಳ್ಳುತ್ತೇವೆ. ರಾಜ್ಯದಲ್ಲಿ ಕಾಂಗ್ರೆಸ್ ಜತೆ ಸೆಣಸಬೇಕಾಗಿರುವುದರಿಂದಾಗಿ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯೇತರ ಮೈತ್ರಿಕೂಟವನ್ನು ಸೇರಲು ಸಾಧ್ಯವೇ ಇಲ್ಲ. ಹೀಗಾಗಿ, ನಮ್ಮ ಅಸ್ತಿತ್ವ ಉಳಿಸಿಕೊಂಡು, ಎನ್‌ಡಿಎ ಮೈತ್ರಿಕೂಟ ಸೇರಲು ಸಿದ್ಧ. ವಿರೋಧ ಪಕ್ಷ ನಾಯಕ ಸ್ಥಾನದ ಬದಲು ಕೇಂದ್ರ ಸಚಿವ ಸ್ಥಾನ ಕೊಟ್ಟರೆ, ಕರ್ನಾಟಕದಲ್ಲೂ ನಿಮ್ಮ ಪಕ್ಷಕ್ಕೆ ಬಲ ತಂದುಕೊಡುತ್ತೇನೆ ಎಂದು ಕುಮಾರಸ್ವಾಮಿ ಪ್ರತಿಪಾದಿಸುತ್ತಿದ್ದಾರೆ' ಎಂದು ಅವರು ತಿಳಿಸಿದರು.

'ಈ ಕಾರಣಕ್ಕಾಗಿ ಪ್ರತಿಪಕ್ಷ ನಾಯಕ ಸ್ಥಾನದ ಆಯ್ಕೆ ನಡೆದಿಲ್ಲ. ಕುಮಾರಸ್ವಾಮಿ ವಿಲೀನಕ್ಕೆ ಒಪ್ಪಿದರೆ ಅವರೇ ಆ ಸ್ಥಾನಕ್ಕೆ ಬರುವ ಸಾಧ್ಯತೆ ಹೆಚ್ಚು. ಕರ್ನಾಟಕದ ನಾಯಕರ ಜತೆಗೆ ಚರ್ಚೆ ನಡೆದಿಲ್ಲ. ದೆಹಲಿ ವರಿಷ್ಠರ ಹಂತದಲ್ಲೇ ಈ ಸಮಾಲೋಚನೆ ನಡೆದಿದೆ. ತೀರ್ಮಾನವನ್ನು ಅವರೇ ತೆಗೆದುಕೊಳ್ಳಬೇಕಿದೆ. ಎನ್‌ಡಿಎ ಮೈತ್ರಿಕೂಟದ ಸಭೆ ಮುಗಿದ ಬಳಿಕವಷ್ಟೇ ಸ್ಪಷ್ಟ ಚಿತ್ರಣ ಸಿಗಲಿದೆ' ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ದೇಶದ ಚುಕ್ಕಾಣಿ ಹಿಡಿಯಬೇಕಿದ್ದು, ಲೋಕಸಭೆ ಚುನಾವಣೆಯಲ್ಲಿ ಜೆಡಿಎಸ್ ಮಾತ್ರವಲ್ಲ ಯಾವುದೇ ಪಕ್ಷ ಬೆಂಬಲ ನೀಡಿದರೂ ಸ್ವೀಕರಿಸುತ್ತೇವೆ

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಜನಪ್ರಿಯತೆ ಭಾರತ್ ಜೋಡೊ ಯಾತ್ರೆ ಬಳಿಕ ಹೆಚ್ಚಿದೆ. ಹೀಗಾಗಿ ಬಿಜೆಪಿಗೆ ಭಯ ಇದೆ

ಸಂತೋಷ ಎಸ್.ಲಾಡ್
ಕಾರ್ಮಿಕ ಸಚಿವ

18ರಂದು ಎನ್‌ಡಿಎ ಮಹತ್ವದ ಸಭೆ

ಒಂದನೇ ಪುಟದಿಂದ...

ಪ್ರಾದೇಶಿಕ ಪಕ್ಷಗಳು ಎನ್‌ಡಿಎದಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದು ಪತ್ರದಲ್ಲಿ ಬಣ್ಣಿಸಿರುವ ನಡ್ಡಾ ಅವರು, ಈ ಪಕ್ಷಗಳು ಅಭಿವೃದ್ಧಿ ಮತ್ತು ಬಡವರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಪ್ರಮುಖ ಪಾಲುದಾರರಾಗಿವೆ ಎಂದಿದ್ದಾರೆ.

2024ರ ಲೋಕಸಭಾ ಚುನಾವಣೆಯ ಪೂರ್ವಭಾವಿಯಾಗಿ ಹಮ್ಮಿಕೊಂಡಿರುವ ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ಇತರ ಮಿತ್ರ ಪಕ್ಷಗಳಿಗೂ ನಡ್ಡಾ ಅವರು ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಹಾರದ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಅವರ ಹಿಂದೂಸ್ತಾನಿ ಆವಾಂ ಮೋರ್ಚಾ (ಎಚ್‌ಎಎಂ) ಪಕ್ಷಕ್ಕೂ ಆಹ್ವಾನ ನೀಡಲಾಗಿದೆ ಎಂದೂ ಹೇಳಿವೆ. ಸಭೆಯಲ್ಲಿ ಪಾಲ್ಗೊಳ್ಳುವುದಾಗಿ ಜಿತನ್ ರಾಮ್ ಅವರ ಪುತ್ರ ಸಂತೋಷ್ ಕುಮಾರ್ ಸುಮನ್ ಅವರು ತಿಳಿಸಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಬಣ ಹಾಗೂ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣ ಸೇರಿದಂತೆ ಹೊಸ ಮಿತ್ರ ಪಕ್ಷಗಳಗಳನ್ನೂ ಸಭೆಗೆ ಆಹ್ವಾನಿಸಲಾಗಿದೆ ಎಂದೂ ಮೂಲಗಳು ವಿವರಿಸಿವೆ.

ಮೋದಿ ಅವರು ಪ್ರಧಾನಿಯಾಗಿ ಎರಡನೇ ಬಾರಿ ಅಧಿಕಾರ ಸ್ವೀಕರಿಸಿದ ಬಳಿಕ ನಡೆಯುತ್ತಿರುವ ಎನ್‌ಡಿಎ ಮೊದಲ ಸಭೆ ಇದಾಗಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 16-7-1998

● ವಿದ್ಯುತ್ ದರ ಭಾರೀ ಏರಿಕೆ: ಜನತೆಗೆ ದಳ ಸರ್ಕಾರದ 'ಷಾಕ್'

ಬೆಂಗಳೂರು, ಜುಲೈ 15– ಬೆಲೆ ಏರಿಕೆಯಿಂದ ಈಗಾಗಲೇ ತತ್ತರಿಸುತ್ತಿರುವ ನಾಗರಿಕರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು (ಕೆಇಬಿ) ಶೇಕಡಾ 11ರಷ್ಟು ಪ್ರಮಾಣದಲ್ಲಿ ವಿದ್ಯುತ್ ದರವನ್ನು ಹೆಚ್ಚಿಸಿ ಮತ್ತೊಂದು 'ಷಾಕ್' ನೀಡಿದೆ.

ಇಂದಿನಿಂದ ಜಾರಿಗೆ ಬಂದಿರುವ ಈ ಹೊಸ ದರದಿಂದ ಈ ವರ್ಷ ಮಂಡಲಿಗೆ ಸುಮಾರು 185 ಕೋಟಿ ರೂಪಾಯಿ ಹೆಚ್ಚಿನ ಆದಾಯ ಬರಲಿದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಕೃಷಿ ಉದ್ದೇಶಕ್ಕಾಗಿ ಬಳಸುವ ವಿದ್ಯುತ್ತಿನ ಬೆಲೆಯನ್ನು ಮಾತ್ರ ಇನ್ನೂ ಏರಿಸಿಲ್ಲ.

50 ವರ್ಷಗಳ ಹಿಂದೆ

ಸೋಮವಾರ, 16-7-1973

● ಕರಾಚಿಯಿಂದ ಭಾರತಕ್ಕೆ ಅಕ್ರಮ ಆಹಾರ ರವಾನೆ?

ಇಸ್ಲಾಮಾಬಾದ್, ಜುಲೈ 15– ಕರಾಚಿ ಬಂದರಿನಲ್ಲಿ ನಿಂತು ಹೋಗುವ ಹಡಗುಗಳ ಚಾಲಕ ವರ್ಗದವರು ಭಾರತಕ್ಕೆ ಆಹಾರವನ್ನು ಅಕ್ರಮವಾಗಿ ಸಾಗಿಸುತ್ತಿದ್ದಾರೆಂಬ ಆರೋಪಗಳ ಬಗೆಗೆ ಅಮೂಲಾಗ್ರ ತನಿಖೆ ನಡೆಸುವಂತೆ ಅಧ್ಯಕ್ಷ ಭುಟ್ಟೊ ಅವರು ಆಜ್ಞೆ ಮಾಡಿದ್ದಾರೆ.

ಆ ಬಂದರಿಗೆ ಬರುವ ಹಡಗುಗಳ ವಿದೇಶೀ ನಾವಿಕರು ಎಷ್ಟು ಬೇಕಾದರೂ ಸಾಮಾನು ಸರಂಜಾಮು ಕೊಳ್ಳಲು ಕೊಟ್ಟಿರುವ ಅನುಮತಿಯನ್ನು ಉಪಯೋಗಿಸಿಕೊಂಡು ಅವುಗಳನ್ನು ಅವರು ನಂತರ ಭಾರತದ ಬಂದರುಗಳಲ್ಲಿ ಮಾರುತ್ತಿದ್ದರೆಂದು ಹೇಳಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜುಲೈ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಚತುರ್ದಶಿ ಗಂ. 22-09 ನಕ್ಷತ್ರ: ಆರ್ದ್ರಾ ಗಂ. 26-39 ಯೋಗ: ಧ್ರುವ ಗಂ. 08-32 ಕರಣ: ವಿಷ್ಟಿ ಗಂ. 09-18, ಮಿಥುನ ಮಾಸದ 31 ನೇ ದಿನ, ಮಳೆನಕ್ಷತ್ರ: ಪುನರ್ವಸು 3.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-15 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 27 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 5, 9

ಮೇಷ: ನಿಮ್ಮ ಈ ದಿನದ ಕೆಲಸದಿಂದ ನಿಮ್ಮ ಬದುಕಿಗೆ ಅರ್ಥ ಸಿಗುವಂತಾಗಲಿದೆ. ಆರ್ಥಿಕ ವಿಚಾರದಲ್ಲಿ ಜಿಪುಣತನವನ್ನು ದೂರಮಾಡಿ. ವಿಶೇಷವಾದ ತಿಂಡಿ-ತಿನಿಸುಗಳು ಪ್ರಾಪ್ತಿಯಾಗಿ ಸಂತೋಷ ಉಂಟಾಗುತ್ತದೆ.

ವೃಷಭ: ಹಣದ ಆಸೆಯಿಂದ ಹೊರಬರುವ ಪ್ರಯತ್ನ ನೆಮ್ಮದಿ ಜೀವನ ನಡೆಸಲು ಕಾರಣವಾಗುತ್ತದೆ. ವಕೀಲಿ ವೃತ್ತಿಯವರಿಗೆ ನಿಗೂಢವಾದ ಅಥವಾ ಅಗತ್ಯವಿರುವ ಹೆಚ್ಚಿನ ವಿಷಯ ಸಂಗ್ರಹಣೆಗೆ ಈ ದಿನ ಅತ್ಯಂತ ಸೂಕ್ತ.

ಮಿಥುನ: ಎಲ್ಲಾ ಸಂದರ್ಭದಲ್ಲೂ ವಿವೇಚನೆಯಿಂದ ಆಲೋಚಿಸಿ ನಿರ್ಧಾರ ತೆಗೆದುಕೊಳ್ಳಿ. ಇನ್ನೊಬ್ಬರಿಗೆ ಉಪಕಾರ ಮಾಡಲು ಹೋಗಿ ನೀವು ಸಮಸ್ಯೆಗೆ ಸಿಕ್ಕಿಕೊಳ್ಳಬೇಡಿ. ಮಹಾಗಣಪತಿಯ ಆರಾಧನೆಯಿಂದ ಶುಭ ಉಂಟಾಗುತ್ತದೆ.

ಕರ್ಕಾಟಕ: ಆಕಸ್ಮಿಕವಾಗಿ ಹಳೆಯ ಗೆಳೆಯನ ಭೇಟಿಯಾಗಲಿದೆ. ಹೃದಯ ಸಂಬಂಧಿತ ಅನಾರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಶ್ರೀ ಮಹಾಲಕ್ಷ್ಮಿಯನ್ನು ಪೂಜಿಸಿ ಹೆಚ್ಚಿನ ಏಳಿಗೆಯನ್ನು ಹೊಂದುವಿರಿ.

ಸಿಂಹ: ದಿನದ ಅಂತ್ಯದಲ್ಲಿ ನಾಳೆಯ ಕೆಲಸಗಳ ಬಗ್ಗೆ ಗಮನಹರಿಸಿ ಪೂರ್ವ ತಯಾರಿ ಮಾಡಿಕೊಳ್ಳುವುದರಿಂದ ಸುಲಭವಾಗುತ್ತದೆ. ಜವಳಿ ವ್ಯಾಪಾರಿಗಳು ವಿಶೇಷ ರಿಯಾಯಿತಿಯಂತಹ ಮಾರಾಟಗಳಿಂದ ಹೆಚ್ಚಿನ ಲಾಭ ಪಡೆಯುವಿರಿ.

ಕನ್ಯಾ: ಮಗಳ ವಿಚಾರದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ಮನಸ್ಸು ಶ್ರೀಮಂತಿಕೆಯ ಬದುಕಿಗೆ ಹಾತೊರೆಯುವುದು. ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ಮಾತು ಮರೆಯದಿರಿ.

ತುಲಾ: ನಿಮ್ಮ ಆಲಸ್ಯದಿಂದಾಗಿ ಅಧಿಕಾರ ಹೋಗುವ ಪರಿಸ್ಥಿತಿ ಉಂಟಾಗುವುದು. ಎಚ್ಚರದಿಂದಿರಿ. ಆಭರಣ ಖರೀದಿಯ ಯೋಚನೆ ಬರಲಿದೆ. ಇನ್ನೊಬ್ಬರಿಗೆ ಸಾಲದ ರೂಪದಲ್ಲಿ ಹಣವನ್ನು ಕೊಡುವುದು ಸರಿಯಲ್ಲ.

ವೃಶ್ಚಿಕ: ಅರ್ಧಕ್ಕೆ ನಿಂತ ಎಲ್ಲಾ ಕಾರ್ಯಗಳಿಗೆ ಈ ದಿನ ಪುನಃ ಚಾಲನೆ ದೊರೆಯಲಿದೆ. ಭೂಸಂಬಂಧಿ ಅದರಲ್ಲೂ ಕೃಷಿ ಭೂಮಿ ವ್ಯವಹಾರದಲ್ಲಿರುವವರಿಗೆ ಧನಲಾಭವಾಗುವುದು. ಕುಟುಂಬದಲ್ಲಿ ನೆಮ್ಮದಿ ಅಭಿವೃದ್ಧಿಯಾಗುತ್ತದೆ.

ಧನು: ನಿಮ್ಮ ಹಿತಾಸಕ್ತಿಗಳಿಗೆ ಹೆಚ್ಚು ಗಮನ ಕೊಡಿ. ಮಕ್ಕಳ ಅಗತ್ಯಗಳನ್ನು ಪೂರೈಸಿ. ವಿಲಾಸಿ ಸಾಮಗ್ರಿಗಳ ಖರೀದಿಸುವುದು ಖರ್ಚಿಗೆ ದಾರಿಯಾಗಲಿದೆ. ವರಿಷ್ಠರೊಡನೆ ಗಣಿಗಾರಿಕೆ ವಿಷಯಗಳ ಬಗ್ಗೆ ಚರ್ಚೆ ಸಂಭವಿಸಬಹುದು.

ಮಕರ: ಮಾಡುವ ಕೆಲಸದಲ್ಲಿ ಶ್ರದ್ಧೆ ಇರಲಿ. ನಿಮ್ಮಿಂದ ಯಾವುದೇ ನಿಯಮ ಉಲ್ಲಂಘನೆಯಾಗದೇ ಇರುವ ರೀತಿಯಲ್ಲಿ ಇರುವುದು ಉತ್ತಮ. ಗುರು ವಾಕ್ಯ ಪಾಲಿಸುವುದರಿಂದ ಶ್ರೇಯಸ್ಸು ಕಟ್ಟಿಟ್ಟ ಬುತ್ತಿಯಾಗಿರುತ್ತದೆ.

ಕುಂಭ: ಪೂರ್ವ ನಿಯೋಜಿತ ಕೆಲಸ ಕಾರ್ಯಗಳು ಉತ್ತಮ ರೀತಿಯಲ್ಲಿ ನೆಡೆಯುತ್ತವೆ. ಬಾಲ್ಯದ ನೆನಪುಗಳು ನಿಮ್ಮನ್ನು ಕಾಡಲಿದೆ. ಧಾರ್ಮಿಕ ಗ್ರಂಥಗಳ, ಪುರಾಣಗಳ ಅಧ್ಯಯನ ಮಾಡುವ ಮನಸ್ಸಾಗುವುದು.

ಮೀನ: ಶೀತ ಬಾಧೆಯನ್ನು ಹೋಗಲಾಡಿಸಿಕೊಳ್ಳುವ ವಿಚಾರವಾಗಿ ಆಯುರ್ವೇದದ ಮೊರೆಹೋಗುವುದು ಉತ್ತಮ. ಸಂಬಂಧಿಕರಲ್ಲಿ ಆರ್ಥಿಕ ಅಭಿವೃದ್ಧಿಯ ವಿಚಾರಕ್ಕೆ ಸಂಬಂಧಿಸಿದಂತೆ ಮಾತುಗಳು ಬರಬಹುದು.

ಪದಬಂಧ 5381

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗಿದ್ದ ಮಗ ತಿರುಗಿದರೆ ಇದು ಸಲೀಸು! (3)
5.ತುಂಬಾ ನಾಜೂಕಾಗಿರುವ ಸ್ವಭಾವ (5)
7.ಲಲಿತ ಕಲೆಗಳನ್ನು ಬಲ್ಲವನು (4)
9.ಕಠೋರವಾಗಿರುವ ಕೈ! (2)
10.ಮೆರುಗಿನ ಲೇಪನ (3)
12.ಅರಿವು ಇದ್ದಾಗ ಶತ್ರು ಕಾಣಿಸುವನೇ? (2)
14.ಗುಂಡಿ ಹತ್ತಿರ ತೋರಿದ ದುರುಳತನ ಉಲ್ಟಾ ಆಗಿದೆ (4)
16.ಚಿತ್ತವಿಕಲ್ಪವನ್ನು ಹೀಗೆನ್ನಿ (5)
18.ಕಚ್ಚಾಪ್ರತಿಯಿಲ್ಲಿ ತಿರುವುಮುರುವಾಗಿದೆ (3)

ಮೇಲಿಂದ ಕೆಳಕ್ಕೆ
1.ಸುರನಲ್ಲಿ ಕಾಣಿಸಿರುವ ಚಂದ್ರ (4)
2.ಮನದಿಂದ ಮಾಡಿಕೊಂಡಿರುವ ಅರಿಕೆ (3)
3.ಬಟ್ಟೆ ಹೊಲೆಯುವ ಸಾಧನವಿಲ್ಲಿ ಉಲ್ಟಾ ಆಗಿದೆ (2)
4.ಅಳತೆಗೆ ಮೀರಿದ ಸ್ಥಿತಿ (4)
6.ಹರಡುವಿಕೆಗೊಂದು ಪರ್ಯಾಯ ಪದ (3)
8.ಗಿರಿಯ ಹತ್ತಿರ ಸೆರೆಹಿಡಿಯುವುದು (4)
9.ಬಿರುಸಾದ ಮಾತು (4)
11.ಕೊನೆಗೆ ಬುದ್ಧಿ ಇಟ್ಟುಕೊಂಡೇ ನೀಡಿದ ಸಮ್ಮತಿ! (4)
12.ಅಡಗಿಕೊಳ್ಳಲು ಸೂಕ್ತವಾದ ಅರಣ್ಯ (3)
13.ಅನಿರೀಕ್ಷಿತವಾಗಿ ಬಂದಿರುವ ವ್ಯಕ್ತಿ (4)
15.ಒಂದು ಬಗೆಯ ಸೊಳ್ಳೆ (3)
17.ಒಂದು ಪ್ರದೇಶದಿಂದ ಹೊರಗೆ ಕಳಿಸುವುದು (2)

1		2	■	3	■	■	■	4
	■		■	5		6		
7			8	■	■		■	
	■	■		■	9		■	
■	■	■	10			■	■	■
11	■	12		■		■	■	13
	■		■	■	14	15		
16				17	■		■	
	■	■	■		■	18		

5380ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಣದಾನ 3.ಅಪರೂಪ
5.ನಡುಕ 8.ಮಿಥುನ
9.ಯೋಗ್ಯತಾಪತ್ರ 10.ತಪ್ಪಲೆ
11.ಹರಕೆ 15.ರಿಯಾಯಿತಿ
16. ಮಧುಮಾಸ

ಮೇಲಿಂದ ಕೆಳಕ್ಕೆ:
1.ಪ್ರಾಚೀನ 2.ನಗ್ನ
3.ಅಣು 4.ಪರಧನ
6.ಕರೆಯೋಲೆ 7.ಪ್ರತಾಪ
8.ಮಿತ್ರದ್ರೋಹ 10.ತರಕಾರಿ
12.ಕೆಲಸ 13.ಸತಿ
14.ಭೀಮ

ಸುಡೊಕು 5767

	7	9			3		8	
				8				9
8	1		2	6		7		
	8			2		1		5
	9	2	8		5			
5				3			2	
9		7	5					6
	5			7		9	4	
	3		6		1		7	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5766 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೆಹಲಿಯಲ್ಲಿ ಮತ್ತೆ ಭಾರಿ ಮಳೆ

ಹಿಮಾಚಲ ಪ್ರದೇಶದಲ್ಲಿ ನಾಳೆಯವರೆಗೆ 'ಆರೆಂಜ್ ಅಲರ್ಟ್' • ಒಡಿಶಾದಲ್ಲೂ ವರುಣನ ಆರ್ಭಟ

ನವದೆಹಲಿ/ ಭುವನೇಶ್ವರ/ ಜಮ್ಮು (ಪಿಟಿಐ): ದೆಹಲಿಯ ಹಲವು ಪ್ರದೇಶಗಳಲ್ಲಿ ಶನಿವಾರ ಭಾರಿ ಮಳೆ ಬಿದ್ದಿದೆ. ರಸ್ತೆ, ವಸತಿಪ್ರದೇಶಗಳಲ್ಲಿ ನೀರು ನಿಂತಿದ್ದರಿಂದ ಸಂಚಾರ ದಟ್ಟಣೆ ಉಂಟಾಯಿತು.

ಒಡಿಶಾ, ಅಸ್ಸಾಂನಲ್ಲಿಯೂ ಭಾರಿ ಮಳೆಯಾಗಿದೆ. ಅಸ್ಸಾಂನಲ್ಲಿ ಪ್ರವಾಹದಿಂದಾಗಿ ಲಕ್ಷಕ್ಕೂ ಹೆಚ್ಚು ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಲವು ನದಿಗಳು ತುಂಬಿ ಹರಿಯುತ್ತಿವೆ. ಬ್ರಹ್ಮಪುತ್ರ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ.

ದೆಹಲಿಯಲ್ಲಿ ಭಾರಿ ಮಳೆ ಸುರಿದ ಕಾರಣ ಯಮುನಾ ನದಿಯಲ್ಲಿ ನೀರಿನ ಮಟ್ಟ ಮತ್ತೆ ಹೆಚ್ಚಳವಾಗುವ ಆತಂಕ ಮೂಡಿದೆ.

ಒಡಿಶಾದ ಭುವನೇಶ್ವರ ಹಾಗೂ ಕಟಕ್ ನಗರಗಳಲ್ಲಿ ರಸ್ತೆಗಳಲ್ಲಿ ನೀರು ನಿಂತು ಜನರು ಪರದಾಡಿದರು. ರಾಜ್ಯದಲ್ಲಿ ಮತ್ತಷ್ಟು ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಹಿಮಾಚಲ ಪ್ರದೇಶದಲ್ಲಿ ಮಳೆ ನಿಂತಿಲ್ಲ. ರಾಜ್ಯದಲ್ಲಿ ಜುಲೈ 17ರ ವರೆಗೆ ಭಾರಿ ಮಳೆಯಾಗಲಿದೆ ಎಂದಿರುವ ಇಲಾಖೆ, ಆರೆಂಜ್ ಅಲರ್ಟ್ ಘೋಷಿಸಿದೆ. ಜುಲೈ 18ರಂದು ಯಲ್ಲೊ ಅಲರ್ಟ್ ಘೋಷಿಸಿದ್ದು, ದಿಢೀರ್ ಪ್ರವಾಹ, ಭೂಕುಸಿತವಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ.

ಸ್ಥಳಾಂತರ: 'ದೆಹಲಿಯಲ್ಲಿ ಪ್ರವಾಹ ಪರಿಸ್ಥಿತಿಯಿಂದ ಸಂಕಷ್ಟಕ್ಕೀಡಾದವರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ' ಎಂದು ವಿಭಾಗೀಯ ಆಯುಕ್ತ ಅಶ್ವಿನಿಕುಮಾರ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ಪರಿಹಾರ ಕಾರ್ಯದಲ್ಲಿ ಅಧಿಕಾರಿಗಳು ದಣಿವರಿಯದೇ ನಿರತರಾಗಿದ್ದು, ಕೆಲ ಚುನಾಯಿತ ಪ್ರತಿನಿಧಿಗಳು ಅವರನ್ನು ಗುರಿಯಾಗಿಸಿ ಟೀಕೆ ಮಾಡುತ್ತಿರುವುದು ಬೇಸರ ತಂದಿದೆ' ಎಂದರು.

'ಸಚಿವೆ ಆತಿಶಿ ಮಾರ್ಲೆನಾ ಅವರ ಕರೆಗಳನ್ನು ಸ್ವೀಕರಿಸಲಾಗುತ್ತಿದ್ದು, ಪರಿಹಾರ ಕಾರ್ಯಗಳಿಗೆ ಚುರುಕು ನೀಡಲಾಗಿದೆ. ಆದರೆ, ಅವರ ಹೇಳಿಕೆಗಳು ರಾಜಕೀಯ ಪ್ರೇರಿತ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇಬ್ಬರು ಬಾಲಕಿಯರ ಸಾವು: ಜಮ್ಮು ಕಾಶ್ಮೀರದ ಕಠುವಾ ಜಿಲ್ಲೆಯ ನಂಗಾಲ– ಮಾಚಡ್ಡಿ ಪ್ರದೇಶದಲ್ಲಿ ಶನಿವಾರ ಶಾಲೆ ಮುಗಿಸಿಕೊಂಡು ವಾಪಸಾಗುತ್ತಿದ್ದ ಇಬ್ಬರು ಶಾಲಾ ಬಾಲಕಿಯರು ಪ್ರವಾಹದಲ್ಲಿ ಸಿಲುಕಿ ನೀರು ಪಾಲಾಗಿದ್ದಾರೆ. ಮತ್ತಿಬ್ಬರು ಬಾಲಕಿಯರನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ದೆಹಲಿಯ ಸಂತ ಪರಮಾನಂದ ಆಸ್ಪತ್ರೆ ಬಳಿ ಯಮುನಾ ನದಿ ಪ್ರವಾಹದಲ್ಲಿ ಸಿಲುಕಿದ್ದ ಗೋವನ್ನು ಶನಿವಾರ ರಕ್ಷಿಸಲಾಯಿತು —ಪಿಟಿಐ ಚಿತ್ರ

> **ರಾಜ್ಯದಲ್ಲಿ ಮಳೆಯ ಅವಘಡಗಳಿಂದಾಗಿ ₹ 8 ಸಾವಿರ ಕೋಟಿಯಷ್ಟು ನಷ್ಟವಾಗಿದೆ. ₹ 2 ಸಾವಿರ ಕೋಟಿ ಮಧ್ಯಂತರ ಪರಿಹಾರ ನೀಡುವಂತೆ ಕೇಂದ್ರಕ್ಕೆ ಕೋರಲಾಗಿದೆ**
> **ಸುಖ್ವಿಂದರ್ ಸಿಂಗ್ ಸುಖು**, ಹಿಮಾಚಲ ಪ್ರದೇಶ ಮುಖ್ಯಮಂತ್ರಿ

> **ಮಳೆಯಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಸರ್ಕಾರ ರಾಜ್ಯಗಳಿಗೆ ನೆರವು ನೀಡುತ್ತಿದೆ. ಹಿಮಾಚಲ ಪ್ರದೇಶಕ್ಕೆ ₹ 181 ಕೋಟಿ ಬಿಡುಗಡೆ ಮಾಡಲಾಗಿದೆ**
> **ಜೆ.ಪಿ.ನಡ್ಡಾ**, ಬಿಜೆಪಿ ಅಧ್ಯಕ್ಷ

ಮಳೆ: ಬವಣೆ– ರಕ್ಷಣೆ

- ಯಮುನೆಯಲ್ಲಿ ಪ್ರವಾಹ ಇಳಿದ ಕಾರಣ ದೆಹಲಿಯಲ್ಲಿ ಹಲವಾರು ರಸ್ತೆಗಳನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದ್ದು, ವಾಹನಗಳ ಓಡಾಟ ಶುರುವಾಗಿದೆ
- ದೆಹಲಿಯ ಐಟಿಒ ಬಳಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಸಿಲುಕಿದ್ದ 33 ವಿದ್ಯಾರ್ಥಿಗಳನ್ನು ರಕ್ಷಿಸಲಾಗಿದೆ
- ಕಲುಷಿತ ನೀರಿನಿಂದಾಗಿ ಹರಡುವ ರೋಗಗಳ ಬಗ್ಗೆ ಪಂಜಾಬ್ ಮತ್ತು ಹರಿಯಾಣದ ಆರೋಗ್ಯ ಇಲಾಖೆಗಳು ಎಚ್ಚರಿಕೆ ನೀಡಿವೆ. ಪ್ರವಾಹಪೀಡಿತ ಸ್ಥಳಗಳಲ್ಲಿ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ
- ಹಿಮಾಚಲ ಪ್ರದೇಶದಲ್ಲಿ ಸಿಲುಕಿದ್ದ 70 ಸಾವಿರ ಪ್ರವಾಸಿಗರನ್ನು ರಕ್ಷಿಸಲಾಗಿದ್ದು, 15 ಸಾವಿರ ಮಂದಿಯನ್ನು ಅವರ ರಾಜ್ಯಗಳಿಗೆ ಕಳುಹಿಸಿಕೊಡಲಾಗಿದೆ ಎಂದು ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಹೇಳಿದ್ದಾರೆ
- ಪ್ರವಾಹಪೀಡಿತ ಜಿಲ್ಲೆಗಳಿಗೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು
- ನೋಯ್ಡಾ ಬಳಿ ತಗ್ಗುಪ್ರದೇಶಗಳಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿರುವ ತೋಟದ ಮನೆಗಳಲ್ಲಿ ಕೆಲಸಕ್ಕಿದ್ದ 500 ಕಾರ್ಮಿಕರನ್ನು ರಕ್ಷಿಸಲಾಗಿದೆ
- ಬಿಹಾರದ 11 ಜಿಲ್ಲೆಗಳಲ್ಲಿ ಕಳೆದ 24 ತಾಸುಗಳಲ್ಲಿ ಸಿಡಿಲಿಗೆ 17 ಜನರು ಬಲಿಯಾಗಿದ್ದಾರೆ. ರೊಹ್ತಾಸ್ ಜಿಲ್ಲೆಯೊಂದರಲ್ಲೇ ಐವರು, ಔರಂಗಾಬಾದ್ ಮತ್ತು ಬಕ್ಸಾರ್ ಜಿಲ್ಲೆಗಳಲ್ಲಿ ತಲಾ ಇಬ್ಬರು ಸಿಡಿಲು ಬಡಿದು ಮೃತಪಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ

ಬಿಜೆಪಿ ಸಂಚಿನಿಂದ ಪ್ರವಾಹ: ಆರೋಪ

ನವದೆಹಲಿ (ಪಿಟಿಐ): 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪಿತೂರಿಯಿಂದಾಗಿ ದೆಹಲಿಯಲ್ಲಿ ಪ್ರವಾಹ ಕಂಡುಬಂದಿದೆ. ಹರಿಯಾಣ ಸರ್ಕಾರ ಉದ್ದೇಶಪೂರ್ವಕವಾಗಿಯೇ ದೆಹಲಿಯತ್ತ ತನ್ನ ಅಣೆಕಟ್ಟೆಗಳಿಂದ ನೀರು ಬಿಡುಗಡೆ ಮಾಡುತ್ತಿದೆ' ಎಂದು ದೆಹಲಿ ಸಚಿವ ಸೌರಭ್ ಭಾರದ್ವಾಜ್ ಶನಿವಾರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಳೆದ 3–4 ದಿನಗಳಿಂದ ದೆಹಲಿಯಲ್ಲಿ ಮಳೆಯಾಗಿಲ್ಲ. ಆದಾಗ್ಯೂ, ಯಮುನಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಳವಾಗಿ, 208.66 ಮೀಟರ್ ಗಡಿ ತಲುಪಿತ್ತು' ಎಂದರು.

'ಹರಿಯಾಣದ ಹಥಿನಿಕುಂಡ ಅಣೆಕಟ್ಟೆಯಿಂದ ಪಶ್ಚಿಮ ಕಾಲುವೆ, ಪೂರ್ವ ಕಾಲುವೆ ಹಾಗೂ ಯಮುನಾ ನದಿಗೆ ನೀರು ಬಿಡುವ ವ್ಯವಸ್ಥೆ ಇದೆ. ಆದರೆ, ಪಿತೂರಿ ಭಾಗವಾಗಿ ಜುಲೈ 9ರಿಂದ 13ರವರೆಗೆ ಯಮುನಾ ಕಾಲುವೆ ಮೂಲಕ ದೆಹಲಿಯತ್ತ ಮಾತ್ರ ನೀರು ಬಿಡುಗಡೆ ಮಾಡಲಾಗಿದೆ' ಎಂದು ಆರೋಪಿಸಿದರು.

ಸುಗ್ರೀವಾಜ್ಞೆಗೆ 'ಕೈ' ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಸರ್ಕಾರದ ಅಧಿಕಾರಶಾಹಿ ಮೇಲೆ ಹಿಡಿತ ಸಾಧಿಸಲು ಕೇಂದ್ರ ಸರ್ಕಾರ ತಂದಿರುವ ಸುಗ್ರೀವಾಜ್ಞೆಯನ್ನು ವಿರೋಧಿಸುವುದಾಗಿ ಕಾಂಗ್ರೆಸ್ ಶನಿವಾರ ಪ್ರಕಟಿಸಿದೆ. ಈ ವಿಷಯದಲ್ಲಿ ಸ್ಪಷ್ಟ ನಿಲುವು ಪ್ರಕಟಿಸಬೇಕು ಎಂಬ ಆಮ್ ಆದ್ಮಿ ಪಕ್ಷದ (ಎಎಪಿ) ಒತ್ತಡಕ್ಕೆ 'ಕೈ' ಪಾಳಯ ಮಣಿದಿದೆ.

ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ರಾಜ್ಯ ಸರ್ಕಾರಗಳ ಹಾಗೂ ಮೂಲಭೂತ ಹಕ್ಕುಗಳ ಮೇಲಿನ ದಾಳಿ ಕುರಿತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವನ್ನು ಸಂಸತ್‌ನಲ್ಲಿ ತರಾಟೆಗೆ ತೆಗೆದುಕೊಳ್ಳುವುದಾಗಿ ಕಾಂಗ್ರೆಸ್ ಹೇಳಿದೆ. ಇದರ ಬೆನ್ನಲ್ಲೇ, ಬೆಂಗಳೂರಿನಲ್ಲಿ ಸೋಮವಾರ ಹಾಗೂ ಮಂಗಳವಾರ ನಡೆಯಲಿರುವ ವಿರೋಧ ಪಕ್ಷಗಳ ಸಭೆಯಲ್ಲಿ ಭಾಗವಹಿಸಲು ಎಎಪಿ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನಿವಾಸದಲ್ಲಿ ನಡೆದ ಕಾಂಗ್ರೆಸ್ ಸಂಸದೀಯ ಕಾರ್ಯತಂತ್ರ ಗುಂಪಿನ 90 ನಿಮಿಷಗಳ ಸಭೆಯ ಬಳಿಕ ಕಾಂಗ್ರೆಸ್ ನಾಯಕರು ಪಕ್ಷದ ನಿಲುವನ್ನು ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು. ಮುಂಗಾರು ಅಧಿವೇಶನದ ಕಾರ್ಯತಂತ್ರದ ಕುರಿತು ಚರ್ಚಿಸಲು ಆಯೋಜಿಸಲಾಗಿದ್ದ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಹಿರಿಯ ನಾಯಕರು ಭಾಗಿಯಾಗಿದ್ದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ರಾಜ್ಯ ಸರ್ಕಾರಗಳು, ಸ್ಥಳೀಯ ಸಂಸ್ಥೆಗಳು ಹಾಗೂ ಮೂಲಭೂತ ಹಕ್ಕುಗಳ ಮೇಲೆ ಮೋದಿ ಸರ್ಕಾರದ ದಾಳಿಯ ವಿರುದ್ಧ ನಮ್ಮ ಪಕ್ಷ ಯಾವಾಗಲೂ ಹೋರಾಡುತ್ತದೆ' ಎಂದು ಸ್ಪಷ್ಟಪಡಿಸಿದರು.

'ಪ್ರಧಾನಿ ಮೌನ ಅಕ್ಷಮ್ಯ ಅಪರಾಧ'

ನವದೆಹಲಿ: ಹಿಂಸಾಪೀಡಿತ ಮಣಿಪುರದ ಪರಿಸ್ಥಿತಿ ಕುರಿತು ಕಾಂಗ್ರೆಸ್ ಶನಿವಾರ ತೀವ್ರ ಕಳವಳ ವ್ಯಕ್ತಪಡಿಸಿದೆ. ಈಶಾನ್ಯ ರಾಜ್ಯದ ಸ್ಥಿತಿ ಕುರಿತು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಸರ್ಕಾರದ ಮೌನ ಹಾಗೂ ನಿಷ್ಕ್ರಿಯತೆಯು ವಿವರಿಸಲಾಗದ, ಕ್ಷಮಿಸಲಾಗದ ಅಪರಾಧ ಎಂದು ಹೇಳಿದೆ.

ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯ ಸಿದ್ಧತೆಗಾಗಿ ಮೇಘಾಲಯ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ತ್ರಿಪುರ ಹಾಗೂ ಸಿಕ್ಕಿಂ ರಾಜ್ಯಗಳ ಮುಖಂಡರ ಜತೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಣಿಪುರದ ಪರಿಸ್ಥಿತಿ ಕುರಿತು ವಿವರವಾಗಿ ಚರ್ಚಿಸಲಾಯಿತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜ್ವರದಿಂದ ಬಳಲುತ್ತಿರುವ ಕಾರಣ ಸಭೆಯಲ್ಲಿ ಭಾಗಿಯಾಗಿರಲಿಲ್ಲ.

ರಾಜ್ಯದಲ್ಲಿ ಶಾಂತಿ ಹಾಗೂ ಸೌಹಾರ್ದ ಕಾಪಾಡಲು ಕೇಂದ್ರ ಸರ್ಕಾರವು ಕಠಿಣ ಹಾಗೂ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಯಿತು. ರಾಜ್ಯದಲ್ಲಿ ತಕ್ಷಣವೇ ಶಾಂತಿ ಪುನರ್ ಸ್ಥಾಪಿಸಬೇಕು ಎಂದೂ ಒತ್ತಾಯಿಸಲಾಯಿತು. ಅಸ್ಸಾಂನಲ್ಲಿ ನಡೆಯುತ್ತಿರುವ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಕುರಿತು ಸಹ ಸಭೆಯಲ್ಲಿ ತೀವ್ರ ಕಳವಳ ವ್ಯಕ್ತವಾಯಿತು. ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟದ ಹಲವು ಪಕ್ಷಗಳು ಈ ಕುರಿತು ವಿಸ್ತೃತ ಚರ್ಚೆ ನಡೆಯಬೇಕು ಎಂದು ಒತ್ತಾಯಿಸಿವೆ.

ಸಿಯುಇಟಿ– ಯುಜಿ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ– ಯುಜಿ) ಫಲಿತಾಂಶವನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಶನಿವಾರ ಪ್ರಕಟಿಸಿದ್ದು, 22,000ಕ್ಕೂ ಹೆಚ್ಚು ವಿದ್ಯಾರ್ಥಿಗಳು 100 ಪರ್ಸೆಂಟೈಲ್ ಗಳಿಸಿದ್ದಾರೆ.

ಇಂಗ್ಲಿಷ್‌ನಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಗರಿಷ್ಠ ಅಂಕಗಳಿಸಿದ್ದಾರೆ. ನಂತರದ ಸ್ಥಾನದಲ್ಲಿ ಜೀವ ವಿಜ್ಞಾನ ಮತ್ತು ಅರ್ಥಶಾಸ್ತ್ರ ಇದೆ. ಸಿಯುಇಟಿ–ಯುಜಿ ಎರಡನೇ ಆವೃತ್ತಿಯ ಪ್ರವೇಶ ಪರೀಕ್ಷೆಗೆ ದೇಶದಾದ್ಯಂತ 11.11 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು.

ಇಂಗ್ಲಿಷ್‌ನಲ್ಲಿ 5,685 ಅಭ್ಯರ್ಥಿಗಳು 100 ಪರ್ಸೆಂಟೈಲ್ ಅಂಕಗಳನ್ನು ಪಡೆದಿದ್ದರೆ, ಜೀವ ವಿಜ್ಞಾನ/ ಜೈವಿಕ ತಂತ್ರಜ್ಞಾನ/ ಬಯೋ ಕೆಮಿಸ್ಟ್ರಿ ವಿಷಯಗಳಲ್ಲಿ 4,850 ಹಾಗೂ ಅರ್ಥಶಾಸ್ತ್ರದಲ್ಲಿ 2,836 ಅಭ್ಯರ್ಥಿಗಳು ಗರಿಷ್ಠ ಅಂಕಗಳನ್ನು ಪಡೆದಿದ್ದಾರೆ.

ಸಿಯುಇಟಿ ದೇಶದ ಎರಡನೇ ಅತಿದೊಡ್ಡ ಪ್ರವೇಶ ಪರೀಕ್ಷೆಯಾಗಿದೆ. ಇದರ ಮೊದಲ ಆವೃತ್ತಿಯಲ್ಲಿ 12.5 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದರು.

ಆಗಸ್ಟ್‌ನಲ್ಲಿ ಮೊದಲ ಪರೀಕ್ಷಾರ್ಥ ಉಡಾವಣೆ
‘ಗಗನಯಾನ’: ಇಸ್ರೊ ಗಮನ

ಪ್ರಜಾವಾಣಿ ವಾರ್ತೆ

ಚೆನ್ನೈ: ‘ಚಂದ್ರಯಾನ–3’ರ ಯಶಸ್ವಿ ಉಡ್ಡಯನದಿಂದ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ), ದೇಶದ ಮೊದಲ ಮಾನವಸಹಿತ ‘ಗಗನಯಾನ’ದ ಮೇಲೆ ಗಮನ ಕೇಂದ್ರೀಕರಿಸಿದೆ.

‘ಗಗನಯಾನ’ ನೌಕೆಯನ್ನು ಮುಂದಿನ ವರ್ಷ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದಲೇ ಉಡ್ಡಯನ ಮಾಡಲಾಗುತ್ತದೆ ಎಂದು ಇಸ್ರೊ ಮೂಲಗಳು ಹೇಳಿವೆ.

ಮೂವರು ಗಗನಯಾತ್ರಿಗಳನ್ನು ಹೊತ್ತ ನೌಕೆಯನ್ನು ಭೂಮಿಯಿಂದ 400 ಕಿ.ಮೀ. ಅಂತರದ ಕೆಳಕಕ್ಷೆಗೆ ಕಳುಹಿಸಲಾಗುವುದು. 3–4 ದಿನಗಳ ಕಾಲ ನೌಕೆಯು ಈ ಕಕ್ಷೆಯಲ್ಲಿ ಪರಿಭ್ರಮಿಸಲಿದೆ ಎಂದು ಇವೇ ಮೂಲಗಳು ಹೇಳಿವೆ.

‘ಗಗನಯಾನದ ಭಾಗವಾಗಿ ಆಗಸ್ಟ್ ಅಂತ್ಯಕ್ಕೆ ಮೊದಲ ಪರೀಕ್ಷಾರ್ಥ ಉಡಾವಣೆ ನೆರವೇರಿಸಲಾಗುವುದು’ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

‘ಚಂದ್ರಯಾನ–3’ ಅನ್ನು ಯಶಸ್ವಿಯಾಗಿ ಉಡ್ಡಯನ ಮಾಡಿರುವ ‘ಎಲ್‌ವಿಎಂ3’, ಇಸ್ರೊದ ಅತ್ಯಂತ ನಂಬಲರ್ಹ ರಾಕೆಟ್ ಎನಿಸಿಕೊಂಡಿದೆ. ಮಾನವಸಹಿತ ಆಕಾಶಯಾನಕ್ಕೆ ಬೇಕಾದ ಮಾರ್ಪಾಡುಗಳೊಂದಿಗೆ ‘ಗಗನಯಾನ’ದಲ್ಲಿ ಕೂಡ ಇದೇ ರಾಕೆಟ್ ಬಳಸಿಕೊಳ್ಳಲಾಗುತ್ತದೆ. ಇದನ್ನು ‘ಎಚ್‌ಎಲ್‌ವಿಎಂ3’ ಎನ್ನಲಾಗುತ್ತದೆ’ ಎಂದು ಚಂದ್ರಯಾನ–3ರ ಯೋಜನಾ ನಿರ್ದೇಶಕ ಮೋಹನ್‌ಕುಮಾರ್ ಹೇಳಿದ್ದಾರೆ.

ಚಂದ್ರಯಾನ 3: ನೌಕೆ ಕಕ್ಷೆ ಬದಲಿಸುವ ಮೊದಲ ಪ್ರಕ್ರಿಯೆ ಯಶಸ್ವಿ

ಚೆನ್ನೈ/ತಿರುವನಂತಪುರ (ಪಿಟಿಐ): ಭೂಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ ಚಂದ್ರಯಾನ-3ರ ಬಾಹ್ಯಾಕಾಶ ನೌಕೆಯ ಕಕ್ಷೆ ಬದಲಿಸುವ ಮೊದಲ ಹಂತದ ಪ್ರಕ್ರಿಯೆಯನ್ನು ಶನಿವಾರ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ವಿಜ್ಞಾನಿಗಳು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

‘ನೌಕೆಗೆ ಅಗತ್ಯ ನೂಕುಬಲವನ್ನು ನೀಡುವ ಪ್ರಕ್ರಿಯೆಯನ್ನು ಇಸ್ರೊದ ಬೆಂಗಳೂರಿನಲ್ಲಿರುವ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ಯಶಸ್ವಿಯಾಗಿ ನಿರ್ವಹಿಸಲಾಗಿದೆ. ನೌಕೆ ಸುಸ್ಥಿತಿಯಲ್ಲಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ’ ಎಂದು ಇಸ್ರೊ, ಸಾಮಾಜಿಕ ಮಾಧ್ಯಮದಲ್ಲಿ ಹೇಳಿಕೆ ಬಿಡುಗಡೆ ಮಾಡಿದೆ.

‘ಭೂಕಕ್ಷೆ ದಾಟಿ ಚಂದ್ರನಲ್ಲಿ ಇಳಿಯಲು ಪ್ರೊಪಲ್ಷನ್ ಮಾಡ್ಯೂಲ್‌ಗೆ ನೂಕುಬಲ ಬೇಕು. ಈ ಉದ್ದೇಶಕ್ಕಾಗಿಯೇ ಅಳವಡಿಸಲಾಗಿರುವ ಯಂತ್ರಗಳ (ಥ್ರಸ್ಟರ್) ಕಾರ್ಯಾಚರಣೆಗೆ ಚಾಲನೆ ನೀಡಲಾಗಿದೆ’ ಎಂದು ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಎಸ್. ಉಣ್ಣಿಕೃಷ್ಣನ್ ನಾಯರ್ ಹೇಳಿದ್ದಾರೆ.

‘ರಾಕೆಟ್‌ಗಳನ್ನು ಮಕ್ಕಳಂತೆ ಕಾಣುವೆ’

ಹೈದರಾಬಾದ್ (ಪಿಟಿಐ): ‘ನಾನು ರಾಕೆಟ್‌ಗಳನ್ನು ಮಕ್ಕಳಂತೆ ಕಾಣುತ್ತೇನೆ’ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಶನಿವಾರ ಪ್ರತಿಕ್ರಿಯಿಸಿದರು.

ಐಐಟಿ–ಹೈದರಾಬಾದ್‌ನಲ್ಲಿ ನಡೆದ 12ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು ‘ಒಬ್ಬ ವಿಜ್ಞಾನಿ ಆಗಿ ನನಗೆ ರಾಕೆಟ್‌ಗಳ ಬಗ್ಗೆ ಪ್ರೀತಿ ಇದೆ. ಅವುಗಳನ್ನು ಮಕ್ಕಳಂತೆಯೇ ಭಾವಿಸುವೆ’ ಎಂದರು.

‘ಸಾಫ್ಟ್ ಲ್ಯಾಂಡಿಂಗ್’ನತ್ತ ‘ಸಿಟಿಟಿಸಿ’ ಚಿತ್ತ

ಭುವನೇಶ್ವರ (ಪಿಟಿಐ): ಚಂದ್ರಯಾನ– 3 ಕಾರ್ಯಕ್ರಮದ ಗಗನನೌಕೆಯು ಚಂದ್ರನ ಮೇಲೆ ‘ಸಾಫ್ಟ್ ಲ್ಯಾಂಡಿಂಗ್’ ಆಗುವುದನ್ನು ನೋಡಲು ಇಲ್ಲಿಯ ಸೆಂಟ್ರಲ್ ಟೂಲ್ ರೂಮ್ ಮತ್ತು ಟ್ರೇನಿಂಗ್ ಸೆಂಟರ್‌ನ (ಸಿಟಿಟಿಸಿ) ತಂತ್ರಜ್ಞರು ಮತ್ತು ವಿದ್ಯಾರ್ಥಿಗಳು ಹೆಚ್ಚೇ ಉತ್ಸುಕರಾಗಿದ್ದಾರೆ. ಸಂಸ್ಥೆಯು ಈ ಕಾರ್ಯಕ್ರಮಕ್ಕೆ ಅಗತ್ಯವಿದ್ದ ತಾಂತ್ರಿಕ ನೆರವನ್ನು ಇಸ್ರೊಗೆ ನೀಡಿರುವುದೇ ಇದಕ್ಕೆ ಕಾರಣ. ‘ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ವಿದ್ಯಾರ್ಥಿಗಳಂತೆ ನಮ್ಮ ಮನಃಸ್ಥಿತಿ ಇದೆ’ ಎಂದು ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಎಲ್. ರಾಜಶೇಖರ್ ಹೇಳಿದ್ದಾರೆ.

ಭಾರತ–ಯುಎಇ ವ್ಯಾಪಾರ ದ್ವಿಗುಣ

ಪ್ರಧಾನಿ ನರೇಂದ್ರ ಮೋದಿ– ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ದ್ವಿಪಕ್ಷೀಯ ಚರ್ಚೆ

ಅಬುದಾಬಿ (ಪಿಟಿಐ): ಫ್ರಾನ್ಸ್ ಪ್ರವಾಸದ ಬಳಿಕ ಗಲ್ಫ್ ರಾಷ್ಟ್ರವಾದ ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ರಾಜಧಾನಿ ಅಬುದಾಬಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ, ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಜೊತೆಗೆ ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಒಪ್ಪಂದ ಕುರಿತು ಮಾತುಕತೆ ನಡೆಸಿದರು.

ಕಳೆದ ವರ್ಷ ಭಾರತ–ಯುಎಇ ನಡುವಿನ ಆರ್ಥಿಕ ಒಪ್ಪಂದದಿಂದಾಗಿ ಎರಡೂ ದೇಶಗಳ ನಡುವೆ ಶೇ 20ರಷ್ಟು ವ್ಯಾಪಾರ ವಹಿವಾಟು ವೃದ್ಧಿಸಿದ್ದು, ಈ ಕುರಿತು ಇಬ್ಬರೂ ನಾಯಕರು ಚರ್ಚಿಸಿದರು.

ಬಳಿಕ ಹಲವು ಒಪ್ಪಂದಗಳಿಗೆ ಸಹಿ ಹಾಕಿದ ಮೋದಿ ಅವರು, ‘ಎರಡು ರಾಷ್ಟ್ರಗಳ ಕರೆನ್ಸಿಗಳು ಸದೃಢ ಆರ್ಥಿಕತೆ ವೃದ್ಧಿಗೆ ಪೂರಕವಾಗಿದ್ದು, ನಮ್ಮ ನಡುವೆ ಮತ್ತಷ್ಟು ವಿಶ್ವಾಸ ವೃದ್ಧಿಗೆ ನಾಂದಿ ಹಾಡಿವೆ’ ಎಂದು ಹೇಳಿದ್ದಾರೆ.

‘ಉಭಯ ದೇಶಗಳ ನಡುವಣ ಪರಸ್ಪರ ಸಹಕಾರ ಮತ್ತು ನೆರವಿಗೆ ಈ ಒಪ್ಪಂದ ಸಹಕಾರಿಯಾಗಲಿದೆ’ ಎಂದು ಯುಎಇ ಅಧ್ಯಕ್ಷರು ಪ್ರತಿಕ್ರಿಯಿಸಿದ್ದಾರೆ.

ಇದಕ್ಕೂ ಮೊದಲು ಮೋದಿ ಅವರಿಗೆ ಅಧ್ಯಕ್ಷರ ಅರಮನೆಯಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು. ತ್ರಿವರ್ಣ ಧ್ವಜ ಹಿಡಿದು ಹಾಜರಿದ್ದ ಮಕ್ಕಳು ಈ ಅಪೂರ್ವ ಕ್ಷಣಕ್ಕೆ ಸಾಕ್ಷಿಯಾದರು.

ಎರಡೂ ದೇಶಗಳು ವ್ಯಾಪಾರ, ಹೂಡಿಕೆ, ಇಂಧನ, ಆಹಾರ ಭದ್ರತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಶಿಕ್ಷಣ, ಹಣಕಾಸು, ರಕ್ಷಣೆ, ಭದ್ರತೆ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದ ಒಪ್ಪಂದಗಳಿಗೆ ಸಹಿ ಹಾಕಿವೆ.

ಸಮ್ಮೇಳನಕ್ಕೆ ಸಹಕಾರ: ನವೆಂಬರ್ 28ರಿಂದ ಡಿಸೆಂಬರ್ 12ರವರೆಗೆ ದುಬೈನ ಎಕ್ಸೋ ಸಿಟಿಯಲ್ಲಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನ (ಸಿಒಪಿ28) ನಡೆಯಲಿದೆ. ಇದರ ನೇತೃತ್ವವನ್ನು ಯುಎಇ ಹೊತ್ತಿದ್ದು, ಸಮ್ಮೇಳನದ ಯಶಸ್ಸಿಗೆ ಭಾರತ ಸಂಪೂರ್ಣ ಸಹಕಾರ ನೀಡಲಿದೆ ಎಂದು ಮೋದಿ ಭರವಸೆ ನೀಡಿದ್ದಾರೆ.

ಸ್ಥಳೀಯ ಕರೆನ್ಸಿ ಬಳಕೆಗೆ ಒಪ್ಪಂದ: ಗಡಿಯಾಚೆಗಿನ ವಹಿವಾಟುಗಳಿಗೆ ಸ್ಥಳೀಯ ಕರೆನ್ಸಿ ಬಳಸುವ ಒಪ್ಪಂದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತು ಸೆಂಟ್ರಲ್ ಬ್ಯಾಂಕ್ ಆಫ್ ಯುಎಇ (ಸಿಬಿಯುಎಇ) ಶನಿವಾರ ಸಹಿ ಮಾಡಿವೆ.

ಗಡಿಯಾಚೆಗಿನ ವಹಿವಾಟುಗಳಿಗೆ ಭಾರತದ ರೂಪಾಯಿ ಮತ್ತು ಯುಎಇನ ದಿರ್ಹಂ ಕರೆನ್ಸಿಗಳ ಬಳಕೆ, ಪಾವತಿ ಮತ್ತು ಮೆಸೆಜಿಂಗ್ ವ್ಯವಸ್ಥೆಯನ್ನು ಸೇರಿಸುವ ಒಪ್ಪಂದಕ್ಕೆ ಬರಲಾಗಿದೆ ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.

3 ದಿನದ ಪ್ರವಾಸದ ಬಳಿಕ ಮೋದಿ ಶನಿವಾರ ರಾತ್ರಿ ಭಾರತಕ್ಕೆ ಮರಳಿದರು



ಅಬು ದಾಬಿಯಲ್ಲಿ ಶನಿವಾರ ಪ್ರಧಾನಿ ನರೇಂದ್ರ ಮೋದಿ ಹಾಗೂ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಉಭಯ ಕುಶಲೋಪರಿ ನಡೆಸಿದರು –ಪಿಟಿಐ ಚಿತ್ರ

ಸಸ್ಯಾಹಾರ ಸವಿದ ಮೋದಿ

ಯುಎಇ ಸಾಂಸ್ಕೃತಿಕ ಹೆಗ್ಗುರುತಾದ ಅಧ್ಯಕ್ಷರ ಅರಮನೆ ಕಸ್ರ್-ಅಲ್-ವತನ್‌ನಲ್ಲಿ ಪ್ರಧಾನಿ ಮೋದಿ ಅವರಿಗೆ ಶಾಖಾಹಾರದ ಔತಣಕೂಟ ಏರ್ಪಡಿಸಲಾಗಿತ್ತು.

ಕಪ್ಪು ಮಸೂರ್ ದಾಲ್, ಗೋಧಿಯಿಂದ ತಯಾರಿಸಿದ ಖಾದ್ಯ, ಕ್ಯಾರೆಟ್ ತಂದೂರಿ ಆಹಾರದ ಪಟ್ಟಿಯಲ್ಲಿದ್ದವು. ಸ್ಥಳೀಯ ಋತುಮಾನಕ್ಕೆ ಅನುಗುಣವಾಗಿ ಲಭಿಸುವ ಹಣ್ಣುಗಳು ಭೋಜನದ ಸವಿ ಹೆಚ್ಚಿಸಿದ್ದವು.

ನೌಕಾಪಡೆಗೆ 26 ರಫೇಲ್ ಖರೀದಿ

ನವದೆಹಲಿ (ಪಿಟಿಐ): ಭಾರತೀಯ ನೌಕಾಪಡೆಗೆ ಹೊಸ ಪೀಳಿಗೆಯ 26 ರಫೇಲ್ ಜೆಟ್‌ಗಳ ಖರೀದಿಗೆ ಕೇಂದ್ರ ಸರ್ಕಾರವು ಅಧಿಕೃತವಾಗಿ ಮುದ್ರೆ ಒತ್ತಿದೆ ಎಂದು ಫ್ರಾನ್ಸ್‌ನ ಫೈಟರ್ ಜೆಟ್ ರಫೇಲ್ ತಯಾರಿಕಾ ಕಂಪನಿಯಾದ ಡಾಸೊ ಏವಿಯೇಷನ್ ಶನಿವಾರ ದೃಢಪಡಿಸಿದೆ.

ರಕ್ಷಣಾ ಸಚಿವಾಲಯವು ರಫೇಲ್ (ನೌಕಾಪಡೆ) ಜೆಟ್‌ಗಳ ಖರೀದಿಗೆ ಗುರುವಾರ ಒಪ್ಪಿಗೆ ನೀಡಿದೆ. ಈಗಾಗಲೇ, ಭಾರತೀಯ ವಾಯುಪಡೆಯಲ್ಲಿ 36 ರಫೇಲ್ ಜೆಟ್‌ಗಳಿವೆ. ಈಗ ನೌಕಾಪಡೆಗೆ ಹೊಸದಾಗಿ 26 ಜೆಟ್‌ಗಳು ಸೇರ್ಪಡೆಯಾಗುತ್ತಿದ್ದು, ರಕ್ಷಣಾ ಪಡೆಯ ಬತ್ತಳಿಕೆಯಲ್ಲಿರುವ ರಫೇಲ್‌ಗಳ ಸಂಖ್ಯೆ 62ಕ್ಕೆ ತಲುಪಲಿದೆ. ವಾಯುಪಡೆ ಮತ್ತು ನೌಕಾಪಡೆ ಎರಡಕ್ಕೂ ಫ್ರಾನ್ಸ್‌ನಿಂದ ಜೆಟ್‌ಗಳನ್ನು ಖರೀದಿಸಿದೆ.

ಭಾರತದಲ್ಲಿ ಹೂಡಿಕೆ: ಫ್ರಾನ್ಸ್ ಉದ್ಯಮಿಗಳಿಗೆ ಆಮಂತ್ರಣ

ಪ್ಯಾರಿಸ್ (ಪಿಟಿಐ): ಭಾರತದಲ್ಲಿ ಹೂಡಿಕೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್‌ನ ಉದ್ಯಮಿಗಳಿಗೆ ಆಮಂತ್ರಣ ನೀಡಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರ ಆಹ್ವಾನದ ಮೇರೆಗೆ ಮೋದಿ ಅವರು ಎರಡು ದಿನಗಳ ಕಾಲ ಫ್ರಾನ್ಸ್ ಪ್ರವಾಸ ಕೈಗೊಂಡಿದ್ದರು. ಪ್ರವಾಸದ ಭಾಗವಾಗಿ ನಡೆದ ಭಾರತ–ಫ್ರಾನ್ಸ್ ಸಿಇಒಗಳ ಸಭೆಯಲ್ಲಿ ಪ್ರಧಾನಿ ಮೋದಿ ಉದ್ಯಮಿಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ಈ ಬಗ್ಗೆ ಟ್ವಿಟರ್‌ನಲ್ಲಿ ಪೋಸ್ಟ್ ಪ್ರಕಟಿಸಿರುವ ಮೋದಿ, ‘ಭಾರತ–ಫ್ರಾನ್ಸ್ ನಡುವಿನ ವ್ಯಾಪಾರ ಸಹಕಾರ ವಿಸ್ತರಣೆಗೆ ಇರುವ ಮಾರ್ಗಗಳ ಕುರಿತು ಚರ್ಚಿಸಲು ಅಧ್ಯಕ್ಷ ಮ್ಯಾಕ್ರನ್ ಮತ್ತು ನಾನು ಪ್ರಮುಖ ಸಿಇಒಗಳ ಸಭೆ ನಡೆಸಿದ್ದೇವೆ. ಭಾರತದಲ್ಲಾಗುತ್ತಿರುವ ಸುಧಾರಣೆಗಳನ್ನು ಈ ವೇಳೆ ಒತ್ತಿ ಹೇಳಿದ್ದೇನೆ. ಭಾರತ ಒದಗಿಸುತ್ತಿರುವ ಅವಕಾಶಗಳನ್ನು ಬಳಸಿಕೊಳ್ಳುವಂತೆ ಉದ್ಯಮಿಗಳಿಗೆ ತಿಳಿಸಿದ್ದೇನೆ‘ ಎಂದು ಹೇಳಿದ್ದಾರೆ.

ಭಾರತ ಮತ್ತು ಫ್ರಾನ್ಸ್‌ನ ಕಾರ್ಯತಂತ್ರ ಪಾಲುದಾರಿಕೆಗೆ 25 ವರ್ಷಗಳು ತುಂಬಿವೆ. ದ್ವಿಪಕ್ಷೀಯ ಒಪ್ಪಂದಗಳನ್ನು ಗಟ್ಟಿಗೊಳಿಸುವಲ್ಲಿ ಎರಡೂ ದೇಶಗಳ ಉದ್ಯಮಿಗಳು ಗಣನೀಯ ಕೊಡುಗೆ ನೀಡಿದ್ದಾರೆ ಎಂದು ಮೋದಿ ತಿಳಿಸಿದ್ದಾರೆ.

ಬಾಸ್ಟಿಲ್ ಡೇ ಪರೇಡ್‌ನಲ್ಲಿ ಭಾರತ: ಫ್ರಾನ್ಸ್‌ನ ಬಾಸ್ಟಿಲ್ ಡೇ ಪಥಸಂಚಲನದಲ್ಲಿ ಭಾರತೀಯ ಸೇನಾ ತುಕಡಿಗಳಿಗೆ ಸ್ಥಾನ ಸಿಕ್ಕಿರುವುದಕ್ಕೆ ಪ್ರಧಾನಿ ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ.

‘ಫ್ರಾನ್ಸ್ ಭೇಟಿ ಸ್ಮರಣೀಯ. ಬಾಸ್ಟಿಲ್ ಡೇ ಪರೇಡ್‌ನಲ್ಲಿ ಭಾಗವಹಿಸಲು ಭಾರತೀಯ ಸೇನಾ ತುಕಡಿಗಳಿಗೆ ಅವಕಾಶ ಸಿಕ್ಕಿದ್ದು ಸಂತಸದ ವಿಚಾರ. ಸಮಾರಂಭದಲ್ಲಿ ಭಾಗವಹಿಸಲು ನನಗೆ ಆಮಂತ್ರಣ ನೀಡಿದ್ದು ಮತ್ತೊಂದು ವಿಶೇಷ ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಮೋದಿಗೆ ಮ್ಯಾಕ್ರನ್ ವಿಶೇಷ ಔತಣ: ಪ್ರಧಾನಿ ಮೋದಿ ಅವರಿಗೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಶುಕ್ರವಾರ ರಾತ್ರಿ ಲೂವ್ ಮ್ಯೂಸಿಯಂನಲ್ಲಿ ವಿಶೇಷ ಔತಣಕೂಟ ಏರ್ಪಡಿಸಿದ್ದರು. ಮ್ಯಾಕ್ರನ್ ಮತ್ತು ಅವರ ಪತ್ನಿ, ಫ್ರಾನ್ಸ್‌ನ ಮೊದಲ ಮಹಿಳೆ ಬ್ರಿಗಿಟ ಮ್ಯಾಕ್ರನ್ ಅವರು ಮೋದಿಗೆ ಸ್ವಾಗತ ಕೋರಿದರು.

ಮಣಿಪುರ: ಆರ್‌ಎಸ್‌ಎಸ್ ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರ ಜನಾಂಗೀಯ ಸಂಘರ್ಷದ ಕುರಿತು ಐರೋಪ್ಯ ಒಕ್ಕೂಟದ ಸಂಸತ್‌ನಲ್ಲಿ ಕೈಗೊಂಡಿರುವ ನಿರ್ಣಯದ ಬಗ್ಗೆ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ವಾಕ್ಸಮರದಲ್ಲಿ ತೊಡಗಿದ್ದರೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ರಾಜ್ಯದಲ್ಲಿನ ಸದ್ಯದ ಪರಿಸ್ಥಿತಿಯ ಬಗ್ಗೆ ಮತ್ತೊಮ್ಮೆ ತೀವ್ರ ಕಳವಳ ವ್ಯಕ್ತಪಡಿಸಿದೆ.

ತಮಿಳುನಾಡಿನ ಊಟಿಯಲ್ಲಿ ಮೂರು ದಿನಗಳ ಅಖಿಲ ಭಾರತೀಯ ಪ್ರಾಂತ ಪ್ರಚಾರಕ್ ಸಭೆಯ ಕೊನೆಯಲ್ಲಿ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದ ಆರ್‌ಎಸ್‌ಎಸ್ ‘ಸಂತ್ರಸ್ತರಿಗೆ ಪರಿಹಾರ ಪ್ರಯತ್ನಗಳನ್ನು ವಿಸ್ತರಿಸುವ ಬಗ್ಗೆ ಚರ್ಚಿಸಲಾಯಿತು. ಅಲ್ಲದೆ, ಶಾಶ್ವತ ಶಾಂತಿ ಸ್ಥಾಪಿಸಲು ಮತ್ತು ಪುನರ್‌ವಸತಿ ಕಲ್ಪಿಸಲು ಸಾಧ್ಯವಿರುವ ಎಲ್ಲ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಲಾಯಿತು’ ಎಂದು ಹೇಳಿದೆ.

‘ಸಂಘರ್ಷ ಪೀಡಿತ ರಾಜ್ಯದಲ್ಲಿ ಶಾಂತಿ ಸ್ಥಾಪನೆ ಮತ್ತು ಪರಸ್ಪರ ಸಾಮರಸ್ಯ ಮೂಡಿಸಲು ಸಮಾಜದ ಎಲ್ಲ ವರ್ಗಗಳು ತಮ್ಮ ಕೊಡುಗೆ ನೀಡಬೇಕು ಎಂದೂ ಒತ್ತಾಯಿಸಲಾಗಿದೆ’ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಮತ್ತು ಸಂಘಟನೆಯ ಇನ್ನಿತರ ಉನ್ನತ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಈಶಾನ್ಯ ರಾಜ್ಯದ ಜನಾಂಗೀಯ ಹಿಂಸಾಚಾರದ ಬಗ್ಗೆ ಆರ್‌ಎಸ್‌ಎಸ್ ಕಳವಳ ವ್ಯಕ್ತಪಡಿಸಿರುವುದು ತಿಂಗಳಲ್ಲಿ ಇದು ಎರಡನೇ ಬಾರಿ. ಜೂನ್‌ನಲ್ಲಿ ಬಿಡುಗಡೆ ಮಾಡಿದ್ದ ಹೇಳಿಕೆಯಲ್ಲಿ, ಶಾಂತಿ ಮರುಸ್ಥಾಪನೆಗಾಗಿ, ವಿಶ್ವಾಸ ಕೊರತೆಯನ್ನು ಮಾತುಕತೆಯ ಮೂಲಕ ನೀಗಿಸಲು ಎರಡೂ ಕಡೆಯವರನ್ನು ಹೊಸಬಾಳೆ ಅವರು ಒತ್ತಾಯಿಸಿದ್ದರು.

ಆರ್‌ಎಸ್‌ಎಸ್ ಅಂಗಸಂಸ್ಥೆ ಬುಡಕಟ್ಟು ಕಲ್ಯಾಣದ ‘ವನವಾಸಿ ಕಲ್ಯಾಣ ಆಶ್ರಮ’ದ ಆಂತರಿಕ ಸಭೆಯಲ್ಲಿಯೂ ಮಣಿಪುರದ ಹಿಂಸಾಚಾರ ಕುರಿತು ಚರ್ಚೆ ನಡೆದಿತ್ತು.

ಮೈತೇಯಿ ಬುಡಕಟ್ಟು ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುವುದರಿಂದ ಉದ್ಭವಿಸುವ ಸಮಸ್ಯೆಗಳ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಭಾರತೀಯ ರೂಪಾಯಿ ಬಳಕೆಗೆ ಹಿಂಜರಿಕೆ ಇಲ್ಲ: ಶ್ರೀಲಂಕಾ

ಕೊಲಂಬೊ (ಪಿಟಿಐ):‘ಶ್ರೀಲಂಕಾವು ಭಾರತದ ರೂಪಾಯಿಯನ್ನು ಸಾಮಾನ್ಯ ಕರೆನ್ಸಿಯಾಗಿ ಅಮೆರಿಕದ ಡಾಲರ್‌ನಂತೆ ಬಳಸುವುದನ್ನು ಎದುರು ನೋಡಲು ಬಯಸುತ್ತದೆ’ ಎಂದು ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಹೇಳಿದ್ದಾರೆ.

ನವದೆಹಲಿಗೆ ಮೊದಲ ಅಧಿಕೃತ ಭೇಟಿ ಕೈಗೊಳ್ಳಲಿರುವ ಕೆಲವು ದಿನಗಳ ಮೊದಲು, ಈ ವಾರ ಇಲ್ಲಿ ನಡೆದ ‘ಇಂಡಿಯನ್ ಸಿಇಒ ಫೋರಂ’ ಉದ್ದೇಶಿಸಿ ಮಾತನಾಡಿದ ರನಿಲ್ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಜಪಾನ್, ಕೊರಿಯಾ ಮತ್ತು ಚೀನಾದಂತಹ ದೇಶಗಳನ್ನು ಒಳಗೊಂಡಂತೆ ಪೂರ್ವ ಏಷ್ಯಾವು 75 ವರ್ಷಗಳ ಹಿಂದೆ ಗಮನಾರ್ಹ ಬೆಳವಣಿಗೆ ಕಂಡಂತೆಯೇ, ಈಗ ಹಿಂದೂ ಮಹಾಸಾಗರದ ಪ್ರದೇಶದಲ್ಲಿ ಭಾರತದ ಸರದಿ ಇದಾಗಿದೆ’ ಎಂದು ವಿಕ್ರಮಸಿಂಘೆ ಬಣ್ಣಿಸಿದರು.

ಕಾರು ಹತ್ತಿಸಲು ಯತ್ನಿಸಿದ ಆರೋಪಿ!

ಒಂದನೇ ಪುಟದಿಂದ...

15 ಕಿ.ಮೀವರೆಗೂ ಆರೋಪಿಯನ್ನು ಬೆನ್ನಟ್ಟಿ ಹೋಗಿದ್ದ ಲೋಕಾಯುಕ್ತ ಪೊಲೀಸರು, ನೆಲಮಂಗಲ ಸೊಂಡೆಕೊಪ್ಪ ರಸ್ತೆಯಲ್ಲಿ ಆರೋಪಿಯ ಕಾರನ್ನು ಸುತ್ತುವರಿದರು. ಪಂಚನಾಮೆಗಾಗಿ ಬಂದಿದ್ದ ಸರ್ಕಾರಿ ನೌಕರರು ಮತ್ತು ಲೋಕಾಯುಕ್ತ ಪೊಲೀಸರ ಮೇಲೆ ವಾಹನ ಹತ್ತಿಸಿ ಪರಾರಿಯಾಗಲು ಆರೋಪಿ ಯತ್ನಿಸಿದರು.

ಲೋಕಾಯುಕ್ತದ ಟಾಟಾ ಸುಮೊ ವಾಹನವನ್ನು ಅಡ್ಡ ನಿಲ್ಲಿಸಿ, ಡಿಕ್ಕಿ ಹೊಡೆಸಿ ಸಾಕ್ಷಿದಾರರು ಮತ್ತು ಪೊಲೀಸರಿಗೆ ಅಪಾಯವಾಗದಂತೆ ತಡೆಯಲಾಗಿದೆ ಎಂದು ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ ಕೆ.ವಿ.ಅಶೋಕ್ ತಿಳಿಸಿದ್ದಾರೆ. ಇನ್‌ಸ್ಪೆಕ್ಟರ್ ಎಸ್.ಶ್ರೀಕಾಂತ್ ನೇತೃತ್ವದ ತಂಡವು ಕಾರ್ಯಾಚರಣೆ ನಡೆಸಿತ್ತು. ಆರೋಪಿಯನ್ನು ಲಂಚದ ಹಣದ ಸಮೇತ ಬಂಧಿಸಲಾಗಿದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿ ದಾಖಲಿಸಿರುವ ಪ್ರಕರಣದ ಜತೆಯಲ್ಲಿ ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿ, ವಾಹನ ಹತ್ತಿಸಲು ಯತ್ನಿಸಿದ ಆರೋಪದ ಮೇಲೆ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಆರೋಪಿಯನ್ನು ಶನಿವಾರ ಮಧ್ಯಾಹ್ನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ವಿಚಾರಣೆ ಇಲ್ಲದೆ ಬಂಧನ ವಿಸ್ತರಣೆ ಅಕ್ಷಮ್ಯ’

ನವದೆಹಲಿ (ಪಿಟಿಐ): ವಿಚಾರಣೆ ನಡೆಸದೆ ಅಥವಾ ನ್ಯಾಯಾಲಯದ ಸೂಚನೆ ಇಲ್ಲದೆಯೇ ವ್ಯಕ್ತಿಯ ಬಂಧನದ ಅವಧಿಯನ್ನು ವಿಸ್ತರಿಸುವುದು ಅಕ್ಷಮ್ಯ. ಇದು ಆತನ ವೈಯಕ್ತಿಕ ಸ್ವಾತಂತ್ರ್ಯದ ಹರಣವಾಗಲಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ತನ್ನ ಅಭಿಪ್ರಾಯ ಆಲಿಸದೇ ಎರಡು ಬಾರಿ ಬಂಧನದ ಅವಧಿ ವಿಸ್ತರಿಸಿದ್ದ ಪೊಲೀಸ್ ಅಧಿಕಾರಿಗಳ ಕ್ರಮ ಪ್ರಶ್ನಿಸಿ ಪ್ರಕಾಶ್ ಚಂದ್ರ ಯಾದವ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಪೀಠವು ಈ ಆದೇಶ ಹೊರಡಿಸಿದೆ.

ಜಾರ್ಖಂಡ್‌ನ ಅಪರಾಧ ನಿಯಂತ್ರಣ ಕಾಯ್ದೆಯಡಿ ‘ಸಮಾಜ ಘಾತುಕ ವ್ಯಕ್ತಿ’ ಎಂಬ ಆರೋಪದ ಮೇಲೆ ಯಾದವ್ ಅವರನ್ನು ಬಂಧಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ವಜಾಗೊಳಿಸಿತ್ತು. ಹಾಗಾಗಿ, ಅವರು ‘ಸುಪ್ರೀಂ’ಗೆ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಪೀಠವು, ‘ಸಲಹಾ ಮಂಡಳಿ ಮುಂದೆ ಹಾಜರುಪಡಿಸದೆ ವ್ಯಕ್ತಿಯ ಬಂಧನದ ಅವಧಿ ವಿಸ್ತರಿಸುವಂತಿಲ್ಲ. ಜೊತೆಗೆ, ಮೂರು ತಿಂಗಳಿಗೂ ಹೆಚ್ಚು ಕಾಲ ಬಂಧನದಲ್ಲಿ ಇಡುವಂತಿಲ್ಲ. ಇದು ಆರೋಪಿಗಳ ಬಂಧನಕ್ಕೆ ಸಂಬಂಧಿಸಿದಂತೆ ರಚಿಸಿರುವ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಲಿದೆ’ ಎಂದಿದೆ.

ರೋಗಿ ಮೇಲ್ವಿಚಾರಣೆಗೆ ರೋಬೊ

ಒಂದನೇ ಪುಟದಿಂದ...

ವಾರ್ಡ್‌ಗಳನ್ನು ಸೋಂಕು ಮುಕ್ತಗೊಳಿಸಲು ಇದು ಸಹಕಾರಿಯಾಗಿದೆ.

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆ ಇರುವವರಿಗೆ ಸಂಸ್ಥೆಯ ಹಿಂಭಾಗ ತಾತ್ಕಾಲಿಕ ಆಸ್ಪತ್ರೆ (ಮೇಕ್ ಶಿಫ್ಟ್) ನಿರ್ಮಿಸಲಾಗಿತ್ತು. 200 ಹಾಸಿಗೆಗಳ ಮೇಕ್ ಶಿಫ್ಟ್ ಆಸ್ಪತ್ರೆಯನ್ನೂ ಈಗ ಎದೆ ರೋಗಗಳ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ. ಇದನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ₹200 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿತ್ತು.

ಫಿಸಿಯೋಥೆರಪಿ ಕೇಂದ್ರ

ಶ್ವಾಸಕೋಶ ತೊಂದರೆ ಇರುವವರಿಗೆ ಸಮಸ್ಯೆ ನಿವಾರಣೆಗೆ ಸಂಸ್ಥೆಯಲ್ಲಿ ‘ಮಾಡರ್ನ್ ಚೆಸ್ಟ್ ಫಿಸಿಯೋಥೆರಪಿ’ ಕೇಂದ್ರ ಪ್ರಾರಂಭಿಸಲಾಗಿದೆ. ಇದನ್ನು ಸರ್ಕಾರದ ಅನುದಾನ ಹಾಗೂ ಕಾರ್ಪೊರೇಟ್ ಕಂಪನಿಗಳ ಸಿಎಸ್‌ಆರ್ ಅಡಿ ₹3 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಶ್ವಾಸಕೋಶ ತೊಂದರೆ ಹೊಂದಿರುವ ರೋಗಿಗಳಿಗೆ ಅಗತ್ಯವಾದ ಫಿಸಿಯೋಥೆರಪಿ ಚಿಕಿತ್ಸೆ ನೀಡುವ ಮೂಲಕ ಕಾಯಿಲೆಯ ತೀವ್ರತೆಯನ್ನು ತಗ್ಗಿಸಿ, ಶ್ವಾಸಕೋಶ ಪುನರ್ವಸತಿ ಚಿಕಿತ್ಸೆಯನ್ನೂ ನೀಡಲಾಗುತ್ತಿದೆ.

ರೋಚಕ ಘಟ್ಟದಲ್ಲಿ ದುಲೀಪ್ ಟ್ರೋಫಿ ಫೈನಲ್: ಕೌಶಿಕ್‌ಗೆ 3 ವಿಕೆಟ್

ಜಯದ ಕನಸಿನಲ್ಲಿ ದಕ್ಷಿಣ ವಲಯ

• ಗಿರೀಶ ದೊಡ್ಡಮನಿ



ದುಲೀಪ್ ಟ್ರೋಫಿ ಕ್ರಿಕೆಟ್ ಫೈನಲ್‌ನಲ್ಲಿ ವಿಕೆಟ್ ಗಳಿಸಿದ ದಕ್ಷಿಣ ವಲಯದ ಬೌಲರ್ ವಿ. ಕೌಶಿಕ್ (ಎಡ) ಅವರೊಂದಿಗೆ ಮಯಂಕ್ ಅಗರವಾಲ್ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ಬೆಂಗಳೂರು: ಶನಿವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಮಳೆ ಬರಲಿಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಿಸಿಲಿನ ಚಿನ್ನಾಟವೂ ಇತ್ತು.

ಈ ಅಹ್ಲಾದಕರ ವಾತಾವರಣದಲ್ಲಿ ನಡೆದ ದುಲೀಪ್ ಟ್ರೋಫಿ ಫೈನಲ್ ಪಂದ್ಯದ ನಾಲ್ಕನೇ ದಿನದಾಟವೂ ರಸವತ್ತಾಗಿತ್ತು. ವಾರಾಂತ್ಯದ ಮೋಜಿಗಾಗಿ ಗ್ಯಾಲರಿಯಲ್ಲಿ ಸೇರಿದ್ದ ಕ್ರಿಕೆಟ್‌ಪ್ರಿಯರಿಗೂ ಮನರಂಜನೆ ಲಭಿಸಿತು. ಇದೆಲ್ಲದರ ನಡುವೆ ಈ ಟ್ರೋಫಿಗೆ ಮುತ್ತಿಡಲು ದಕ್ಷಿಣ ವಲಯ ಇನ್ನೂ ಅರ್ಧ ಹಾದಿ ಕ್ರಮಿಸಬೇಕಿದೆ. ಪಶ್ಚಿಮ ವಲಯಕ್ಕೂ ಅವಕಾಶ ಇನ್ನೂ ಇದೆ. ಆದ್ದರಿಂದ ಭಾನುವಾರ ದಿನದಾಟವು ರೋಚಕವಾಗುವ ಸಾಧ್ಯತೆ ಇದೆ.

ಪಂದ್ಯದ ನಾಲ್ಕನೇ ದಿನದಾಟದಲ್ಲಿ 298 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿರುವ ಪಶ್ಚಿಮ ವಲಯಕ್ಕೆ ದಕ್ಷಿಣ ವಲಯ ತಂಡದ ಮಧ್ಯಮವೇಗಿ ಕೌಶಿಕ್ ವಾಸುಕಿ (28ಕ್ಕೆ3) ಪೆಟ್ಟು ನೀಡಿದರು. ಆದರೆ ಪಶ್ಚಿಮ ತಂಡದ ನಾಯಕ ಪ್ರಿಯಾಂಕ್ ಪಾಂಚಾಲ್ (92 ಬ್ಯಾಟಿಂಗ್, 315 ನಿಮಿಷ, 205ಎ, 4X11)ಅವರ ತಾಳ್ಮೆಯ ಬ್ಯಾಟಿಂಗ್‌ನಿಂದ ತಂಡ 62.3 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 182 ರನ್ ಗಳಿಸಿದೆ. ಗೆಲುವಿಗೆ ಇನ್ನೂ 116 ರನ್ ಬೇಕಿದೆ.

ಪಶ್ಚಿಮ ತಂಡದ ಆರಂಭಿಕ ಬ್ಯಾಟರ್ ಪೃಥ್ವಿ ಶಾ ಅವರನ್ನು ಇನಿಂಗ್ಸ್‌ನ ಎಂಟನೇ ಓವರ್‌ನಲ್ಲಿ ಕ್ಲೀನ್ ಬೌಲ್ಡ್ ಮಾಡಿದ ಕೌಶಿಕ್ ವಿಕೆಟ್ ಖಾತೆ ತೆರೆದರು. ಐದು ಓವರ್‌ಗಳ ನಂತರ ವೈಶಾಖ ಇನ್ನೊಂದು ಬದಿಯಿಂದ ಹರ್ವಿಕ್ ದೇಸಾಯಿಯನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

> **ಪ್ರಮುಖ ವಿಕೆಟ್‌ಗಳನ್ನು ತೆಗೆದುಕೊಂಡಿದ್ದೇವೆ. ಇನ್ನೈದು ವಿಕೆಟ್‌ಗಳನ್ನು ಉರುಳಿಸಬೇಕು. ನಮ್ಮ ಬೌಲಿಂಗ್ ಪಡೆ ಉತ್ತಮವಾಗಿದೆ. ಗೆಲುವಿನ ಅವಕಾಶ ನಮಗೇ ಹೆಚ್ಚು –**
> **ವಿ. ಕೌಶಿಕ್** ದಕ್ಷಿಣ ವಲಯ ಬೌಲರ್

ಲಯ ಕಂಡುಕೊಳ್ಳಲು ಪರದಾಡಿದ ಚೇತೇಶ್ವರ್ ಪೂಜಾರ (15 ರನ್) ಮತ್ತು ಸೂರ್ಯಕುಮಾರ್ ಯಾದವ್ (4 ರನ್) ಅವರಿಬ್ಬರಿಗೂ ಒಂದೇ ಓವರ್‌ನಲ್ಲಿ ಪೆವಿಲಿಯನ್ ದಾರಿ ತೋರಿಸಿದ ಕೌಶಿಕ್ ಸಂಭ್ರಮಿಸಿದರು. ಪೂಜಾರ ಅವರು ಶಾರ್ಟ್ ಲೆಗ್ ಫೀಲ್ಡರ್ ತಿಲಕ್ ವರ್ಮಾಗೆ ಕ್ಯಾಚ್ ಕೊಟ್ಟರೆ, ಸೂರ್ಯ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಇವೆಲ್ಲವೂ ಚಹಾ ವಿರಾಮಕ್ಕೆ ಮುನ್ನ ನಡೆದವು. ನಂತರದ ಅವಧಿಯಲ್ಲಿಯೇ ಪಂದ್ಯ ಮುಗಿಸುವ ಉತ್ಸಾಹದಲ್ಲಿದ್ದ ಹನುಮವಿಹಾರಿ ಬಳಗಕ್ಕೆ ಪಾಂಚಾಲ್ ಮತ್ತು ಸರ್ಫರಾಜ್ ಖಾನ್ (48; 76ಎ, 4X5, 6X1) ಅಡ್ಡಿಯಾದರು. ಐದನೇ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದ ಇಬ್ಬರೂ ತಂಡದಲ್ಲಿ ಗೆಲುವಿನ ಭರವಸೆ ಮೂಡಿಸಿದ್ದರು. ಇಡೀ ಟೂರ್ನಿಯಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ಇಬ್ಬರೂ ಬ್ಯಾಟರ್‌ಗಳು ಇಲ್ಲಿ ಮಿಂಚಿದರು. ಆದರೆ, ದಿನದಾಟಕ್ಕೆ ಮಂದಬೆಳಕು ತೆರೆಯೆಳೆಯುವ ಮೂರು ಎಸೆತಗಳ ಮುನ್ನ ಸರ್ಫರಾಜ್ ಖಾನ್ ವಿಕೆಟ್ ಗಳಿಸಿದ ಎಡಗೈ ಸ್ಪಿನ್ನರ್ ಸಾಯಿಕಿಶೋರ್ ದಕ್ಷಿಣ ಬಳಗದ ಜಯದಾಸೆಗೆ ಮರುಜೀವ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ವಲಯ: 213. ಪಶ್ಚಿಮ ವಲಯ: 146. ಎರಡನೇ ಇನಿಂಗ್ಸ್: ದಕ್ಷಿಣ ವಲಯ: 81.1 ಓವರ್‌ಗಳಲ್ಲಿ 230 (ವಾಷಿಂಗ್ಟನ್ ಸುಂದರ್ 37, ವೈಶಾಖ ವಿಜಯಕುಮಾರ್ 23, ಧರ್ಮೇಂದ್ರಸಿಂಹ ಜಡೇಜ 40ಕ್ಕೆ5, ಅರ್ಜನ್ ನಾಗಸವಾಲಾ 68ಕ್ಕೆ2, ಅತಿಥ್ ಶೇತ್ 38ಕ್ಕೆ2)
ಪಶ್ಚಿಮ ವಲಯ: 62.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 182 (ಪ್ರಿಯಾಂಕ್ ಪಾಂಚಾಲ್ ಬ್ಯಾಟಿಂಗ್ 92, ಚೇತೇಶ್ವರ್ ಪೂಜಾರ 15, ಸೂರ್ಯಕುಮಾರ್ ಯಾದವ್ 4, ಸರ್ಫರಾಜ್ ಖಾನ್ 48, ವಾಸುಕಿ ಕೌಶಿಕ್ 28ಕ್ಕೆ3, ವೈಶಾಖ ವಿಜಯಕುಮಾರ್ 26ಕ್ಕೆ1, ಸಾಯಿಕಿಶೋರ್ 51ಕ್ಕೆ1)

ಜಡೇಜಗೆ ಐದು ವಿಕೆಟ್

ಪಶ್ಚಿಮ ವಲಯದ ಧರ್ಮೇಂದ್ರಸಿಂಗ್ ಜಡೇಜ ಐದು ವಿಕೆಟ್ ಗೊಂಚಲು ಗಳಿಸಿದರು.

ಶುಕ್ರವಾರ ಮೊದಲ ಇನಿಂಗ್ಸ್‌ನಲ್ಲಿ 67 ರನ್‌ಗಳ ಮುನ್ನಡೆ ಸಾಧಿಸಿದ್ದ ದಕ್ಷಿಣ ವಲಯವು ಎರಡನೇ ಇನಿಂಗ್ಸ್‌ನಲ್ಲಿ 60 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 181 ರನ್ ಗಳಿಸಿತ್ತು. ನಾಲ್ಕನೇ ದಿನ ಬೆಳಿಗ್ಗೆ ವಾಷಿಂಗ್ಟನ್ ಸುಂದರ್ ಮತ್ತು ವೈಶಾಖ ಉತ್ತಮವಾಗಿ ಬ್ಯಾಟಿಂಗ್ ಮಾಡಿ ತಂಡದ ಮೊತ್ತ ಹೆಚ್ಚಿಸಿದರು. ಅವರ ಜೊತೆಯಾಟವು ಹೆಚ್ಚು ಬೆಳೆಯದಂತೆ ಜಡೇಜ ತಡೆದರು. ವಾಷಿಂಗ್ಟನ್, ವೈಶಾಖ ಮತ್ತು ಕೌಶಿಕ್ ಅವರ ವಿಕೆಟ್‌ಗಳನ್ನು ಗಳಿಸಿದರು.

ಭಾರತ– ದಕ್ಷಿಣ ಆಫ್ರಿಕಾ ಸರಣಿ ವೇಳಾಪಟ್ಟಿ ಅಂತಿಮ

ಡರ್ಬನ್‌ನಲ್ಲಿ ಮೊದಲ ಟಿ20 ಪಂದ್ಯ

ನವದೆಹಲಿ (ಎಎಫ್‌ಪಿ): ಭಾರತ ತಂಡವು, ಡಿಸೆಂಬರ್– ಜನವರಿ ತಿಂಗಳಲ್ಲಿ ದಕ್ಷಿಣ ಆಫ್ರಿಕಾ ಪ್ರವಾಸ ನಡೆಸಲಿದ್ದು, ಮೂರು ಮಾದರಿಯ ಕ್ರಿಕೆಟ್ ಸರಣಿಗಳ ದಿನಾಂಕಗಳನ್ನು ಅಂತಿಮಗೊಳಿಸಲಾಗಿದೆ.

ಮೂರು ಪಂದ್ಯಗಳ ಟಿ–20 ಸರಣಿಯ ಮೊದಲ ಪಂದ್ಯ ಡರ್ಬನ್‌ನಲ್ಲಿ ಡಿಸೆಂಬರ್ 10ರಂದು ನಡೆಯಲಿದೆ. ಇನ್ನುಳಿದ ಪಂದ್ಯಗಳು ಕ್ಯಬೆಹಾ (ಡಿ.12) ಮತ್ತು ಜೋಹಾನಸ್‌ಬರ್ಗ್ (ಡಿ.14) ನಡೆಯಲಿವೆ ಎಂದು ಕ್ರಿಕೆಟ್ ಸೌತ್ ಆಫ್ರಿಕಾ (ಸಿಎಸ್‌ಎ) ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಜಂಟಿಯಾಗಿ ಬಿಡುಗಡೆಗೊಳಿಸಿದ ಹೇಳಿಕೆ ತಿಳಿಸಿದೆ.

ಗಾಂಧಿ–ಮಂಡೇಲಾ ಟ್ರೋಫಿಗಾಗಿ ನಡೆಯುವ 'ಫ್ರೀಡಂ ಸರಣಿ' ಹೆಸರಿನ ಏಕದಿನ ಪಂದ್ಯಗಳು ಜೋಹಾನಸ್‌ಬರ್ಗ್ (ಡಿ. 17), ಕ್ಯಬೆಹಾ (ಹಿಂದಿನ ಹೆಸರು ಪೋರ್ಟ್ ಎಲಿಝಬೆತ್) (ಡಿ. 19) ಮತ್ತು ಪಾರ್ಲ್ (ಡಿ.21) ನಲ್ಲಿ ನಡೆಯಲಿವೆ.

ಬಾಕ್ಸಿಂಗ್ ಡೇ ಟೆಸ್ಟ್ ಡಿಸೆಂಬರ್ 26 ರಿಂದ 30ರವರೆಗೆ ಸೆಂಚೂರಿಯನ್‌ನಲ್ಲಿ ನಡೆಯಲಿದೆ. ಎರಡನೇ ಟೆಸ್ಟ್ ಕೇಪ್‌ಟೌನ್‌ನಲ್ಲಿ ಜನವರಿ 3 ರಿಂದ 7ರವರೆಗೆ ನಡೆಯಲಿದೆ. ಈ ಹಿಂದೆ, 2021–22ರಲ್ಲಿ ಭಾರತ ಕೊನೆಯ ಬಾರಿ ದಕ್ಷಿಣ ಆಫ್ರಿಕಾದಲ್ಲಿ ಟೆಸ್ಟ್ ಸರಣಿ ಆಡಿದ್ದು 2–1 ರಿಂದ ಸರಣಿ ಸೋತಿತ್ತು. ಈ ಸರಣಿಯ ನಂತರ ವಿರಾಟ್ ಕೊಹ್ಲಿ ನಾಯಕತ್ವ ತೊರೆದಿದ್ದರು.

ನಾಲ್ಕರ ಘಟ್ಟಕ್ಕೆ ಲಕ್ಷ್ಯ

ಕೌನ್ಸಿಲ್ ಬ್ಲಫ್ಸ್ (ಅಮೆರಿಕ), (ಪಿಟಿಐ): ಭಾರತದ ಪ್ರಮುಖ ಆಟಗಾರ್ತಿ ಪಿ.ವಿ. ಸಿಂಧು ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು. ಆದರೆ ಲಕ್ಷ್ಯ ಸೇನ್ ಪುರುಷರ ವಿಭಾಗದಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಲಕ್ಷ್ಯ, ಶುಕ್ರವಾರ ರಾತ್ರಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ 21–10, 21–17 ರಲ್ಲಿ ಸ್ವದೇಶದ ಎಸ್.ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಅವರನ್ನು ಹಿಮ್ಮೆಟ್ಟಿಸಿದರು. ಸಿಂಧು 20–22, 13–21 ರಲ್ಲಿ ಗಾವೊ ಫಾಂಗ್ ಜೀ ಎದುರು ಪರಾಭವಗೊಂಡರು.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,300
ಒಡವೆ ಚಿನ್ನ 1ಗ್ರಾಂ	₹5,640
ಬೆಳ್ಳಿ ಕೆ.ಜಿಗೆ	₹77,400

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹505

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹149
ಆರ್‌ಎಸ್‌ಎಸ್‌-5	₹145
ಗುಡ್ ಲಾಟ್	₹127

ಖಾದ್ಯ ತೈಲ ಮುಂಬೈ

(10 ಕೆಜಿಗೆ)


ಶೇಂಗಾ (ರಿಫೈನ್ಡ್)	₹1740 (1740)
ಸೋಯಾ (ರಿಫೈನ್ಡ್)	₹945 (950)
ಸೂರ್ಯಕಾಂತಿ (ರಿಫೈನ್ಡ್)	₹945 (945)
ಪಾಮೋಲಿನ್	₹860 (860)

ಹಣಕಾಸು, ಆಟೊಮೊಬೈಲ್, ರಿಯಾಲ್ಟಿ ವಲಯ ಆಕರ್ಷಣೆ

ಎಫ್‌ಪಿಐ: ₹30,660 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಎಫ್‌ಐಐ ಒಳಹರಿವು (ಕೋಟಿಗಳಲ್ಲಿ)



ಬೆಂಗಳೂರು: ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳಲ್ಲಿ ಭಾರತವು ಈ ವರ್ಷದಲ್ಲಿ ಈವರೆಗೆ ಅತಿ ಹೆಚ್ಚಿನ ವಿದೇಶಿ ಬಂಡವಾಳವನ್ನು (ಎಫ್‌ಪಿಐ) ಆಕರ್ಷಿಸಿದೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಜುಲೈನಲ್ಲಿ 14ರವರೆಗೆ ನಡೆದಿರುವ ವಹಿವಾಟಿನಲ್ಲಿ ₹30,660 ಕೋಟಿ ಹೂಡಿಕೆ ಮಾಡಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ಕರೆನ್ಸಿ ಮಾರುಕಟ್ಟೆಯಲ್ಲಿ ಪ್ರಮುಖ ಕರೆನ್ಸಿಗಳ ಎದುರು ಡಾಲರ್ ಮೌಲ್ಯವು ಶುಕ್ರವಾರದ ವಹಿವಾಟಿನಲ್ಲಿ ಒಂದು ವರ್ಷದ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಡಾಲರ್ ಮೌಲ್ಯ ಇಳಿಕೆ ಕಂಡರೆ ಭಾರತದಂತಹ ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳಿಗೆ ಹೆಚ್ಚಿನ ಅನುಕೂಲ ಆಗಲಿದೆ. ಈಚಿನ ತಿಂಗಳುಗಳಲ್ಲಿ ಭಾರತದ ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆ ಹೆಚ್ಚಾಗುತ್ತಿದೆ. ಆದರೆ, ಚೀನಾ, ಥಾಯ್ಲೆಂಡ್ ಮತ್ತು ವಿಯೆಟ್ನಾಂ ದೇಶಗಳಿಂದ ವಿದೇಶಿ ಬಂಡವಾಳ ಹೊರಹರಿವು ಆಗುತ್ತಿದೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಹಣಕಾಸು, ಆಟೊಮೊಬೈಲ್, ಬಂಡವಾಳ ಸರಕುಗಳು, ರಿಯಾಲ್ಟಿ ಮತ್ತು ಎಫ್‌ಎಂಸಿಜಿ ವಲಯಗಳಲ್ಲಿ ವಿದೇಶಿ ಹೂಡಿಕೆದಾರರು ನಿರಂತರವಾಗಿ ಹಣ ತೊಡಗಿಸುತ್ತಿದ್ದಾರೆ. ಈ ಹೂಡಿಕೆಯಿಂದಾಗಿ ಷೇರುಗಳ ಮೌಲ್ಯ ಹೆಚ್ಚಾಗುತ್ತಿದ್ದು, ಷೇರುಪೇಟೆಗಳು ದಾಖಲೆ ಮಟ್ಟಕ್ಕೆ ಏರಿಕೆ ಕಂಡಿವೆ. ಭಾರತದ ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇರುವುದರಿಂದ ವಿದೇಶಿ ಬಂಡವಾಳ ಒಳಹರಿವು ದೀರ್ಘಾವಧಿಯವರೆಗೆ ಇದೇ ರೀತಿ ಮುಂದುವರಿಯುವ ಸಾಧ್ಯತೆ ಕಡಿಮೆ ಇದೆ ಎಂದೂ ಅವರು ಹೇಳಿದ್ದಾರೆ.

ಕಿಯಾ ಸೆಲ್ಟೋಸ್: ಒಂದೇ ದಿನ 13,424 ಬುಕಿಂಗ್

ನವದೆಹಲಿ (ಪಿಟಿಐ): ಕಿಯಾ ಇಂಡಿಯಾ ಕಂಪನಿಯು ಈಚೆಗಷ್ಟೇ ಬಿಡುಗಡೆ ಮಾಡಿರುವ ಹೊಸ ಸೆಲ್ಟೋಸ್ ಕಾರಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೊದಲ ದಿನವೇ 13,424 ಕಾರಿಗೆ ಬುಕಿಂಗ್ ಆಗಿದೆ ಎಂದು ಕಂಪನಿಯು ಮಾಹಿತಿ ನೀಡಿದೆ. ಶುಕ್ರವಾರದಿಂದ ಬುಕಿಂಗ್ ಆರಂಭವಾಗಿದೆ.

ಕೆ.ಜಿಗೆ ₹250ಕ್ಕೆ ಏರಿದ ಟೊಮೆಟೊ



ನವದೆಹಲಿ (ಪಿಟಿಐ): ದೇಶದಾದ್ಯಂತ ಟೊಮೆಟೊ ದರವು ಏರಿಕೆ ಕಾಣುತ್ತಲೇ ಇದೆ. ಉತ್ತರ ಪ್ರದೇಶದ ಹಪುರ್‌ನಲ್ಲಿ ಟೊಮೆಟೊ ರಿಟೇಲ್ ಮಾರಾಟ ದರವು ಕೆ.ಜಿಗೆ ಗರಿಷ್ಠ ₹250ಕ್ಕೆ ತಲುಪಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಂಗ್ರಹಿಸಿರುವ ಮಾಹಿತಿಯ ಪ್ರಕಾರ, ಶನಿವಾರ ಸರಾಸರಿ ರಿಟೇಲ್ ಮಾರಾಟ ದರ ಕೆ.ಜಿಗೆ ₹116.86 ಆಗಿದೆ. ಕೆ.ಜಿಗೆ ಗರಿಷ್ಠ ದರ ₹250 ಮತ್ತು ಕನಿಷ್ಠ ದರ ₹25ರಂತೆ ಮಾರಾಟ ಆಗಿದೆ.

ಟೊಮೆಟೊ ದರವು ಸಾಮಾನ್ಯವಾಗಿ ಜುಲೈ–ಆಗಸ್ಟ್ ಮತ್ತು ಅಕ್ಟೋಬರ್–ನವೆಂಬರ್ ಅವಧಿಯಲ್ಲಿ ಉತ್ಪಾದನೆ ಬಹಳ ಕಡಿಮೆ ಆಗುವುದರಿಂದ ಬೆಲೆಯಲ್ಲಿ ಏರಿಕೆ ಕಾಣುತ್ತದೆ. ಮುಂಗಾರು ಮಳೆಯಿಂದಾಗಿ ಪೂರೈಕೆ ಮಾಡುವುದು ಸವಾಲಾಗಿದೆ ಎಂದು ಇಲಾಖೆಯು ಹೇಳಿದೆ.

ಸಾಲದ ಬಡ್ಡಿ ಹೆಚ್ಚಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಎಂಸಿಎಲ್‌ಆರ್ ಆಧಾರಿತ ಸಾಲದ ಮೇಲಿನ ಬಡ್ಡಿದರವನ್ನು ಶೇ 0.05ರಷ್ಟು ಹೆಚ್ಚಿಸಿದೆ. ಇದರಿಂದಾಗಿ ವಾಹನ ಹಾಗೂ ವೈಯಕ್ತಿಕ ಸಾಲಗಳ ಮೇಲಿನ ಇಎಂಐ ಹೆಚ್ಚಾಗಲಿದೆ.

ಬ್ಯಾಂಕ್‌ನ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಪರಿಷ್ಕೃತ ಬಡ್ಡಿದರವು ಶನಿವಾರದಿಂದ ಜಾರಿಗೆ ಬಂದಿದೆ. ಒಂದು ವರ್ಷದ ಎಂಸಿಎಲ್‌ಆರ್ ಶೇ 8.50ರಿಂದ ಶೇ 8.55ಕ್ಕೆ ಏರಿಕೆ ಆಗಿದೆ. ಎರಡು ವರ್ಷಗಳ ಎಂಸಿಎಲ್‌ಆರ್ ಶೇ 8.65, ಮೂರು ವರ್ಷಗಳ ಎಂಸಿಎಲ್‌ಆರ್ ಶೇ 8.75ಕ್ಕೆ ಏರಿಕೆ ಆಗಿದೆ.

ಡಿ–ಮಾರ್ಟ್ ಲಾಭ ₹659 ಕೋಟಿ

ನವದೆಹಲಿ (ಪಿಟಿಐ): ಡಿ–ಮಾರ್ಟ್ ಮಳಿಗೆಗಳನ್ನು ನಿಯಂತ್ರಿಸುತ್ತಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಕಂಪನಿಯ ನಿವ್ವಳ ಲಾಭವು 2023ರ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 2.5ರಷ್ಟು ಹೆಚ್ಚಾಗಿ ₹659 ಕೋಟಿಗೆ ಏರಿಕೆ ಕಂಡಿದೆ.

ಹಿಂದಿನ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ₹643 ಕೋಟಿ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ

15-7-2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	12000-12100
ದಪ್ಪ ಗುಜರಾತ್(ಹೊಸ)	12800-12900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1750 (1750)
ಒಂದು ವಾರದ ಡೆಲಿವರಿ	1745 (1745)
ಸೋಯಾ ಕಚ್ಚಾ	885 (880)
ಪಾಮ್ ವಾರದ ಡೆಲಿವರಿ	858 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,000 (59,000)
ಬೆಳ್ಳಿ ಕೆ.ಜಿ 75,250 (75,000)


ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-49000
ಕಾರ್ಕಳ	
ಹೊಸತು	30000-42500
ಹಳತು	40000-49000
ಕುಂದಾಪುರ	
ಹಳೆಚಾಲಿ	43500-47000
ಹೊಸಚಾಲಿ	37000-41500
ಶಿರಸಿ	
ಬೆಟ್ಟೆ	42709-49699
ಬಿಳಿಗೋಟು	29355-35250
ಚಾಲಿ	36899-40961
ಕೆಂಪುಗೋಟು	29796-37121
ರಾಶಿ	46299-52208
ಸೊರಬ	
ಬೆಟ್ಟೆ	33989-37499
ಬಿಳಿಗೋಟು	30691-30989
ಚಾಲಿ	35891-37599
ಗೊರಬಲು	36899-38609
ರಾಶಿ	46509-54299
ಸಿಪ್ಪೆಗೋಟು	20400-20400

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	14200	14100	160.80 ಸೆಂಟ್ಸ್
ಎಸಿ	---	7000	7200	
ಆರ್‌ಪಿ	---	10300	10300	ಲಂಡನ್
ಆರ್‌ಸಿ	---	230	5950	2540 ಡಾಲರ್ಸ್



ಹಕ್ಕಿ ಡಿಕ್ಕಿ ಹೊಡೆದು ವಿಮಾನ ಅಪಘಾತಕ್ಕೆ ಈಡಾಗುವ ಸುದ್ದಿಯನ್ನು ಆಗೀಗ ಓದುತ್ತಿರುತ್ತೇವೆ. ಈ ವಿದ್ಯಮಾನದ ಹಿಂದಿನ ಇತಿಹಾಸ, ವರ್ತಮಾನ ಎರಡರಲ್ಲೂ ಗಮನಿಸಲೇಬೇಕಾದ ಸತ್ಯಗಳಿವೆ.

ಹಕ್ಕಿ ಡಿಕ್ಕಿ... ಅಪಘಾತದ ಕಪ್ಪು ಚುಕ್ಕಿ

ಗುರುರಾಜ್ ಎಸ್. ದಾವಣಗೆರೆ

ಘಟನೆ 1

ಕರ್ನಾಟಕ ವಿಧಾನಸಭೆಗೆ ಈ ವರ್ಷ ಚುನಾವಣೆ ನಡೆದಾಗ ಪ್ರಚಾರ ಸಭೆಗೆ ಬೆಂಗಳೂರಿನ ಎಚ್ಎಎಲ್ ವಿಮಾನ ನಿಲ್ದಾಣದಿಂದ ಮುಳಬಾಗಿಲಿಗೆ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ಗೆ ಹದ್ದೊಂದು ಬಡಿಯಿತು. ಹೆಲಿಕಾಪ್ಟರ್‌ನ ಮುಂಭಾಗದ ಗಾಜು ಒಡೆದು ಹೋಗಿ ಕೆಲಕಾಲ ಆತಂಕ ನಿರ್ಮಾಣವಾಗಿತ್ತು. ಸಮಯಪ್ರಜ್ಞೆ ಮೆರೆದ ಪೈಲೆಟ್ ಹೆಲಿಕಾಪ್ಟರನ್ನು ಸುರಕ್ಷಿತವಾಗಿ ಕೋಲಾರದ ಹೆಲಿಪ್ಯಾಡ್‌ನಲ್ಲಿ ಇಳಿಸಿ ಆತಂಕವನ್ನು ದೂರ ಮಾಡಿದ್ದರು.

ಘಟನೆ 2

ಕಳೆದ ಅಕ್ಟೋಬರ್ 28ರಂದು ಅಹಮದಾಬಾದ್‌ನಿಂದ ದೆಹಲಿಗೆ ಹಾರುತ್ತಿದ್ದ ಆಕಾಸ ಸಂಸ್ಥೆಯ ಬೋಯಿಂಗ್ ವಿಮಾನಕ್ಕೆ 1900 ಅಡಿ ಎತ್ತರದಲ್ಲಿ ಹಕ್ಕಿಯೊಂದು ಡಿಕ್ಕಿ ಹೊಡೆದದ್ದರಿಂದ ವಿಮಾನದ ರಾಡೋಮ್ (ರೇಡಿಯೋ ಅಲೆಗಳನ್ನು ಗ್ರಹಿಸುವ ವಿಮಾನದ ಮೂತಿ) ನುಜ್ಜು ಗುಜ್ಜಾಗಿತ್ತು. ಸುರಕ್ಷತೆಗಾಗಿ ವಿಮಾನವನ್ನು ವಾಪಸ್ ಅಹಮದಾಬಾದ್ ವಿಮಾನ ನಿಲ್ದಾಣಕ್ಕೆ ಮರಳಿ ಕಳಿಸಲಾಗಿತ್ತು.

ಇತ್ತೀಚೆಗೆ ಹಕ್ಕಿಗಳು ವಿಮಾನಗಳಿಗೆ ಡಿಕ್ಕಿ ಹೊಡೆಯುವ ಪ್ರಮಾಣ ಹೆಚ್ಚಾಗುತ್ತಿದೆ. ಇದನ್ನು ತಡೆಯುವ ಪ್ರಾಥಮಿಕ ಪ್ರಯತ್ನವೆಂಬಂತೆ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಯಾವುದೇ ವಿಮಾನ ಹಾರಲು ಸಿದ್ಧವಾದಾಗ ಸಣ್ಣದೊಂದು ವಾಹನ ರನ್‌ವೇಯ ತುಂಬೆಲ್ಲ ಚಲಿಸಿ ಅಲ್ಲಿರುವ ಹಕ್ಕಿಗಳನ್ನು ಓಡಿಸುವ ಕೆಲಸ ಮಾಡುತ್ತದೆ. ಈ ದೃಶ್ಯ ಬಹುತೇಕ ವಿಮಾನ ನಿಲ್ದಾಣಗಳಲ್ಲಿ ಕಂಡುಬಂದರೂ ಇದರ ಮಹತ್ವ ಮತ್ತು ಔಚಿತ್ಯ ಎಷ್ಟೋ ಜನರಿಗೆ ತಿಳಿದಿಲ್ಲ. ಹೊರಗಿನಿಂದ ನೋಡುವವರಿಗೆ ಈ ಚಟುವಟಿಕೆ ನಗು ತರಿಸಿದರೆ, ಕಾಕ್‌ಪಿಟ್‌ನಲ್ಲಿ ಕುಳಿತಿರುವ ಚಾಲಕನಿಗೆ ಆತ್ಮವಿಶ್ವಾಸ ತುಂಬುತ್ತದೆ. ನಿಲ್ದಾಣದಿಂದ ಹಾರುವ ಮತ್ತು ಇಳಿಯುವ ವಿಮಾನಗಳಿಗೆ ಅಡ್ಡಬಂದು ಡಿಕ್ಕಿ ಹೊಡೆಯುವ ಹಕ್ಕಿಗಳು ಅಪಘಾತ ಉಂಟುಮಾಡುವಲ್ಲಿ ತಮ್ಮದೇ ಆದ 'ಇತಿಹಾಸ' ನಿರ್ಮಿಸಿವೆ.

ಆ ದಿನಗಳು

1912ರಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ವಿಮಾನಕ್ಕೆ ರಣಹದ್ದು ಡಿಕ್ಕಿ ಹೊಡೆದಿತ್ತು. ಇದರಿಂದ ವಿಮಾನದ ಪೈಲೆಟ್‌ಗಳಿಬ್ಬರೂ ಸಾವನ್ನಪ್ಪಿದ್ದರಲ್ಲದೆ ಬೆಲೆ ಬಾಳುವ ವಿಮಾನವೂ ನಾಶವಾಗಿತ್ತು. ನಂತರ 1960ರಲ್ಲಿ ಸಂಭವಿಸಿದ ಅಪಘಾತ ಇತಿಹಾಸದಲ್ಲೇ ದೊಡ್ಡದು. ಅಮೆರಿಕದ ಈಸ್ಟರ್ನ್ ಏರ್‌ಲೈನ್ಸ್‌ಗೆ ಸೇರಿದ ಲಾಕ್‌ಹೀಡ್ ವಿಮಾನಕ್ಕೆ ಬೋಸ್ಟನ್ ನಗರದ ಹೊರವಲಯದಲ್ಲಿ ಕೊಕ್ಕರೆಯೊಂದು ಬಡಿದದ್ದರಿಂದ ನೆಲಕ್ಕಪ್ಪಳಿಸಿ ಇಡೀ ವಿಮಾನ ನಾಶವಾಗಿತ್ತು. 62 ಮಂದಿ ಪ್ರಯಾಣಿಕರು ಪ್ರಾಣ ಕಳೆದುಕೊಂಡಿದ್ದರು.

ವೈಮಾನಿಕ ಇತಿಹಾಸದಲ್ಲೇ ಹಿಂದೆಂದೂ ಕಂಡು ಕೇಳರಿಯದ ಘಟನೆ ಇದು. ಅಮೆರಿಕದ ಯುಎಸ್ ಏರ್‌ವೇಸ್‌ನ ಏರ್‌ಬಸ್ ಎ320 ವಿಮಾನದ ಎರಡೂ ಎಂಜಿನ್‌ಗಳು ಕೆನಡಗೂಸ್ (ಬಾತುಕೋಳಿ) ಹಕ್ಕಿಗಳ ಡಿಕ್ಕಿಯಿಂದಾಗಿ ವಿಫಲವಾದವು. ವಿಮಾನವನ್ನು ಹಡ್ಸನ್ ನದಿಯಲ್ಲಿ ಇಳಿಸಲಾಗಿತ್ತು. ಆಗ 155 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದರು. ವಿಮಾನದ ಕ್ಯಾಪ್ಟನ್ ಸಲೆನ್‌ಬರ್ಗರ್ ಮತ್ತು ಕೋ ಪೈಲಟ್‌ರನ್ನು ತೀವ್ರ ವಿಚಾರಣೆಗೊಳಪಡಿಸಲಾಗಿತ್ತು. ಇದೇ ಘಟನೆಯನ್ನಾಧರಿಸಿದ ಟಾಂ ಹ್ಯಾಂಕ್ಸ್ ಅಭಿನಯದ 'ಸಲ್ಲಿ' ಎಂಬ ಹಾಲಿವುಡ್ ಸಿನಿಮಾ ಕೂಡ ಕಳೆದ ವರ್ಷ ನಿರ್ಮಾಣವಾಗಿದೆ.

1962ರಲ್ಲಿ ನಮ್ಮಲ್ಲಿ ಸಂಭವಿಸಿದ ಮೊದಲ ಹಕ್ಕಿ-ಡಿಕ್ಕಿ ಅಪಘಾತದಲ್ಲಿ ಕಾಬೂಲ್‌ನಿಂದ ಅಮೃತ್‌ಸರಕ್ಕೆ ಹಾರುತ್ತಿದ್ದ ಡಕೋಟಾ ವಿಮಾನಕ್ಕೆ ಕೊಕ್ಕರೆಯೊಂದು ಬಡಿದಿತ್ತು. ವಿಮಾನದ ವಿಂಡ್‌ಸ್ಕ್ರೀನ್ ನಾಶವಾಗಿ ಒಬ್ಬ ಪೈಲೆಟ್ ಸ್ಥಳದಲ್ಲೆ ಸಾವನ್ನಪ್ಪಿದ್ದ. 1975ರಲ್ಲಿ ಪಟಿಯಾಲಾ ವಿಮಾನ ನಿಲ್ದಾಣದ ಬಳಿ ತರಬೇತಿ ಹಾರಾಟದಲ್ಲಿ ನಿರತವಾಗಿದ್ದ ಪುಷ್ಪಕ್ ವಿಮಾನಕ್ಕೆ ಹದ್ದು ಡಿಕ್ಕಿ ಹೊಡೆದದ್ದೇ ವಿಮಾನ ನೆಲಕ್ಕೆ ಬಿದ್ದು ಬೆಂಕಿ ಹತ್ತಿಕೊಂಡು ಸಂಪೂರ್ಣವಾಗಿ ನಾಶವಾಗಿ ಪೈಲೆಟ್‌ಗಳಿಬ್ಬರಿಗೂ ಪ್ರಾಣಾಂತಿಕ ಗಾಯಗಳಾಗಿದ್ದವು.

ಮನುಷ್ಯರಿಗೆ ಹಾರಲು ಪ್ರೇರೇಪಿಸಿದ ಹಕ್ಕಿಗಳೇ ಆತನನ್ನು ಸಾವಿನ ಪ್ರಪಾತಕ್ಕೆ ನೂಕುತ್ತಿರುವುದು ವ್ಯಂಗ್ಯ. ಎತ್ತರದಲ್ಲಿ, ಅತ್ಯಂತ ವೇಗವಾಗಿ ಹಾರಾಡುವ ದೊಡ್ಡ ಗಾತ್ರದ ವಿಮಾನಕ್ಕೆ ಸಣ್ಣ ಹಕ್ಕಿಯೊಂದು ಡಿಕ್ಕಿ ಹೊಡೆಯುವುದರಿಂದ ಅಪಘಾತಕ್ಕೀಡಾಗುವುದು ಸಾಧ್ಯವಿಲ್ಲ, ವೇಗದ ವಿಮಾನದ ಮುಂದೆ ಹಿಡಿ ಗಾತ್ರದ ಹಕ್ಕಿ ಯಾವ ಲೆಕ್ಕ? ಅಪಘಾತಕ್ಕೆ ಬೇರೇನಾದರೂ ಕಾರಣವಿರುತ್ತದೆ ಎಂದೇ ಬಹಳಷ್ಟು ಜನ ಭಾವಿಸುತ್ತಾರೆ.

ಡಿಕ್ಕಿಗಿದೋ ಕಾರಣ

ವಿಮಾನಯಾನದ ಪ್ರಾರಂಭದ ದಿನಗಳಲ್ಲಿ ಈ ರೀತಿಯ ಅಪಘಾತಗಳು ಕಡಿಮೆ ಇದ್ದವು. ಆಗ ವಿಮಾನದಲ್ಲಿ ಪಿಸ್ಟನ್ ಎಂಜಿನ್ ಬಳಸುತ್ತಿದ್ದುದರಿಂದ ಅದರ ಅತಿಯಾದ ಶಬ್ದದಿಂದಾಗಿ ಹಕ್ಕಿಗಳು ವಿಮಾನದ ಬಳಿ ಅಷ್ಟಾಗಿ ಸುಳಿಯುತ್ತಿರಲಿಲ್ಲ. ಅದಲ್ಲದೆ ವಿಮಾನದ ರೆಕ್ಕೆಗಳ ಮುಂಭಾಗದಲ್ಲಿರುತ್ತಿದ್ದ ಪ್ರೊಪೆಲ್ಲರ್‌ನ ಫ್ಯಾನ್ ಬ್ಲೇಡುಗಳು ವಿಮಾನಕ್ಕೆ ಅಡ್ಡಬರುತ್ತಿದ್ದ ಹಕ್ಕಿಗಳನ್ನು ಕತ್ತರಿಸಿ ಹಾಕುತ್ತಿದ್ದವು. ಆದರೆ ಈಗಿನ ವಿಮಾನಗಳಲ್ಲಿ ಜೆಟ್ ಎಂಜಿನ್ ಬಳಸುತ್ತಿರುವುದರಿಂದ ಶಬ್ದ ಕಡಿಮೆ. ಹಾರುವ ಹಕ್ಕಿಗಳು ವಿಮಾನವನ್ನು ದೊಡ್ಡ ಪಕ್ಷಿಯೆಂಬಂತೆ ಭ್ರಮಿಸಿ ಡಿಕ್ಕಿ ಹೊಡೆದು ಎಂಜಿನ್‌ನಲ್ಲಿ ಸಿಲುಕಿಕೊಂಡು ಅಪಘಾತ ಉಂಟು ಮಾಡುತ್ತವೆ.

ಸಮುದ್ರತೀರ ಮತ್ತು ಅತ್ಯಂತ ಜನಬಾಹುಳ್ಯವಿರುವ ಸ್ಥಳಗಳ ಪಕ್ಕದ ನಿಲ್ದಾಣದ ಬಳಿ ಹಕ್ಕಿಗಳ ಹಿಂಡೇ ಇರುವುದರಿಂದ ಅಪಘಾತದ ಸಾಧ್ಯತೆಗಳು ಹೆಚ್ಚು. ಪ್ರತಿ ನಿಲ್ದಾಣಕ್ಕಂಟಿಕೊಂಡಂತೆ ವಿಮಾನಯಾತ್ರಿಗಳಿಗೆ ಆಹಾರ ಸರಬರಾಜು ಮಾಡುವ ಘಟಕವಿರುತ್ತದೆ. ತಯಾರಿಕೆ ಮತ್ತು ಬಳಕೆಯ ನಂತರ ಹೊರಗೆ ಹಾಕುವ ಪದಾರ್ಥಗಳಿಗಾಗಿ ಕಾಗೆ, ಪಾರಿವಾಳ, ಹದ್ದು, ಕೊಕ್ಕರೆ, ರಣ ಹದ್ದು, ಮಿಂಚುಳ್ಳಿ, ಬಾತುಕೋಳಿ ಮತ್ತು ನವಿಲುಗಳು ನೇರವಾಗಿ ವಿಮಾನ ನಿಲ್ದಾಣಕ್ಕೆ ಬಂದು ಏರಿಳಿಯುವ ವಿಮಾನಗಳನ್ನು ಗಮನಿಸುವ ವ್ಯವಧಾನ ತೋರದೆ ಡಿಕ್ಕಿ ಹೊಡೆಯುತ್ತವೆ. ವಿಮಾನಗಳು ರನ್‌ವೇಯಿಂದ ಹಾರುವಾಗ ಮತ್ತು ಇಳಿಯುವಾಗ ಹಗಲಿನಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತವೆ.

ಹಕ್ಕಿಗಳು ವಿಮಾನ ನಿಲ್ದಾಣದ ಬಳಿ ಬರುವುದು ವಿಮಾನ ನಿಲ್ದಾಣದ ಟರ್ಫ್ ಗ್ರಾಸ್ (ಹುಲ್ಲಿನ ಹಾಸು) ಆಶ್ರಯಿಸಿ ಬದುಕುವ ಕೀಟ, ಮೊಲ, ಇಲಿ ಮತ್ತು ಹಾವುಗಳಿಗಾಗಿ. ವಿಮಾನಗಳು ರನ್‌ವೇಯಿಂದ ಜಾರಿದಾಗ ಹೆಚ್ಚು ಜಾರದಂತೆ ತಡೆಯಲು, ವಿಮಾನ ತೊಳೆದ ನೀರನ್ನು ಇಂಗಿಸಲು ಮತ್ತು ತುರ್ತು ರಕ್ಷಣೆಯ ಸಂದರ್ಭಗಳಲ್ಲಿ ಬಳಸುವ ವಾಹನಗಳನ್ನು ನಿಲ್ಲಿಸಲು, ಓಡಿಸಲು ಈ ಹುಲ್ಲಿನ ಹಾಸು ನೆರವಿಗೆ ಬರುತ್ತದೆ. ನೋಡಲು ಕಣ್ಣಿಗೆ ಹಿತವೂ ಇರುತ್ತದೆ. ಆದರೆ ಕೆನಡಾಗೂಸ್‌ಗಳಿಗೆ ಈ ಹುಲ್ಲೇ ನೆಚ್ಚಿನ ಆಹಾರ. ಟರ್ಫ್ ಗ್ರಾಸ್ ಬದಲಿಗೆ ಅಗಸ್ಟಿನ್ ಗ್ರಾಸ್ ಬೆಳೆಸಿದರೆ ಅದನ್ನು ಬಾತುಗಳು ಇಷ್ಟಪಡುವುದಿಲ್ಲ. 12ನೇ ಪುಟಕ್ಕೆ...

ಹಕ್ಕಿ ಡಿಕ್ಕಿಯ ನಮೂನೆಗಳು

- ಕೆಲ ಅಂಕಿ ಅಂಶಗಳ ಪ್ರಕಾರ ಶೇ 8ರಷ್ಟು ಹಕ್ಕಿ ಡಿಕ್ಕಿ ವಿಮಾನಾಪಘಾತಗಳು 3000 ಅಡಿಗಿಂತ ಕಡಿಮೆ ಎತ್ತರದಲ್ಲಿ ಸಂಭವಿಸಿದರೆ, ಶೇ 61ರಷ್ಟು ಅಪಘಾತಗಳು ಕೇವಲ ನೂರು ಅಡಿ ಎತ್ತರದಲ್ಲಿ ಸಂಭವಿಸುತ್ತವೆ. ಅಪರೂಪಕ್ಕೆಂಬಂತೆ 30000 ಅಡಿಗಳಷ್ಟು ಎತ್ತರ ಹಾರುವ ವಲಸೆ ಕಡಲ ಕಾಗೆಗಳು ಅಷ್ಟೇ ಎತ್ತರದಲ್ಲಿ ಹಾರುವ ವಿಮಾನಗಳಿಗೆ ಡಿಕ್ಕಿ ಹೊಡೆದದ್ದೂ ಇದೆ.
- ಅತಿ ಹೆಚ್ಚಿನ ಅಪಘಾತಗಳು ಹಕ್ಕಿಗಳ ವಲಸೆ ಸಮಯದಲ್ಲಿ ಸಂಭವಿಸುತ್ತವೆ.
- ಅಮೆರಿಕವೊಂದರಲ್ಲೇ ವರ್ಷಕ್ಕೆ 13000ರಷ್ಟು ಹಕ್ಕಿ ಡಿಕ್ಕಿಗಳು ಸಂಭವಿಸುತ್ತವೆ. ಕೇವಲ ಶೇ 1ರಷ್ಟು ಮಾನವ ಪ್ರಾಣ ಹಾನಿಯಾಗುತ್ತದೆ. ಆದರೆ ಡಿಕ್ಕಿ ಹೊಡೆದ ಎಲ್ಲ ಹಕ್ಕಿಗಳೂ ಸಾವನ್ನಪ್ಪುತ್ತವೆ. ಬಹುತೇಕ ಹಕ್ಕಿಗಳು ವಿಮಾನದ ವಿಂಡ್‌ಶೀಲ್ಡ್ ಇಲ್ಲವೆ ಎಂಜಿನ್‌ಗೆ ಡಿಕ್ಕಿ ಹೊಡೆಯುತ್ತವೆ. ಆದರೆ ಶೇ 80ರಷ್ಟು ಪ್ರಕರಣಗಳು ದಾಖಲಾಗುವುದೇ ಇಲ್ಲ.
- ಇದರಿಂದಲೇ ವಾರ್ಷಿಕ 120 ಕೋಟಿ ಡಾಲರ್ ನಷ್ಟ ಸಂಭವಿಸುತ್ತದೆ.


ಕೂತಗಾನಹಳ್ಳಿಯ ಕೆ.ನಾಗರಾಜ

ತಮಟೆಯ ಸದ್ದು ಬೆಳಕಿನ ಸುದ್ದಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯ

ಜೀತದ ಸರಪಳಿಗಳನ್ನು ಕಳಚುವ ಉತ್ಕಟತೆ ಒಂದೆಡೆ. ತಮಟೆ ಸದ್ದಿನ ಮುಚ್ಚಟೆ ಇನ್ನೊಂದೆಡೆ. ಎರಡನ್ನೂ ಉಳಿಸಿಕೊಂಡ ಆನೇಕಲ್‌ನ ನಾಗರಾಜ್ ಅದೆಷ್ಟೋ ಹೆಣ್ಣುಮಕ್ಕಳ ಬದುಕನ್ನೂ ತಮಟೆಯ ದನಿಯಿಂದಲೇ ಮೇಲೆತ್ತಿದ ಅಪರೂಪದವರು.

ಗುರು ಪಿ.ಎಸ್.

'ಯುವತಿಯರು ತಮಟೆಯಂಥ ವಾದ್ಯಗಳನ್ನೆಲ್ಲ ಮುಟ್ಟಿದರೆ ಮಳೆ ಬರಲ್ಲ, ಬೆಳೆ ಇರಲ್ಲ. ಅವರು ಚರ್ಮವಾದ್ಯಗಳನ್ನೆಲ್ಲ ಬಾರಿಸಿದರೆ ಅವರ ಕುಟುಂಬಕ್ಕೂ ಕೇಡು, ನಾಡಿಗೂ ಕೇಡು ಎನ್ನುವ ಕಟ್ಟುಪಾಡುಗಳೆಲ್ಲ ಇದ್ದವು ಸರ್. ಇವೆಲ್ಲ, ಮಹಿಳೆಯರು ಮನೆಯಿಂದ ಹೊರಬಾರದಂತೆ ತಡೆಯುವ ಪ್ರಯತ್ನಗಳಾಗಿದ್ದವಷ್ಟೇ ...'

ಹೀಗೆ, ಮಾತನಾಡುತ್ತಲೇ ಇದ್ದರು ಕೆ. ನಾಗರಾಜ. ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಕೂತಗಾನಹಳ್ಳಿಯ ನಾಗರಾಜ ಪ್ರಸ್ತುತ ರಾಜ್ಯ ಜನಪದ ಕಲಾವಿದರ ಒಕ್ಕೂಟದ ಅಧ್ಯಕ್ಷ. ಬೆಂಗಳೂರಿನ ಚೋಳನಾಯಕನಹಳ್ಳಿಯಲ್ಲಿ ತಮ್ಮ ತಮಟೆ ತಂಡದೊಂದಿಗೆ ಮಾತಿಗೆ ಸಿಕ್ಕ ಅವರು, ತಮ್ಮ ಕಲಾಪಯಣದ ಬಗ್ಗೆ ಹೇಳುತ್ತಾ ಸಾಗಿದರು.

ಜೀತದಾಳು ಕುಟುಂಬದಲ್ಲಿ ಜನಿಸಿದ ನಾಗರಾಜ, ತಂದೆಯೊಂದಿಗೆ ಚಿಕ್ಕಂದಿನಲ್ಲಿ ಜೀತ ಮಾಡಿದವರು. 'ಜೀತದ ಬದುಕು ನಮ್ಮ ಕಾಲಕ್ಕೇ ಮುಗೀಲಿ. ನನ್ನ ಮಗ ಓದಲಿ' ಎಂದು ತಾಯಿ ಹಿಡಿದ ಹಠದ ಪರಿಣಾಮ, ಶಾಲೆ ಮೆಟ್ಟಿಲು ಹತ್ತಿದ ನಾಗರಾಜ, ದುಡಿಯುತ್ತಲೇ ಓದಿದರು. ಮುತ್ತುಗದ ಎಲೆ ಹೊಲಿಯುವ ಕೆಲಸ ಮಾಡಿದರು. ದ್ರಾಕ್ಷಿ ತೋಟದಲ್ಲಿ ಹಂಬು ಕಟ್ಟಿದರು. ನಂತರ, ಬಿ.ಎ ಮಾಡಿದರು, ಎಂ.ಎ ಕೂಡ ಪಾಸು ಮಾಡಿಕೊಂಡರು. ಆದರೆ, ಸ್ನಾತಕೋತ್ತರ ಪದವಿವರೆಗಿನ ಈ ಹಾದಿ ಮಾತ್ರ ಎಲ್ಲರಂತಿರಲಿಲ್ಲ.

'ತಮಟೆ ತಯಾರಿಸುವುದು, ಬಾರಿಸುವುದೇ ನಮ್ಮ ಕುಲಕಸುಬು. ನಮ್ಮ ದೊಡ್ಡಪ್ಪನವರು ಹಸು ಚರ್ಮ ತಂದು ತಮಟೆ ಮಾಡುತ್ತಿದ್ದರು. ಚರ್ಮವನ್ನು ಒಣ ಹಾಕೋದು, ಗ್ಲಾಸ್‌ಪೀಸ್‌ನಿಂದ ಅದನ್ನು ಉಜ್ಜಿ ಸ್ವಚ್ಛಗೊಳಿಸಿ ಹದ ಮಾಡೋದು, ಚರ್ಮವನ್ನೇ ದಾರದಂತೆ ಎಳೆದು ಕಟ್ಟುವ ಕೆಲಸವನ್ನು ನಾನೇ ಮಾಡುತ್ತಿದ್ದೆ. ಆದರೆ, ಅದೇಕೋ ತಮಟೆ ಬಾರಿಸೋದು ನನಗೆ ಇಷ್ಟವೇ ಆಗುತ್ತಿರಲಿಲ್ಲ. ತಮಟೆ ಬಾರಿಸಿದರೆ ನಾವು ದಲಿತರು ಎಂದು ಎಲ್ಲರಿಗೂ ಗೊತ್ತಾಗುತ್ತೆ, ನಮ್ಮನ್ನು ಕೀಳಾಗಿ ನೋಡ್ತಾರೆ. ಅದು ಕೀಳು ವೃತ್ತಿ ಎಂದುಕೊಂಡು ಅದರಿಂದ ದೂರವೇ ಉಳಿದಿದ್ದೆ' ಎಂದು ನೆನಪಿಸಿಕೊಳ್ಳುವ ನಾಗರಾಜ, ಈಗ ತಮಟೆಯೇ ತಮಗೆ ಸರ್ವಸ್ವವಾಗಿರುವ ಅಚ್ಚರಿಯನ್ನೂ ಹೇಳಿಕೊಳ್ಳುತ್ತಾರೆ.

'ಅದು 1994ರ ಸಮಯ. ನಮ್ಮ ಮನೆಯ ಪಕ್ಕದಲ್ಲಿಯೇ ಇದ್ದ ಜೀತದಾಳು ಒಬ್ಬನನ್ನು ಮಾಲೀಕರು ಸಾಯಿಸಿ, ಅವರೇ ಹೋಗಿ ಹೂತು ಹಾಕಿ ಬಂದಿದ್ದರು. ಆಗ, ಜೀತದಾಳುಗಳ ಬಗ್ಗೆ ಕೆಲಸ ಮಾಡುವ 'ಜೀವಿಕಾ' ಎನ್ನುವ ಸಂಘಟನೆಯವರು ನಮ್ಮ ಊರಿಗೆ ಬಂದಿದ್ದರು. ಅವರಿಗೆ ನಡೆದಿದ್ದೆಲ್ಲ ವಿವರಿಸಿದೆ. ನನ್ನ ಕಳಕಳಿ ಮತ್ತು ಆಸಕ್ತಿ ಗಮನಿಸಿದ ಅವರು, ಅವರ ತಂಡಕ್ಕೆ ನನ್ನನ್ನು ಸೇರಿಸಿಕೊಂಡರು. ಜೀತದಾಳುಗಳ ಬಗ್ಗೆ, ಬಾಲಕಾರ್ಮಿಕರ ಬಗ್ಗೆ ಬೀದಿ ನಾಟಕ ಮಾಡಿಸುತ್ತಿದ್ದ ಸಂಸ್ಥೆ ಅದು. ಮುಂದೆ, ನಿರ್ದೇಶಕ ಬಸವಲಿಂಗಯ್ಯ ನಿರ್ದೇಶನದ 'ಹಟ್ಟಿ ರಂಗ' ನಾಟಕದಲ್ಲಿ ಜೀತದಾಳು ಪಾತ್ರವನ್ನೇ ಮಾಡಿದೆ' ಎಂದು ಕಲಾಪ್ರಪಂಚಕ್ಕೆ ತಮ್ಮ ಪ್ರವೇಶವಾದ ಕ್ಷಣವನ್ನು ನೆನಪಿಸಿಕೊಂಡರು.

'ಈ ನಡುವೆ, ಆನೇಕಲ್ ತಾಲ್ಲೂಕಿನ ಕೋಟಗಾನಹಳ್ಳಿಯಲ್ಲಿ ವೆಂಕಟೇಶ್ ಎಂಬ ಜೀತದಾಳುವಿನ ಹೆಬ್ಬೆರಳನ್ನೇ ಮಾಲೀಕರು ಕತ್ತರಿಸಿದ್ದರು. ನಿಧಾನವಾಗಿ ಕೆಲಸ ಮಾಡುತ್ತಾನೆ ಎಂಬ ಕ್ಷುಲ್ಲಕ ಕಾರಣಕ್ಕೆ ಈ ಕೃತ್ಯ ಎಸಗಿದ್ದರು. ಈ ಘಟನೆಯ ಬಗ್ಗೆಯೇ ಒಂದು ಸ್ಕಿಟ್ ಬರೆದು, ವೆಂಕಟೇಶನ ಪಾತ್ರವನ್ನು ನಾನೇ ಮಾಡಿದೆ. ಈ ನಾಟಕ ರಾಜ್ಯದಾದ್ಯಂತ 200ಕ್ಕೂ ಹೆಚ್ಚು ಪ್ರದರ್ಶನ ಕಂಡಿತು. ಹೀಗೆ, ಬಾಲಕಾರ್ಮಿಕರು, ಜೀತದಾಳುಗಳು ಮತ್ತು ಮಹಿಳೆಯರ ಸಮಸ್ಯೆ ಕುರಿತು ಬೀದಿನಾಟಕ ಮಾಡುತ್ತಿದ್ದಾಗಲೆಲ್ಲ, ತಮಟೆ ಬಾರಿಸುವ ತಂಡದವರೂ ಪ್ರದರ್ಶನ ನೀಡುತ್ತಿದ್ದರು. ಈ ನಡುವೆ, ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸಬೇಕು ಎಂದು ಆಗ್ರಹಿಸಿ, ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಯಿತು. ಕಲಾ ತಂಡಗಳಲ್ಲಿ ಮಾತ್ರವಲ್ಲದೆ, ಪ್ರತಿಭಟನೆಗಳಲ್ಲಿಯೂ ತಮಟೆ ಹೋರಾಟದ ಅಸ್ತ್ರವಾಗಿದ್ದನ್ನು ಕಂಡು ಅದರತ್ತ ಆಕರ್ಷಣೆ ಹೆಚ್ಚಾಯಿತು. ನಮ್ಮ ಕಸುಬನ್ನು ನಾನೇ ಮುಂದುವರಿಸಬೇಕು ಎಂದುಕೊಂಡು ತಮಟೆ ತಂಡ ಕಟ್ಟಲು ನಿರ್ಧರಿಸಿದೆ' ಎನ್ನುತ್ತಾರೆ ನಾಗರಾಜ.


ಕಲಾವಿದೆಯಿಂದ ತಮಟೆ ನೃತ್ಯ ಪ್ರದರ್ಶನ

ತಮಟೆ ಬಾರಿಸುವುದನ್ನು ಕಲಿಸುವುದು ಮಾತ್ರವಲ್ಲ, ತಮಟೆಯಿಂದಲೇ ನೂರಾರು ಜನರ ಜೀವನಕ್ಕೆ ದಾರಿ ಮಾಡಿಕೊಟ್ಟಿದ್ದಾರೆ ನಾಗರಾಜ. ಅವರ ಈ ಪಯಣದಲ್ಲಿ ಜೊತೆಯಾಗಿ ಕೆಲಸ ಮಾಡಿದವರು ಶಿವಮ್ಮ ವೆಂಕಟೇಶ್.


'ಕಾಲೇಜುಗಳಿಗೆ ಹೋಗಿ ತಮಟೆಯ ಕಲೆ ಬಗ್ಗೆ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದೆವು. ಆಸಕ್ತರಿಗೆ ಉಚಿತವಾಗಿ ತಮಟೆ ತರಬೇತಿ ನೀಡುತ್ತಿದ್ದೆವು. ಶಾಲೆ ಬಿಟ್ಟವರನ್ನು ಗುರುತಿಸಿ ಅವರಿಗೆ ತರಬೇತಿ ಕೊಟ್ಟೆವು. ಅನೇಕರಿಗೆ ಹಾಸ್ಟೆಲ್‌ನಲ್ಲಿ ಉಳಿಯುವ ವ್ಯವಸ್ಥೆ ಮಾಡಿದೆವು. ಮುಖ್ಯವಾಗಿ, ಯುವತಿಯರಿಗೆ ತರಬೇತಿ ಕೊಟ್ಟೆವು. ಸುಮಾರು 20 ವರ್ಷಗಳಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇವೆ' ಎನ್ನುತ್ತಾರೆ ಶಿವಮ್ಮ.

ನಾಗರಾಜ ಮತ್ತು ಶಿವಮ್ಮ ಅವರು ಈವರೆಗೆ 600ಕ್ಕೂ ಹೆಚ್ಚು ಜನರಿಗೆ ತಮಟೆ, ಡೊಳ್ಳು ಕುಣಿತ, ವೀರಗಾಸೆ, ಕಂಸಾಳೆ ನೃತ್ಯದ ತರಬೇತಿ ಕೊಟ್ಟಿದ್ದಾರೆ. ಅವರಲ್ಲಿ, 200ಕ್ಕೂ ಹೆಚ್ಚು ಯುವತಿ-ಯುವಕರು ಇದರಲ್ಲಿಯೇ ಜೀವನ ಕಂಡುಕೊಂಡಿದ್ದಾರೆ. ನಾಗರಾಜ ಅವರ ಅಕ್ಕನ ಮಗಳು ಸವಿತಾ, ಇದೇ ಕಲೆಯಲ್ಲಿ ಮುಂದುವರಿದಿದ್ದಾರೆ. ಶಿವಮ್ಮ ಅವರ ಇಡೀ ಕುಟುಂಬ ಇದೇ ಕಲೆಯನ್ನು ನಂಬಿದೆ. ಅವರ ಮೂವರು ಮಕ್ಕಳೂ ತಮಟೆ ಕಲಿತಿದ್ದರೆ, ದೊಡ್ಡ ಮಗಳು ರಶ್ಮಿ ಎಂಬುವವರಿಗೆ 6ನೇ ತರಗತಿಯಿಂದಲೇ ತಮಟೆ ಕಲಿಸಿದ್ದಾರೆ. ರಶ್ಮಿ ಈಗ ಜರ್ಮನಿಯಲ್ಲಿ ಎಂ.ಎಸ್. ಮಾಡುತ್ತಿದ್ದು, ಆ ದೇಶದಲ್ಲಿಯೂ ತಮಟೆಯ ಸದ್ದು ಮೊಳಗಿಸಬೇಕು ಎಂಬ ಪ್ರಯತ್ನದಲ್ಲಿದ್ದಾರೆ.

ಈಗ, ನಾಗರಾಜ ಅವರ ತಂಡದಲ್ಲಿರುವ ಯುವತಿಯರಲ್ಲಿಯೂ ಇಂಥದ್ದೇ ಉತ್ಸಾಹ ಕಾಣಿಸುತ್ತದೆ.

11ನೇ ಪುಟಕ್ಕೆ...

ಎದೆಯ ಕದವ ತೆರೆವ ಕೆಲಸದವಳ ಒಳತೋಟಿ



‘ಸಕುಬಾಯಿ’ ನಾಟಕದಲ್ಲಿ ನುಡಿ ಸುದರ್ಶನ್ ಚಿತ್ರ: ತಾಯಿ ಲೋಕೇಶ್

ನಾದಿರಾ ಬಬ್ಬರ್ ಅವರ ಹಿಂದಿ ನಾಟಕವನ್ನು ಡಿ.ಎಸ್. ಚೌಗಲೆ ‘ಸಕುಬಾಯಿ’ ಆಗಿ ಕನ್ನಡಕ್ಕೆ ತಂದಿದ್ದಾರೆ. ಹುಲುಗಪ್ಪ ಕಟ್ಟಿಮನಿ ನಿರ್ದೇಶನದ ಈ ಏಕವ್ಯಕ್ತಿ ರಂಗಪ್ರಯೋಗವು ನಗರ ಬದುಕಿನೊಳಗೆ ಆವರಿಸಿರುವ ಶೂನ್ಯವನ್ನು, ಟೊಳ್ಳುತನವನ್ನು ಮತ್ತು ಜನರ ಸಣ್ಣತನಗಳನ್ನು ಸಕುಬಾಯಿಯ ಕಥನದೊಂದಿಗೆ ಹೇಳುತ್ತಾ ಹೋಗುತ್ತದೆ.

ಮಂಗಳ ಟಿ.ಎಸ್. ತುಮರಿ

ರಂಗಭೂಮಿಯ ಇತಿಹಾಸವನ್ನು ಬಗೆಯುತ್ತ ಹೋದರೆ ವೈವಿಧ್ಯಮಯವಾದ ಪ್ರಯೋಗಗಳು ಕಾಲಾತೀತವಾಗಿ ನಡೆಯುತ್ತಲೇ ಬಂದಿವೆ. ಅಂತಹ ಭಿನ್ನ ವಿಭಿನ್ನ ಪ್ರಯೋಗಗಳಲ್ಲಿ ಏಕವ್ಯಕ್ತಿ ರಂಗಪ್ರಸ್ತುತಿ ಕೂಡ ಒಂದು. ಆದರೆ ಇಂತಹ ರಂಗಪ್ರಸ್ತುತಿಗಳಿಗೆ ಕೆಲವು ಮಿತಿಗಳೂ ಇವೆ. ಒಬ್ಬನೇ(ಳೇ) ನಟ ಅಥವಾ ನಟಿ ಇಡೀ ನಾಟಕವನ್ನು ಆವರಿಸಿಕೊಳ್ಳುವರು. ಅಲ್ಲಿ ರಂಗದಲ್ಲಿ ಸರ್ವಾಂಗದಲ್ಲಿ ಮುಂಚೂಣಿಯಲ್ಲಿದ್ದು ಪ್ರೇಕ್ಷಕರಲ್ಲಿ ತೀವ್ರ ಆಸಕ್ತಿ ಮೂಡಿಸಿದಾಗ ಮಾತ್ರ ಅವುಗಳಿಗೆ ಯಶಸ್ಸು ದೊರೆಯುತ್ತದೆ. ಆದ್ದರಿಂದ ಮನೋಜ್ಞವಾದ ಅಭಿನಯ, ಕಥೆಯ ಹೆಣಿಗೆಯಲ್ಲಿ ಅಚ್ಚುಕಟ್ಟುತನ, ಸಂಭಾಷಣೆಯಲ್ಲಿ ಸ್ಪಷ್ಟತೆ, ಹೊಮ್ಮುವ ಸಂಗೀತ, ಬೆಳಕು, ವಸ್ತು ವಿನ್ಯಾಸ ಸಂಯೋಜನೆ ಒಂದಕ್ಕೊಂದು ಪೂರಕವಾಗಿದ್ದಾಗ ಮಾತ್ರ ಏಕವ್ಯಕ್ತಿ ಪ್ರದರ್ಶನಗಳು ಯಶಸ್ವಿಯಾಗುತ್ತವೆ. ಇಲ್ಲದಿದ್ದಲ್ಲಿ ಕೇವಲ ಪ್ರಯೋಗವಾಗಿಯೇ ಉಳಿದುಬಿಡಬಹುದು. ಅಂತಹ ಒಂದು ವಿಶಿಷ್ಟ ರಂಗಪ್ರಯೋಗ ನಾದಿರಾ ಬಬ್ಬರ್ ಅವರು ಹಿಂದಿಯಲ್ಲಿ ರಚಿಸಿದ ‘ಸಕುಬಾಯಿ ಕಾಮ್‌ಮವಾಲಿ’ ನಾಟಕ. ಅದನ್ನು ಡಾ.ಡಿ.ಎಸ್. ಚೌಗಲೆ ಅವರು ಅಷ್ಟೇ ಸಶಕ್ತವಾಗಿ ಕನ್ನಡಕ್ಕೆ ತಂದು ‘ಸಕುಬಾಯಿ’ ಆಗಿಸಿದ್ದಾರೆ.

ನುಡಿ ಸುದರ್ಶನ್ ಸಕುಬಾಯಿಯಾಗಿ ಅಭಿನಯಿಸಿದ ನಾಟಕದ ರಂಗವಿನ್ಯಾಸ ಹಾಗೂ ನಿರ್ದೇಶನ ಹುಲುಗಪ್ಪ ಕಟ್ಟಿಮನಿಯವರದ್ದು. ಈ ಏಕವ್ಯಕ್ತಿ ಪ್ರಸ್ತುತಿ ನಾಟಕದ ಅಭಿವ್ಯಕ್ತಿ ಗಟ್ಟಿಯಾಗಿದೆ. ಮುಂಬೈನ ಒಟ್ಟು ಘಮಲನ್ನು ರಂಗದ ಮೇಲೆ ತರುವ ಪ್ರಾಮಾಣಿಕ ಪ್ರಯತ್ನವಿದೆ. ಮರಾಠಿ, ಹಿಂದಿ ಭಾಷೆಗಳು ಇಣುಕುವ, ಮುಂಬಯಿ ಸೊಗಡು ಜ್ಞಾಪಿಸುವ ಚೌಗಲೆಯವರ ಉತ್ತರ ಕರ್ನಾಟಕದ ಭಾಷೆ ನಾಟಕದ ಹೈಲೈಟ್! ಆ ನೆಲದ ಭಾಷೆ ಸಕುಬಾಯಿಯ ಪಾತ್ರಕ್ಕೆ ಹೊಂದುವಂತೆ ಇರುವುದರಿಂದ ಪಾತ್ರವನ್ನು ಕಟ್ಟುವಲ್ಲಿ, ಪೋಷಿಸುವಲ್ಲಿ ನಿರ್ದೇಶಕರು ಗೆಲುವು ಸಾಧಿಸಿದ್ದಾರೆ. ಅಲ್ಲದೆ ಅಷ್ಟೇ ಪರಿಣಾಮಕಾರಿಯಾದ ನಟನೆಯಿಂದ ನುಡಿಗಳಲ್ಲಿಯ ಒಳದನಿಯನ್ನು ಪ್ರೇಕ್ಷಕರಿಗೆ ತಲುಪಿಸುವಲ್ಲಿ ನುಡಿ ಸುದರ್ಶನ್ ಅವರ ನಟನೆ ಕೂಡ ಒದಗಿ ಬಂದಿದೆ.

ಮಹಾರಾಷ್ಟ್ರದ ಹಳ್ಳಿಯ ಹೆಣ್ಣುಮಗಳೊಬ್ಬಳು ಕೆಲಸಕ್ಕಾಗಿ ಮುಂಬಯಿ ಸೇರುತ್ತಾಳೆ. ತನ್ನ ತಾಯಿಯೊಂದಿಗೆ ಬದುಕು ಕಟ್ಟಿಕೊಳ್ಳಲು ಹೆಣಗುತ್ತಾಳೆ. ಕನಸಿನ ಶಹರು ಮುಂಬಯಿ ಸೇರಿದ ಸಕುಬಾಯಿಯ ಬಾಲ್ಯದಲ್ಲಿ ಕಂಡ ಕನಸುಗಳು ಕಮರುತ್ತವೆ. ಆದರೆ ಬದುಕು ಒಡ್ಡಿದ ಸವಾಲುಗಳನ್ನು, ಸಂಕಷ್ಟಗಳನ್ನು ಎದುರಿಸುತ್ತ, ಆಶಾವಾದಿತನದಿಂದ ಬದುಕನ್ನು ಕಟ್ಟಿಕೊಳ್ಳಲು ಸಂಘರ್ಷ ಮಾಡುತ್ತಾಳೆ. ಇದನ್ನೇ ಮೂಲ ವಸ್ತುವಾಗಿಟ್ಟುಕೊಂಡ ನಾಟಕ ಎಲ್ಲಿಯೂ ಪ್ರೇಕ್ಷಕರ ನಿರೀಕ್ಷೆಯನ್ನು ಹುಸಿಗೊಳಿಸುವುದಿಲ್ಲ. ಕವಿಯಾಗಲು ಹಂಬಲಿಸುವ ತನ್ನ ಮಗಳು ಸಾಯಿಲಿಯ ಕನಸಿಗೆ ಕಸುವು ತುಂಬುತ್ತಾಳೆ. ಕಾಯಕಯೋಗಿಯೂ ದಿಟ್ಟೆಯೂ ಎನ್ನಿಸುತ್ತಾಳೆ.

ರಂಗದಲ್ಲಿ ಕದ ತೆಗೆಯುವ ಮೂಲಕ ಆರಂಭವಾಗುವ ನಾಟಕವು ಮನೆ ಕೆಲಸದಾಕೆಯೊಬ್ಬಳ ಮನದ ಒಳತೋಟಿಗಳನ್ನು ಬಿಚ್ಚಿಡುತ್ತಲೇ ಸಾಗುತ್ತದೆ. ನಮ್ಮ ಎದೆಯ ಕದವನ್ನೂ ತಟ್ಟುತ್ತದೆ. ನಮ್ಮ ಸುತ್ತಮುತ್ತ ಬದುಕುವ ಹೆಣ್ಣುಮಗಳೊಬ್ಬಳ ಹೃದಯ ಭಿತ್ತಿಯೊಳಗಿನ ಸ್ವಗತದಂತೆಯೂ ಭಾಸವಾಗುತ್ತದೆ. ನಾಟಕಕ್ಕೆ ಈ ಬಗೆಯ ಒಂದು ಗತಿ ದಕ್ಕಿರುವುದರಿಂದಲೇ ಪ್ರೇಕ್ಷಕರ ಮನದೊಳಗೆ ಸಕುಬಾಯಿ ಒಂದು ಅನುಭವವಾಗಿ ಕಾಡುತ್ತಾಳೆ.

ಕೇವಲ ನಾಟಕ ಆಕೆಯ ಜೀವನದ ಸುತ್ತ ಗಿರಕಿ ಹೊಡೆದಿದ್ದರೆ ಬಹುಶಃ ಇದೊಂದು ರಂಗಪ್ರಸ್ತುತಿಯಾಗಿ ಗೆಲ್ಲುತ್ತಿರಲಿಲ್ಲವೇನೋ. ನಗರ ಬದುಕಿನೊಳಗೆ ಆವರಿಸಿರುವ ಶೂನ್ಯವನ್ನು, ಟೊಳ್ಳುತನವನ್ನು ಮತ್ತು ಜನರ ಸಣ್ಣತನಗಳನ್ನು ಸಕುಬಾಯಿಯ ಕಥನದೊಂದಿಗೆ ಅಂದಗೆಡದಂತೆ ಎರಕಗೊಳಿಸಲಾಗಿದೆ. ಈ ಹೆಣಿಗೆಯನ್ನು ನೋಡುವುದಕ್ಕಾದರೂ ಸಕೂಬಾಯಿಯನ್ನು ಒಮ್ಮೆ ನೋಡಬೇಕು. ಹೀಗೆ ನಾಟಕದ ಪ್ರಮುಖ ಅಂಶಗಳನ್ನು ಹದವಾಗಿ ಬೆರೆಸದಿದ್ದರೆ, ಬೇಕೆಂತಲೇ ಒಂದಿಷ್ಟು ವಿಚಾರಗಳನ್ನು ತುರುಕಿಸಿದಂತೆಯೂ ಆಗಿ, ಅನಗತ್ಯ ವಿವರಗಳಿಂದ ಪ್ರಧಾನ ಆಶಯ ಕಾಣದಾಗುತ್ತಿತ್ತು. ಆದರೆ, ಸಕುಬಾಯಿ ನಾಟಕದಲ್ಲಿ ಮುಖ್ಯ ವಸ್ತುವಿನೊಡನೆ ಇತರ ವಿವರಗಳನ್ನು ಜಾಣ್ಮೆಯಿಂದ ಹದವಾಗಿ ಬೆರೆಸಿದ್ದಾರೆ. ಅಲ್ಲದೇ ಭಾವಪೂರ್ಣವಾದ ನಟನೆಯಿಂದ, ಗಟ್ಟಿಯಾದ ಸ್ಪಷ್ಟ ಧ್ವನಿಯಿಂದ ಸಕುಬಾಯಿ ಪಾತ್ರಕ್ಕೆ ಮೈಸೂರಿನ ನುಡಿ ಸುದರ್ಶನ ಜೀವತುಂಬುತ್ತಾ ಸಾಗುವುದು ಕೂಡ ಈ ನಾಟಕದ ಹೆಚ್ಚುಗಾರಿಕೆಯೇ ಸರಿ. ಅವರ ಪಾತ್ರಕ್ಕೆ ಹೊಂದುವಂತಿರುವ ವಸ್ತುವಿನ್ಯಾಸ ಕೂಡ ಪಾತ್ರಕ್ಕೆ ಪೂರಕವಾಗಿದೆ. ಆಗಾಗ ಧ್ವನಿಗೂಡುವ ಪ್ರಾಸಂಗಿಕ ಹಳೆಯ ಹಿಂದಿ ಹಾಡುಗಳು, ಮರಾಠಿ ಅಭಂಗಗಳು ಪ್ರಯೋಗದಲ್ಲಿ ಹಾಲು ಜೇನಂತೆ ಬೆರೆತಿವೆ.

ನಾದಿರಾ ಬಬ್ಬರ್ ಅವರ ಹಿಂದಿಯ ಈ ನಾಟಕ ಸ್ವಂತ ಕನ್ನಡದ್ದೇ ಎಂಬಷ್ಟು ಸಹಜವಾಗಿದೆ. ಎಸ್. ಚೌಗಲೆಯವರ ಬರವಣಿಗೆಯ ಗಟ್ಟಿಯಾದ ಛಾಪು ಇದೆ.

‘ಅವ್ವ ಎದ್ದೇಳು, ತಲೆಯೆತ್ತು, ಕಾಲ ಬಂದದ ನೋಡುಹಿಂಗ ಹತಾಶಳಾಗಬೇಡ...’ ಎಂಬ ಕವಿತೆಯೊಂದಿಗೆ ಅಂತ್ಯಗೊಳ್ಳುವ ನಾಟಕವು ಅಂತರಂಗದಲ್ಲಿ ಒಂದು ಬೆಳಕಿನ ಕುಡಿಯಾಗಿ ಬೆಳಗುತ್ತದೆ. ನಾಟಕದ ಪರಿಣಾಮವು ಮಾನವನಲ್ಲಿ ಭವಿಷ್ಯದ ಕುರಿತು ಭರವಸೆ ಹುಟ್ಟಿಸುತ್ತದೆ. ವರ್ತಮಾನದಲ್ಲಿ ಬದುಕು ಸಂಘರ್ಷಮಯವಾಗಿರಬಹುದು. ಇದು ವಿರಮಿಸುವ ಕಾಲವೂ ಹೌದು! ಆದರೆ ಭವಿಷ್ಯ ಮಾತ್ರ ಉಜ್ವಲ ಬೆಳಕಾಗಿ ಕೈಹಿಡಿಯುತ್ತದೆ ಎಂಬ ಆಶಾವಾದವನ್ನು ಮುನ್ನೆಲೆಗೆ ತಂದು ಕೊನೆಗೊಳ್ಳುತ್ತದೆ.

ಜಾಗತೀಕರಣದ, ಮಾಧ್ಯಮಗಳ ಪ್ರಭಾವದಿಂದ ರಂಗಭೂಮಿ, ನಾಟಕ ಹಾಗೂ ಇತರ ಲಲಿತಕಲೆಗಳು ಹಿನ್ನೆಲೆಗೆ ಸಾಗುವ, ಸಾಗುತ್ತಿರುವ ಈ ಕಾಲಘಟ್ಟದಲ್ಲಿ ಅವನ್ನು ಉಳಿಸಿಕೊಳ್ಳುವುದೂ ಒಂದು ದೊಡ್ಡ ಜವಾಬ್ದಾರಿಯಾಗಿದೆ. ಕಾಲದ ಒಂದೊಂದೇ ಹನಿಗಳನ್ನು ಕೂಡಿಸಿ ನದಿಯಾಗಿ ಹರಿಸೀತು ಎಂಬ ಭಾವವನ್ನು ಪ್ರಯೋಗ ನೀಡುವುದು. ಇಂತಹ ಪ್ರಸ್ತುತಿಗಳ ಮುಂದೆಯೂ ಸಾಕಷ್ಟು ಸವಾಲುಗಳಿವೆ. ಅವುಗಳನ್ನು ಮೀರಿ ನಾಟಕ ಯಶಸ್ಸಾಗಬೇಕಾದರೆ ಸೂಕ್ತ ಪ್ರೋತ್ಸಾಹ ಸಕಾಲದಲ್ಲಿ ಸಿಗಬೇಕಾಗಿದೆ.

ಸಕುಬಾಯಿ ನಾಟಕದ ಸಂಗೀತ ವಿನ್ಯಾಸ ಉಮೇಶ ಸಾಲಿಯಾನ, ನಿರ್ವಹಣೆ ಗಣೇಶ ಭೀಮನಕೋಣೆ ಅವರದು. ನೆಳಲು ಬೆಳಕಿನ ಆಟವನ್ನು ನಿರ್ವಹಿಸಿದವರು ಅರುಣಮೂರ್ತಿ. ನೇಪಥ್ಯ ವಿನ್ಯಾಸ ಮತ್ತು ನಿರ್ದೇಶನ ಹುಲುಗಪ್ಪ ಕಟ್ಟೀಮನಿ. ಜುಲೈ 27 ರಂದು ಬೆಂಗಳೂರಿನ ರಂಗಶಂಕರದಲ್ಲಿ ನಾಟಕವು ಪ್ರಯೋಗ ಕಂಡಿತ್ತು.

ಪ್ರತಿಕ್ರಿಯೆಗಳು...

ಹೊಸ ವಿಷಯಗಳ ಮನದಟ್ಟು ಮಾಡಿದ ಲೇಖನ

ಜುಲೈ 9ರ ‘ಭಾನುವಾರದ ಪುರವಣಿಯಲ್ಲಿ ‘ಜಿಐ ನೋಂದಣಿ ಮುಂದೇನ್ಲೇಳಿ?’ ಲೇಖನದಲ್ಲಿ ಆನಂದತೀರ್ಥ ಪ್ಯಾಟಿ ಅವರು ಗೊತ್ತಿರದ ಅನೇಕ ವಿಷಯಗಳನ್ನು ಮನದಟ್ಟು ಮಾಡಿಸಿದ್ದಾರೆ. ಇಂತಹ ನೋಂದಣಿ ಸಿಕ್ಕರೆ ತಂತಾನೇ ಉತ್ಪನ್ನಗಳಿಗೆ ಮಾರುಕಟ್ಟೆ ವಿಸ್ತರಣೆಯಾಗುತ್ತದೆ ಎಂದು ನಾನು ಭಾವಿಸಿದ್ದೆ. ಯಾಕೆಂದರೆ, ಜಿಐ ನೋಂದಣಿ ಪಡೆಯಲು ಸಾಕಷ್ಟು ಲಾಬಿ ಮಾಡುವುದನ್ನು ನಾನು ಗಮನಿಸುತ್ತಾ ಬಂದಿದ್ದೇನೆ. ಈ ಬಾರಿಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಿಕ್ಕಮಗಳೂರಿನ ಕಾಫಿ ಬೆಳೆಯನ್ನು ಇನ್ನಷ್ಟು ಜನಪ್ರಿಯಗೊಳಿಸುವ ಯೋಜನೆ ಪ್ರಸ್ತಾಪಿಸಿರುವುದು ಸ್ವಾಗತಾರ್ಹ. ಲೇಖನದಲ್ಲಿ ಬರೆದಿರುವ ಅನೇಕ ಸೂಕ್ಷ್ಮ ಸಂಗತಿಗಳತ್ತ ಕೃಷಿ, ತೋಟಗಾರಿಕಾ ಇಲಾಖೆಗಳು ಗಮನಹರಿಸಲಿ.

ಚನ್ನೇಗೌಡ, ಗೌರಿಬಿದನೂರು



ಒಂದು ಕಡೆ ಮಳೆಯ ಸುಖ. ಕೆಲವರಿಗೆ ಅತಿವೃಷ್ಟಿ ತಂದ ಸಂಕಟ. ತುಂಗಭದ್ರಾ ಅಣೆಕಟ್ಟಿನ ಸುತ್ತ ನೀರೇ ಇಲ್ಲದ ಸ್ಥಿತಿಗತಿಯ ಚಿತ್ರಪಟವನ್ನು ನೋಡಿ ಪ್ರಕೃತಿಯ ಆಟ ಎಂಥದೆನ್ನುವುದು ಅರಿವಾಯಿತು. ನೋಡಲು ಸುಂದರವಾಗಿ ಕಂಡರೂ ಯೋಚಿಸಲು ಪ್ರೇರೇಪಿಸುವಂತಹ ಫೋಟೊಗಳನ್ನು ತೆಗೆದ ತಾಜುದ್ದೀನ್ ಆಜಾದ್ ಅವರಿಗೆ ಧನ್ಯವಾದ.

ಸೌಮ್ಯಾ ಎಸ್, ತುಮಕೂರು

ಶಾಂತಿ ಪ್ರೀತಿಯ ಸಂತನ ಅರ್ಥವತ್ತಾದ ಮಾತು

ರವಿಪ್ರಕಾಶ್ ಎಸ್. ಅವರ ‘ಶಾಂತಿ ಪ್ರೀತಿಯ ಸಂತ’ (ಜುಲೈ2ರ ಸಂಚಿಕೆ) ಲೇಖನ ಖುಷಿ ತಂದಿತು. ಇಸ್ಲಾಂ ಎನ್ನುವುದನ್ನು ಕೇಳಿದರೇನೆ ಅನ್ಯ ಧರ್ಮೀಯರಿಗೆ ತಿರಸ್ಕಾರ, ನಂಬಿಕೆಗೆ ಅನರ್ಹ ಎನ್ನುವ ಮಟ್ಟಿಗೆ ಈ ಜನಾಂಗ ಬಂದು ನಿಂತಿದೆ. ಇಂತಹ ಸಂದರ್ಭದಲ್ಲಿ ಪ್ರೊ. ಇಸ್ತಿಯಾಕ್ ಅಹಮದ್ ಅವರ ಮಾತು ಮರುಳುಗಾಡಿನಲ್ಲಿ ಸಿಕ್ಕ ಓಯಸಿಸ್‌ನಂತಿದೆ. ಸಮಾಜ ಚಿಕಿತ್ಸಕರಾಗಿ ಇಶ್ತಿಯಾಕ್ ಅಹಮದ್ ಅವರಂತಹವರು ಸಾವಿರ ಸಾವಿರ ಸಂಖ್ಯೆಯಲ್ಲಿ ಹುಟ್ಟಬೇಕಿದೆ. ಆಗ ಮಾತ್ರ ಪಾಕಿಸ್ತಾನಕ್ಕೊಂದು ಸ್ಥಾನಮಾನ, ಗೌರವ ದೊರೆಯುತ್ತದೆ.

ಎಚ್.ಎನ್. ಕಿರಣ್ ಕುಮಾರ್ ಹಳೇಹಳ್ಳಿ
ಗೌರಿಬಿದನೂರು ತಾಲ್ಲೂಕು

ಆಪ್ತ ಲೇಖನ

ಆರ್. ಮಂಜುನಾಥ್ ಬರೆದ ‘ಕಾಳಿಂಗನ ಗೆದ್ದ ಗೌರಿಶಂಕರ’ ಲೇಖನ ಓದುಗರಿಗೆ ಆಪ್ತವಾಗುತ್ತದೆ. ಈ ಬರಹದಲ್ಲಿ ಮೂರು ರೀತಿಯ ಸಂಗತಿಗಳನ್ನು ಗಮನಿಸಬಹುದು. ಒಂದು, ಗೌರಿಶಂಕ ಅವರ ಬದುಕಿನಲ್ಲಿ ಜರಗಿದ ಸಂಗತಿಗಳು; ಎರಡು, ಡಾಕ್ಟರೇಟ್ ಪದವಿಗಾಗಿ ಸಂಚರಿಸಿದ ತಿರುವುಗಳು; ಮೂರು, ಅಪ್ಪು ಅವರನ್ನು ಭೇಟಿಯಾದದ್ದು... ಈ ಮೂರೂ ಸಂಗತಿಗಳಿಂದ ಈ ಬರಹವು ತನ್ನ ಇರುವಿಕೆಯ ನೆಲೆಯನ್ನು ಖಾತರಿಪಡಿಸಿಕೊಳ್ಳುತ್ತದೆ.

ರವಿಕುಮಾರ ಜಾಧವ, ಕನ್ನಡ ವಿಶ್ವವಿದ್ಯಾಲಯ, ಹಂಪಿ


ದೇಹ ದೇಗುಲದ ವಸ್ತ್ರ ರಾಜಕೀಯ

ಕಲೆ

‘ದೇಹವೇ ದೇಗುಲ’ ಎನ್ನುವ ಮಾತಿದೆ. ಕಲಾವಿದೆ ಸುರೇಖಾ ಇಂತಹ ನುಡಿಗಟ್ಟಿನಲ್ಲಿಯೇ ಸಮಾಜೋ-ರಾಜಕೀಯ ಇರುವುದನ್ನು ಗುರುತಿಸುತ್ತಾರೆ. ಆ ಉಮೇದಿನಲ್ಲೇ ಅವರು ಹೆಣ್ಣಿನ ದೇಹವನ್ನೇ ಒಂದು ‘ಪ್ರದೇಶ’ ಎಂದು ಪರಿಭಾವಿಸಿ, ಅದರ ಮೇಲಿನ ವಸ್ತ್ರವನ್ನು ವಿಚಾರಣಾ ದೃಷ್ಟಿಕೋನದಿಂದ ಕಲಾ ಚೌಕಟ್ಟಿಗೆ ತಂದಿದ್ದಾರೆ. ‘ಶೆಡ್ಡಿಂಗ್ ದಿ ಸ್ಕಿನ್’ ಎನ್ನುವ ಪ್ರದರ್ಶನದ ಶೀರ್ಷಿಕೆಯೇ ಮೈ ಝುಮ್ಮೆನ್ನುವಂತೆ ಮಾಡುತ್ತದೆ.

ಅವರ ಇನ್‌ಸ್ಟಾಲೇಷನ್‌ಗಳಲ್ಲಿ, ಫೋಟೊ–ಪರ್ಫಾರ್ಮೆನ್ಸ್‌ಗಳಲ್ಲಿ ವಿಡಿಯೊ ದೃಶ್ಯ ಮಾಧ್ಯಮ ಮೂಡಿಸಬಹುದಾದ ಪರಿಣಾಮ ಜೀವತಳೆದಿದೆ. ‘ಧರಿಸುವುದು’, ‘ಪ್ರದರ್ಶಿಸುವುದು’ ಎಂಬ ವಸ್ತ್ರಸಂಹಿತೆಯ ಸಮಾಜೋ–ರಾಜಕೀಯ ಧೋರಣೆಯನ್ನು ಅವರು ವಿಚಾರಣೆಗೆ ಒಳಪಡಿಸಲು ಕಲಾಮಾಧ್ಯಮವನ್ನು ದುಡಿಸಿಕೊಂಡಿದ್ದಾರೆ. ಸೌಂದರ್ಯ ಹಾಗೂ ಹಿಂಸೆ, ವಾಸ್ತವ ಹಾಗೂ ಸಾದೃಶ ಎನ್ನುವ ನೆಲೆಗಟ್ಟಿನಲ್ಲಿ ವಸ್ತ್ರ ರಾಜಕೀಯವನ್ನು ಅವರು ಹೆಣ್ಣಿನ ದೃಷ್ಟಿಕೋನದಿಂದ ಕಲಾಭಿವ್ಯಕ್ತಗೊಳಿಸಿದ್ದಾರೆ. ‘ಚರ್ಮ ವಸ್ತ್ರದ ಒಂದು ಬಗೆ’, ‘ದೇಹವೊಂದು ವಿಚಾರಣಾ ಪ್ರದೇಶ’ ಎಂಬ ಮಸೂರದಲ್ಲಿ ಅವರು ಲಿಂಗ–ಅಸ್ಮಿತೆಯ ಗಂಭೀರ ಪ್ರಶ್ನೆಯನ್ನು ಎತ್ತುತ್ತಾರೆ. ಮೊಗ್ಗಿನ ಜಡೆ ಹಾಕಿಸಿಕೊಂಡು ಕನ್ನಡಿ ಮುಂದೆ ಬಿಂಬಗಳಾದವರು, ವಿವಿಧ ಶೈಲಿನ ಉಡುಪಿನಲ್ಲಿ ಸ್ವಾತಂತ್ರ್ಯ ಅರಸಿ ಹೊರಟವರು ಎಲ್ಲ ಹೆಣ್ಣುಮಕ್ಕಳನ್ನು ಸುರೇಖಾ ತಮ್ಮ ಹೆಣ್ಣುಗಣ್ಣಿನಿಂದಲೇ ನೋಡಿದ್ದಾರೆ.

ದೇಹವನ್ನು ಒಂದು ಭೌಗೋಳಿಕ ಪ್ರದೇಶ ಎಂದು ಪರಿಭಾವಿಸೋಣ. ಆಗ ಅದನ್ನು ಚೆಂದಗಾಣಿಸುವ ಉಮೇದಿನ ಸಂವಾದಕ್ಕೂ ವಸ್ತ್ರ ಕಾರಣವಾಗುತ್ತದೆಯಲ್ಲವೆ? ಹೀಗೊಂದು ಒಳನೋಟದಿಂದ ಸುರೇಖಾ ಅವರ ಕಲಾವಂತಿಕೆ ಅನಾವರಣಗೊಂಡಿದೆ. ಬೆಂಗಳೂರಿನ ವಿಲ್ಸನ್ ಗಾರ್ಡನ್‌ನ ಸುಮುಖ ಗ್ಯಾಲರಿಯಲ್ಲಿ ಸುರೇಖಾ ಅವರ ಈ ವಿಭಿನ್ನ ಕಲಾ ಪ್ರದರ್ಶನ ಜುಲೈ 22ರವರೆಗೆ ನಡೆಯಲಿದೆ.



ಸುರೇಖಾ ಅವರ ಇನ್‌ಸ್ಟಾಲೇಷನ್

ತಮಟೆಯ ಸದ್ದು ಬೆಳಕಿನ ಸುದ್ದಿ

10ನೇ ಪುಟದಿಂದ...

ಪರಿಶಿಷ್ಟ ಸಮುದಾಯದವರು ಮಾತ್ರವಲ್ಲದೆ ಸಾಮಾನ್ಯ ವರ್ಗದ ಯುವಕ-ಯುವತಿಯರೂ ನಾಗರಾಜ ಅವರ ತಂಡದಲ್ಲಿದ್ದಾರೆ.



ಶಿವಮ್ಮ

‘ನಾನು ಎಸ್ಸೆಸ್ಸೆಲ್ಸಿ ಮುಗಿಸಿ, ಆಗಿನ್ನೂ ಪಿಯುಗೆ ಸೇರಿದ್ದೆ. ನಾಗರಾಜ್ ಸರ್ ಮತ್ತು ತಂಡದವರು ನಮ್ಮ ಕಾಲೇಜಿಗೆ ಬಂದು, ಈ ಕಲೆಯ ಮಹತ್ವದ ಬಗ್ಗೆ ಹೇಳಿದರು. ತಮಟೆ ಬಾರಿಸುವುದರಿಂದ ಸಂಭಾವನೆಯೂ ಸಿಗುತ್ತೆ ಅಂದರು. ನಮ್ಮ ಮನೆಯಲ್ಲಿ ಬಡತನವಿತ್ತು. ಅಪ್ಪ-ಅಮ್ಮನ ಹತ್ತಿರ ಹೋಗಿ, ತಮಟೆ ಕಲಿಯಲು ಹೋಗುತ್ತೇನೆ ಎಂದೆ. ನಾನು ದುಡಿದುಕೊಂಡೇ ಓದುತ್ತೇನೆ, ಅವಕಾಶ ಕೊಡಿ ಎಂದೂ ಕೇಳಿಕೊಂಡೆ. ಅವರು ಒಪ್ಪಿದರು’ ಎನ್ನುವ ಹೊಸಕೋಟೆ ತಾಲ್ಲೂಕು ನಂದಗುಡಿಯ ಮೇಘನಾ, ಪತ್ರಿಕೋದ್ಯಮದಲ್ಲಿ ಪದವಿ ಪೂರೈಸಿ, ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಈಗ ಬೆಂಗಳೂರಿನಲ್ಲಿಯೇ ಬಿ.ಇಡಿ. ಮಾಡುತ್ತಿದ್ದಾರೆ. 2015ರಿಂದ ಈವರೆಗೂ ಓದಿಗಾಗಿ ಅಪ್ಪ-ಅಮ್ಮನಿಂದ ಒಂದು ರೂಪಾಯಿಯನ್ನೂ ಪಡೆದಿಲ್ಲ ಮೇಘನಾ.

‘ನಾನು ತಮಟೆ ತಂಡದೊಂದಿಗೆ ಹೋಗುತ್ತಿದ್ದಾಗ, ಅದು ಕೀಳು ಜಾತಿಯವರ ಕಸುಬು. ಅದರಲ್ಲಿಯೂ, ನೀನು ಹುಡುಗಿಯಾಗಿ ಹುಡುಗರೊಂದಿಗೆ ಹಾಗೆ ಊರೂರು ಸುತ್ತಿದರೆ ಜನ ಏನಂತಾರೆ? ಹೆಣ್ಣುಮಕ್ಕಳಿಗಲ್ಲ ಈ ವೃತ್ತಿ ಎಂದು ಅನೇಕರು ನನ್ನನ್ನು ಅಣಕಿಸುತ್ತಿದ್ದರು. ತಮಟೆ ಡಾನ್ಸ್ ಮಾಡಿದ್ದನ್ನು ವಾಟ್ಸ್‌ಆ್ಯಪ್ ಸ್ಟೇಟಸ್‌ಗೆ ಹಾಕಿಕೊಂಡರೆ, ಅದನ್ನು ನೋಡಿ ನನ್ನ ಗೆಳತಿಯರೇ ವ್ಯಂಗ್ಯವಾಗಿ ನಗುತ್ತಿದ್ದರು. 2014ರಿಂದ ನಾನು ಈ ತಂಡದಲ್ಲಿದ್ದೇನೆ. ರಾಜ್ಯದ ವಿವಿಧೆಡೆ ಮಾತ್ರವಲ್ಲದೆ, ದೆಹಲಿ, ಸಿಂಗಪುರಗಳಲ್ಲಿಯೂ ತಮಟೆ ಪ್ರದರ್ಶನ ನೀಡಿ ಬಂದಿದ್ದೇವೆ. ನಾನು ವಿದೇಶಕ್ಕೆ ಹೋಗಿ ಬಂದ ನಂತರ, ಗೆಳತಿಯರಲ್ಲಿ ನನ್ನ ಬಗ್ಗೆ ಇದ್ದ ಅಭಿಪ್ರಾಯ ಬದಲಾಗಿದೆ. ನನಗೆ ಗೌರವ ನೀಡುತ್ತಿದ್ದಾರೆ. ಪ್ರೋತ್ಸಾಹವನ್ನೂ ಕೊಡುತ್ತಿದ್ದಾರೆ’ ಎಂದು ಕಣ್ಣರಳಿಸಿದರು ಬಿ.ಎ. ಪದವೀಧರೆ ಕವಿತಾ.

ಹೀಗೆ ಕಲೆಯನ್ನೇ ನಂಬಿ ಬಂದ ಅನೇಕರಿಗೆ ಶಿಕ್ಷಣ ಕೊಡುವ ಜೊತೆಗೆ, ಹಲವು ಯುವತಿಯರ ಮದುವೆಯನ್ನೂ ನೆರವೇರಿಸಿಕೊಟ್ಟಿದ್ದಾರೆ ನಾಗರಾಜ.

‘ದೇವರ ಉತ್ಸವದ ಸಂದರ್ಭದಲ್ಲಿ ತಮಟೆ ಬೇಕು. ದೇವರು ಹೊರಬರುವಾಗಲೂ ದಲಿತರು ತಮಟೆ ಬಾರಿಸಲೇಬೇಕು. ಆದರೆ, ಈಗಲೂ ಎಷ್ಟೋ ಕಡೆ ದಲಿತರಿಗೆ ದೇಗುಲದ ಒಳಗೆ ಪ್ರವೇಶವಿಲ್ಲ. ಇದನ್ನೆಲ್ಲ ನೆನಸಿಕೊಂಡಾಗ ಬೇಸರವಾಗುತ್ತದೆ. ತಮಟೆ ಕಲೆಯನ್ನೇ ನಂಬಿ ಬಂದ ಅನೇಕರ ಜೀವನಕ್ಕೆ ದಾರಿಮಾಡಿಕೊಟ್ಟ ತೃಪ್ತಿಯಂತೂ ಇದೆ. ನನಗೆ ಸರ್ವಸ್ವವೂ ಆದ ತಮಟೆಯ ಬಗ್ಗೆ ಕೃತಜ್ಞತೆಯೂ ಇದೆ’ ಎಂದು ಕೈ ಮುಗಿದರು ನಾಗರಾಜ. ಅವರ ತಂಡದಲ್ಲಿದ್ದ ಎಲ್ಲರ ಮುಖದಲ್ಲೂ ಅದೇ ಕೃತಜ್ಞತಾ ಭಾವವಿತ್ತು.

ಹೀಗೆ, ಮಾತು ಮುಗಿದ ನಂತರ, ತಮಟೆ ಬಾರಿಸುತ್ತ, ಹಾಡುತ್ತಾ, ಆಡುತ್ತಾ ಸುಸ್ತಾಗಿ ಕುಳಿತರು ಯುವತಿಯರು. ಮಳೆ ಧೋ ಎಂದು ಸುರಿಯತೊಡಗಿತು.

ಮುನ್ನೋಟ 16-07-2023 ರಿಂದ -22-07-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಿದೇಶಿ ಗೆಳೆಯರು ಅಥವಾ ಪಾಲುದಾರರ ಸಹವಾಸದಿಂದ ವ್ಯವಹಾರದಲ್ಲಿ ಉತ್ತಮ ಬದಲಾವಣೆಯನ್ನು ಕಾಣುವಿರಿ. ಅನವಶ್ಯಕವಾಗಿ ಇತರರ ಬಗ್ಗೆ ಋಣಾತ್ಮಕವಾಗಿ ಚಿಂತಿಸುವುದು ನಿಮಗೆ ಒಳಿತಲ್ಲ. ಹಣದ ಹರಿವಿದ್ದರೂ ಖರ್ಚನ್ನು ಕಡಿಮೆ ಮಾಡುವ ಬಗ್ಗೆ ಆಲೋಚಿಸಿರಿ. ಸಂಗೀತ ಕಲಿಯುತ್ತಿರುವವರಿಗೆ ಸಾಕಷ್ಟು ಯಶಸ್ಸು ಇರುತ್ತದೆ. ಲೆಕ್ಕಪರಿಶೋಧಕರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಯಾವುದೇ ರೀತಿಯ ವಾದ ವಿವಾದಗಳು ನಿಮ್ಮ ಕೆಲಸ ಕಾರ್ಯಕ್ಕೆ ಅಡ್ಡಿಪಡಿಸದಂತೆ ಎಚ್ಚರ ವಹಿಸಿ. ಸಮಾಜದಲ್ಲಿನ ನಿಮ್ಮ ಮುಂದಾಳತ್ವವನ್ನು ಜನರು ಗುರುತಿಸಿ ನಿಮಗೆ ಗೌರವ ಕೊಡುತ್ತಾರೆ. ಹೊಸ ಮನೆಯನ್ನು ಕೊಳ್ಳುವ ಬಗ್ಗೆ ದಲ್ಲಾಳಿಯ ಜೊತೆ ಮಾತುಕತೆ ಮಾಡಬಹುದು. ಕಚೇರಿಯಲ್ಲಿ ಸಹೋದ್ಯೋಗಿಗಳ ಜೊತೆ ಇದ್ದ ಮನಸ್ತಾಪಗಳು ದೂರವಾಗಿ ವಾತಾವರಣ ತಿಳಿಯಾಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಿಪರೀತ ಸ್ವಾಭಿಮಾನ ನಿಮ್ಮನ್ನು ಆವರಿಸುತ್ತದೆ. ಇದರಿಂದ ನಿಮ್ಮ ಮಾತಿನಲ್ಲಿಯೂ ವ್ಯತ್ಯಾಸವಾಗಬಹುದು. ಹೆಚ್ಚು ಆಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನ ಪಡುವಿರಿ. ಸಂಸಾರದಲ್ಲಿ ಸುಖವಿರುತ್ತದೆ, ಸಂಸಾರದ ಏಳಿಗೆಗಾಗಿ ಎಲ್ಲರೂ ಕೈಜೋಡಿಸುವರು. ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗಬಹುದು. ಗುಪ್ತ ರೋಗಗಳಿರುವವರು ಹೆಚ್ಚು ಎಚ್ಚರ ವಹಿಸಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಬಹಳ ತಾಳ್ಮೆಯಿಂದ ಕಾಯುತ್ತಿದ್ದ ಕೆಲಸಗಳು ಈಗ ಕೈಗೂಡಬಹುದು. ಅಭಿವೃದ್ಧಿಯ ಯಾವುದೇ ಅವಕಾಶಗಳನ್ನು ಕೈಚೆಲ್ಲಬೇಡಿ. ಕುಟುಂಬ ನಿರ್ವಹಣೆಯಲ್ಲಿ ಗಟ್ಟಿತನ ತೋರಿಸಿ,ಇಲ್ಲವಾದಲ್ಲಿ ನಿಮ್ಮ ಸ್ಥಾನ ಪಲ್ಲಟವಾಗುತ್ತದೆ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ ಹಾಗೂ ಕೃಷಿಕರಿಗೆ ಬೇಕಾದ ಸೌಕರ್ಯಗಳು ದೊರೆಯುತ್ತವೆ. ಬುದ್ಧಿವಂತಿಕೆಯಿಂದ ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಜವಾಬ್ದಾರಿಯುತ ಸ್ಥಾನವನ್ನು ಸರಿಯಾಗಿ ನಿರ್ವಹಿಸಿರಿ. ನಂತರ ವಿಶ್ವಾಸ ಗಳಿಸುವುದು ನಿಮಗೆ ಬಹಳ ಮುಖ್ಯ. ಕೃಷಿ ವರ್ಗದವರ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಹಣಕಾಸಿನ ವ್ಯಾಮೋಹ ಹೆಚ್ಚಾಗಿ ಹಣ ಕಳೆದುಕೊಳ್ಳುವ ಸಾಧ್ಯತೆಗಳಿವೆ. ಕುಟುಂಬದ ಕಡೆಗೆ ಹೆಚ್ಚು ಗಮನ ಕೊಡುವುದು ಒಳ್ಳೆಯದು. ಆಧ್ಯಾತ್ಮಿಕ ವಿಚಾರವನ್ನು ಕಲಿಯುವ ಆಸಕ್ತಿ ಮೂಡುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲಸ ಮಾಡುವ ಸಾಮರ್ಥ್ಯವಿದ್ದರೂ ಅವಕಾಶಗಳನ್ನು ಕೈಚೆಲ್ಲಿ ಪರದಾಡುವಿರಿ. ಹಣಕಾಸಿನ ಲೆಕ್ಕಾಚಾರವನ್ನು ನೋಡಿಕೊಳ್ಳುವವರು ಬಹಳ ಎಚ್ಚರಿಕೆಯಿಂದ ವ್ಯವಹಾರ ಮಾಡಿ. ಪ್ರೀತಿ ಪಾತ್ರರಿಗೆ ನಿಮ್ಮ ಭಾವನೆಯನ್ನು ವ್ಯಕ್ತಪಡಿಸಲು ಅವಕಾಶ ಈಗ ದೊರೆಯುತ್ತದೆ. ತಾಯಿ ಮಕ್ಕಳ ನಡುವೆ ಕಾವೇರಿದ ಮಾತುಗಳು ಆಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡುವ ಮನಸ್ಸು ಕಡಿಮೆಯಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಂಗಾತಿಗೆ ನೀವು ತೋರಿಸಿದ ಪ್ರೀತಿ ಕಾಳಜಿಯಿಂದ ಅವರ ಮನೆಯ ಕಡೆಯವರಿಗೆ ನಿಮ್ಮ ಮೇಲೆ ಗೌರವ ಹೆಚ್ಚುತ್ತದೆ. ದುರಭ್ಯಾಸಗಳನ್ನು ಕಲಿಸುವ ಸ್ನೇಹಿತರು ದೊರೆಯುವ ಸಂದರ್ಭವಿದೆ, ಎಚ್ಚರ ವಹಿಸಿ. ನಿಲುಕದ ವಸ್ತುವಿಗಾಗಲಿ, ಆಸ್ತಿಗಾಗಲಿ ಒದ್ದಾಡದಿರಿ. ಸ್ನೇಹಿತರು ಮತ್ತು ಬಂಧುಗಳ ನಡುವಿನ ವಿಶ್ವಾಸ ಕಡಿಮೆಯಾಗುವ ಸಾಧ್ಯತೆ ಇದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವೃತ್ತಿಯಲ್ಲಿ ಶಾಂತ ರೀತಿಯಿಂದ ಇದ್ದು ವ್ಯವಹರಿಸುವುದು ಒಳ್ಳೆಯದು. ಸಾಂಪ್ರದಾಯಿಕ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಹೆಚ್ಚು ಆಸಕ್ತಿ ಈಗ ಮೂಡುತ್ತದೆ. ಸಿಗುವ ಅವಕಾಶಗಳನ್ನು ಬಳಸಿಕೊಂಡು ಉತ್ಸಾಹ ಹೆಚ್ಚಿಸಿಕೊಳ್ಳುವಿರಿ. ಕೃಷಿ ಮಾರುಕಟ್ಟೆಯ ಕಮಿಷನ್ ಏಜೆಂಟ್‌ಗಳಿಗೆ ಹೆಚ್ಚು ಹಣ ಸಿಗುತ್ತದೆ. ಸರಕು ಸಾಗಣೆ ಮಾಡುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ನಿರ್ಧಾರಗಳನ್ನು ಜಾರಿಗೊಳಿಸುವ ಮುಂಚೆ ಮತ್ತೊಮ್ಮೆ ಪರಿಶೀಲಿಸಿ. ದೂರ ಪ್ರವಾಸಗಳಿಂದ ದೇಹಾಲಸ್ಯ ಉಂಟಾಗಬಹುದು. ಉದ್ಯೋಗ ಸ್ಥಳದಲ್ಲಿ ಇದ್ದ ಗೊಂದಲ ನಿವಾರಣೆಯಾಗಿ ಪ್ರಮುಖ ಸ್ಥಾನವೊಂದು ದೊರೆತು ಸಂತಸವಾಗುತ್ತದೆ. ಕಬ್ಬಿಣದ ಅದಿರು ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರ ನಡೆಯುತ್ತದೆ. ಕೆಲವು ಬ್ಯಾಂಕ್ ಹಿರಿಯ ಅಧಿಕಾರಿಗಳಿಗೆ ಈಗ ವರ್ಗಾವಣೆಯಾಗುವ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹಣದ ವ್ಯತ್ಯಾಸಗಳು ಏನೆಂದು ಈಗ ಅರಿವಾಗಲಿದೆ. ಕಳೆದು ಹೋಗಿದ್ದ ವಸ್ತುವೊಂದು ದೊರೆತು ಸಂತಸವಾಗುತ್ತದೆ. ಉದ್ಯಮಿಗಳು ತಮ್ಮ ಕಾರ್ಯ ತಂತ್ರಗಳನ್ನು ಸರಿಯಾಗಿ ಆಲೋಚಿಸಿ ಜಾರಿಗೊಳಿಸುವುದು ಉತ್ತಮ. ಇದರಿಂದ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಆಪ್ತ ವರ್ಗದವರೊಡನೆ ನಡೆಸುವ ಮಾತುಕತೆಗಳು ಹೆಚ್ಚು ಫಲಪ್ರದವಾಗುತ್ತವೆ. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಸಾಮಾನ್ಯ ವ್ಯಾಪಾರವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಷಯಗಳಲ್ಲಿ ಹೆಚ್ಚು ಆಸಕ್ತಿ ಮೂಡಿ ಉತ್ತಮ ಫಲಿತಾಂಶ ದೊರೆಯುತ್ತದೆ. ಪ್ರೀತಿ ಪ್ರೇಮದ ವಿಷಯದಲ್ಲಿ ಮನಸ್ತಾಪ ಮೂಡಿ ಪ್ರೇಮ ವಿಫಲವಾಗುತ್ತದೆ. ಯುವಕರು ಉದ್ಯೋಗ ಸ್ಥಳದಲ್ಲಿ ಬಹಳ ಎಚ್ಚರಿಕೆಯಿಂದ ಮಾತನಾಡಬೇಕು. ಇಲ್ಲವಾದಲ್ಲಿ ನಿಮ್ಮ ಉದ್ಯೋಗಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ವಿಶೇಷ ವ್ಯಕ್ತಿಗಳನ್ನು ಭೇಟಿಯಾಗುವ ಅವಕಾಶಗಳಿರುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಉದ್ಯೋಗ ಬದಲಾವಣೆ ಮಾಡಬೇಕೆನ್ನುವವರಿಗೆ ಇದು ಸಕಾಲ. ಹೆಚ್ಚಿನ ಗಳಿಕೆ ಬಗ್ಗೆ ಆಲೋಚನೆ ಮಾಡಿ ಉದ್ಯೋಗ ಬದಲಿಸಿ. ಗುತ್ತಿಗೆದಾರರಿಗೆ ಕೆಲಸ ಮಾಡಿದ ಹಳೆ ಬಾಕಿ ಹಣ ಈಗ ಬರುವ ಸಾಧ್ಯತೆ ಇದೆ. ನಿಮ್ಮ ವ್ಯವಹಾರಗಳಲ್ಲಿ ನಿಗೂಢತೆಯನ್ನು ಕಾಪಾಡಿಕೊಳ್ಳುವುದು ಒಳ್ಳೆಯದು. ಕುಟುಂಬದಲ್ಲಿ ಆಸ್ತಿಗೆ ಸಂಬಂಧಿಸಿದ ಸಮಸ್ಯೆಗಳು ಈಗ ಬಗೆಹರಿಯುವ ಲಕ್ಷಣ ಇದೆ.

ಪದಬಂಧ 2798




ಮೇಲಿನಿಂದ ಕೆಳಕ್ಕೆ
1. ದೀರ್ಘವಾಗಿ ರಸದಿಂದ ಕೂಡಿದ್ದು ವಿರಸಕ್ಕೆ ವಿರೋಧ 3
2. ಹೊಸದಾಗಿ ಹಸುರಾಗಿ ಅಂಕುರಿಸಿದ್ದು 3
3. ಪೂಸಿನ ಈಶಾನ್ಯ ಪಟ್ಟಣ ಇತ್ತೀಚೆಗೆ ದ್ವೇಷದ ಬೆಂಕಿಯಲ್ಲುರಿಯುತ್ತಿದೆ 4
4. ನೃತ್ಯಕ್ಕೆ ಹೊಂದುವ ಹಾಡಿನ ಪ್ರಕಾರ 3
7. ಮೇಲಿನಿಂದ ಕೆಳಕ್ಕೆ ಹಾರು 3
9. ವೈಕುಂಠದ ಬಾಗಿಲು ಕಾಯುತ್ತಾ ಅಸುರರಾದ ಸೋದರರು 5
11. ದುಪ್ಪಟ್ಟು ದುಃಖ ತುಂಬಿಕೊಂಡ ಮನ 3
13. ನಿದ್ದೆಯಲ್ಲಿ ಕಣ್ಮುಂದೆ ಓಡುವ ಚಿತ್ರ 3
16. ಮತ್ತೆ ಬರುವ ಮತಿಗೆಟ್ಟವ 3
17. ಹಳೆ ಕಾಲದ ಸೆರೆಮನೆ 4
18. ವಿರಳವಾಗಿ ಸಿಗುವ ಜನ್ಮ 3
19. ಹೋಳಿ ಹಬ್ಬಕ್ಕೆ ಸಿಹಿ ಖಾದ್ಯ 3
20. ಕೋಮಲತೆ ಮತ್ತು ಮೃದುತ್ವ ಕಳೆದುಕೊಂಡ ಒರಟುತನ 3

ಎಡದಿಂದ ಬಲಕ್ಕೆ
1. ಒಳ್ಳೆಯ ಆಸ್ಥೆಯುಳ್ಳ ಸೌಂದರ್ಯ ಉಪಾಸಕನ ಸವಿ ದೃಷ್ಟಿ 5
3. ಜೇನಿನಂತಹ ಬುದ್ಧಿಯುಳ್ಳವಳು 4
5. ಧರ್ಮದ ಹೆಸರಿನ ಮಾರ್ಗದರ್ಶಕನ ಮಾತಿನ ದನಿ 4
6. ಎಲ್ಲರಿಗೂ ಒಳ್ಳೆಯದನ್ನು ಬಯಸುವ ಸಜ್ಜನರು ಮೆದುಗಸ್ಥರು 5
8. ತೀರಾ ಹಳೆಯದು, ಪ್ರಾಚೀನ 4
9. ಅಗ್ನಿ ಉತ್ಪತ್ತಿಯಾಗುವ ಉದರ 3
10. ಹಯಗಳನ್ನು ಕಟ್ಟಿ ಹುಲ್ಲು ಹಾಕುವ ಸ್ಥಳ 5
13. ಇಂತಹ ರಾತ್ರಿ ಬಹಳ ಭಯಾನಕ 3
14. ಹೊಚ್ಚ ಹೊಸದು 3
15. ಆಕಾಶದಲ್ಲಿನ ಸೂರ್ಯನನ್ನು ಹೋಲುವ ದಾಸವಾಳ 5
17. ಜಡತೆಯನ್ನು ಒಪ್ಪಿಕೊಳ್ಳದೆ ಪ್ರಶ್ನೆಮಾಡುವ ಪ್ರತಿಗಾಮಿ 3
18. ಮಂದಿಯ ಖಾಯಿಲೆಗಳಿಗೆ ಅಗ್ಗ ಬೆಲೆಯಲ್ಲಿ ಸರ್ಕಾರದ ಕಾರ್ಯಕ್ರಮದಡಿ ಸಿಗುವ ಮದ್ದು 4
19. ಎತ್ತು ಪೂರ್ವಾವಸ್ಥೆಯಲ್ಲಿ ನಡೆಸುವ ಹೋರಾಟ 5
21. ಉತ್ತರ ಕರ್ನಾಟಕದ ಊಟದ ಮನೆ 4
22. ಗಜದ ಕೂಸು, ನಿಧಾನವಾಗಿ ನಡೆಯುವುದಕ್ಕೆ ಹೆಸರುವಾಸಿ 4
23. ಆದಿ ಮಾನವ ತಿನ್ನುತ್ತಿದ್ದ ಕಂದಮೂಲ 5

ಪದಬಂಧ ಉತ್ತರ -2797

ಮೇಲಿಂದ ಕೆಳಕ್ಕೆ
1.ಯಜನ 2. ನಿಖರ 3. ಶಿವಶಂಕರ 4. ರವಾನೆ 6. ಭಾಮಿನಿ 7.ತಪಿತ 9.ಪಚನ 11.ಕಾಯಕ 12.ರಜಕ 14.ಮಾಮರ 15.ಯಷವಿ 17.ರುಕ್ಮಿಣಿ 18.ರಸಮಯ 19.ಶಾಲಿನಿ 20.ದಾಯಕ 22.ರಾದ್ಧಾಂತ 24.ತ್ಯಜಿಸು 25.ಹವನ

ಎಡದಿಂದ ಬಲಕ್ಕೆ
1.ಯಶಸ್ವಿನಿ 3.ಶಿಶುವಿಹಾರ 5.ನವಭಾರತ 8.ಶಂಕುಸ್ಥಾಪನೆ 10.ಪಿನಾಕ 11.ಕಾರ್ಯನಿರತ 13.ರಮಾತನಯ 16.ಕರುಣಾಕರ 19.ಶಾರದಾದೇವಿ 21.ಸಹೇಲಿ 22.ರಾಣಿನಿವಾಸ 23.ನಿತ್ಯಕಲಹ 26.ತಲೆಗಂದಾಯ 27.ಸುಪ್ತಮನ


ವೃತ್ತಿಯಲ್ಲಿ ಮುಕುಂದ ಮುಖಭಾಗದ ಹಳೆಯ ಗಳಿಗೆ ಚಿತ್ರ: ಪ್ರತೀಕ್ ಮುಕುಂದ

ಪ್ರಶಸ್ತ ಅಭಿರುಚಿಯ ಸೂಕ್ಷ್ಮವಂತ ಮುಕುಂದ

ಹೆಗ್ಗೋಡಿನ ನೀನಾಸಂನಲ್ಲಿ ಸಾಹಿತಿಗಳ ಅಂತರ್ಭಾವ ಚಿತ್ರ ತೆಗೆಯುವುದರಲ್ಲಿ ನಿಷ್ಣಾತರಾಗಿದ್ದ ಛಾಯಾಗ್ರಾಹಕ ಮುಕುಂದ ನಮ್ಮನ್ನಗಲಿ ವರ್ಷವೊಂದು ಕಳೆದಿದೆ...

ವೈದೇಹಿ

ನೆನಪು

ಮಧ್ಯರಾತ್ರಿಯಾಗಿದೆ. ನಿದ್ದೆ ಬೀಳುತ್ತಿಲ್ಲ. ವರ್ಷಗಳು ಎಷ್ಟು ಬೇಗ ಕಳೆಯುತ್ತವೆ! ನಮ್ಮ ಮುಕುಂದ ಹೋಗಿಯೂ (ಎಲ್ಲಿಗೆ?) ವರ್ಷ ಆಗಿಯಾಯಿತು. ಅಂದಹಾಗೆ-ಪಂಚಾಂಗದ ಪ್ರಕಾರ (ಇಂಗ್ಲಿಷ್ ತಾರೀಕು 18.7.2023) ಮುಕುಂದರ ವರ್ಷಾಂತಿಕ. ಒಂದಿಷ್ಟೂ ಗದ್ದಲ ಗೌಜಿಯಿಲ್ಲದೆ, ನಿರಪೇಕ್ಷೆಯಿಂದ, ಯಾರಿಗೂ ಅಲ್ಲ, ಯಾರಿಗಾಗಿಯೂ ಅಲ್ಲ, ತನ್ನ ತೀವ್ರ ಆಸಕ್ತಿಗೇ ಮಣಿದು ಕನ್ನಡದ ದೊಡ್ಡ ಕೆಲಸ ಮಾಡಿ ಹೊರಟು ಹೋದ ಆತನ 'ಮುಖಮುದ್ರೆ' ಕೃತಿ ಇಲ್ಲೇ ಎದುರಲ್ಲೇ ಇದೆ. ನೋಡುತ್ತ ನೋಡುತ್ತ ಏನೋ ತಳಮಳ.

ಅವರ ಪರಿಚಯವಾಗಿದ್ದು ಹೆಗ್ಗೋಡಿನಲ್ಲಿಯೇ. ಸಾಹಿತಿಗಳ ಅಂತರ್ಭಾವ ಚಿತ್ರ ತೆಗೆಯೋದರಲ್ಲಿ ನಿಷ್ಣಾತರು ಎಂದು ಯಾರೊ ಪರಿಚಯಿಸಿದ್ದರು. ಆಗಲೇ ಹೆಗ್ಗೋಡಿನಲ್ಲಿ ಅವರು ತೆಗೆದ ಕೆಲ ಫೋಟೊಗಳನ್ನು ನೋಡಿದ್ದೆ. ಸ್ಥೂಲಕಾಯ, ತಡೆತಡೆದು ಉಚಿತ ಶಬ್ದ ಸಿಗುವವರೆಗೂ ಕಾದು ಮಾತಾಡುವ ಸಾವಧಾನದ ಪರಿ, ಎರಡೂ ಕೈ ಬೀಸಿ ಕತ್ತು ಅರೆಬಾಗಿಸಿ ಅರೆನೇರನೆ ನಡೆವ ಬೀಸ ನಡಿಗೆಯ ಮುಕುಂದ. ಪಕ್ಕದಲ್ಲೇ ತುಸು ತೂಗು ನಡಿಗೆಯ, ಉದ್ದ ನಿಲುವಿನ ನಗುಮೊಗದ ಬಡನಡುವಿನ ಮಡದಿ ಉಮಾ. ಫೋಟೊಗ್ರಫಿಯಲ್ಲಿ ಪರಮಾಸಕ್ತ, ನೀನಾಸಂ ಚಿತ್ರ ರಸಗ್ರಹಣ ಶಿಬಿರಗಳಲ್ಲಿ ಅನೇಕ ಬಾರಿ ಉಪನ್ಯಾಸ ನೀಡಿದವರು, ಸಂಗೀತ, ಸಿನಿಮಾ ಮತ್ತು ಸಾಹಿತ್ಯ-ಒಟ್ಟು ಕಲಾ ಪ್ರಕಾರಗಳ ಅಪೂರ್ವ ರಸಗ್ರಾಹಿ ಅಂತೆಲ್ಲ ಕೇಳಿದೆ. ಸಣ್ಣ ಸಣ್ಣ ಮಾತುಕತೆಗಳಲ್ಲೇ ನಮ್ಮ ಅಂದಿನ ಭೇಟಿ ಮುಗಿಯಿತು.

ಆದರೆ ಈತ ಒಂದು ದಿನ ನನ್ನ ಫೋಟೊ ಕೂಡ ತೆಗೆಯುತ್ತಾರೆಂಬ ಎಣಿಕೆಯೇ ನನಗಿರಲಿಲ್ಲ.

ಅದು 1993ರ ನವೆಂಬರ್ ತಿಂಗಳೆಂದು ಕಾಣುತ್ತದೆ. ಮಡಿಕೇರಿಯ ಕಾವೇರಿ ಭವನದಲ್ಲಿ ಎರಡು ದಿನಗಳ ಕಾಲ ನೀನಾಸಂ ವತಿಯಿಂದ ಸಾಹಿತ್ಯ ಸಂವಾದ, ಕತೆ, ಕಾವ್ಯ ಗೋಷ್ಠಿ ಇತ್ಯಾದಿ ನಡೆಯಿತು. ನಾನದರಲ್ಲಿ ಭಾಗವಹಿಸಿದ್ದೆ. ಅಲ್ಲಿ ಮುಕುಂದರೂ ಬಂದಿದ್ದರು. ಅವತ್ತು ಮಧ್ಯಾಹ್ನ ಸುಮಾರು ಮೂರು ಗಂಟೆಯ ಹೊತ್ತಿಗೆ ಮುಕುಂದ ನನ್ನ ಬಳಿ ಬಂದು, 'ನಿಮ್ಮ ಫೋಟೊ ತೆಗೆಯಬೇಕು ಅಂತಿದೆ, ಬರುವಿರ?' ಕೇಳಿದರು. ಅವರು ಕೇಳುವ ಶೈಲಿ ಹೇಗಂದರೆ, ಅದರಲ್ಲೊಂದು ಸಂಕೋಚ, ವಿಶ್ವಾಸ, ಪ್ರೀತಿ ಎಲ್ಲವೂ ಬೆರೆತಂತೆ.

ವ್ಯಕ್ತಿಗಳ ಫೋಟೊ ತೆಗೆಯುವ ಹೊತ್ತಿಗೆ ಮಾತಾಡಿಸಲು ಹೆಚ್ಚಾಗಿ ಅವರ ಜೊತೆಗಿರುವುದು ಪತ್ನಿ ಉಮಾ. ಅವಳಿದ್ದರೆ ತನಗೆ ಬಲ ಎನ್ನುತ್ತಿದ್ದರು ಮುಕುಂದ. ಅದೊಂದು ಅಪೂರ್ವ ಜೋಡಿ. ಪತಿಯ ಕಾವ್ಯಾತ್ಮಕ ಫೋಟೋಗ್ರಫಿಯನ್ನು ನೋಡು ನೋಡುತ್ತ ನಿಧಾನವಾಗಿ ತನ್ನೊಳಗಿನ ಕವಿಯನ್ನು ಎಚ್ಚರಿಸಿಕೊಂಡ ಉಮಾ, ಮುಂದೆ ಕವಿತೆಗಳನ್ನೂ ಬರೆದು ಪ್ರಕಟಿಸಿಯೂ ಬಿಟ್ಟರು. ಮುಕುಂದರ ವಿಚಾರ ಹೇಳುತ್ತ ಉಮಾ ವಿಚಾರಕ್ಕೆ ಬಂದೆನೆ! ಬರದೆ ಮತ್ತೆ? ಅವರಿಬ್ಬರೂ ಇದ್ದಿದ್ದರಲ್ಲ ಹಾಗೆ, ಇಬ್ಬರಲ್ಲ ತಾವು, ಒಬ್ಬರು ಎಂಬಂತೆ!

ಮುಕುಂದ ಮತ್ತು ಉಮಾ ಜೊತೆಜೊತೆಯಲ್ಲಿ ತಾವಾಗಿಯೇ ಇಷ್ಟಪಟ್ಟು ಅದೆಷ್ಟು ಬರಹಗಾರರ ಭಾವಚಿತ್ರ ತೆಗೆದಿದ್ದಾರೋ. ಆಯುಷ್ಯದ ಎಷ್ಟು ಭಾಗವನ್ನು ಅದಕ್ಕಾಗಿ ವ್ಯಯಿಸಿದ್ದಾರೋ. ಕೇವಲ ಗೌರವ ಮತ್ತು ಪ್ರೀತಿ ಎರಡೇ ಕಾರಣಭಾರದಿಂದ. ಮುಕುಂದರೇ ಬೇಕೆಂದು ಹಟ ಬಿದ್ದು ಫೋಟೊ ತೆಗೆಸಿಕೊಂಡಿರುವ ಕರ್ನಾಟಕದ ವರಿಷ್ಠರು ಎಷ್ಟು ಮಂದಿ!

ಒಮ್ಮೆ ಶಿವರಾಮ ಕಾರಂತ, ಕೋ.ಲ. ಕಾರಂತ, ಸೇಡಿಯಾಪು ಅವರ ಫೋಟೊ ತೆಗೆಯಲು ಉಡುಪಿಗೆ ಬಂದಿದ್ದರು ಮುಕುಂದ. ಆ ಸಮಯದಲ್ಲಿ ಲೇಖಕಿ ರಾಜವಾಡೆಯವರ ಫೋಟೊ ತೆಗೆಯಬೇಕೆಂದು ಇದ್ದೂ ಏನೋ ತಡೆ ಬಂದು ಆಗಲಿಲ್ಲ. ಇನ್ನೊಮ್ಮೆ ತೆಗೆಯುವ ಆಸೆಯಿಂದ ಹೊರಟುಹೋದರು. ಆದರೆ ಕೆಲ ಸಮಯದಲ್ಲೇ ರಾಜವಾಡೆಯವರು ತೀರಿಕೊಂಡು ಆ ಆಸೆ ಪೂರೈಸಲೇ ಇಲ್ಲ.

*

ಹ್ಹಾ. ಅಂದು ಹಾಗೆ ಕೇಳಿದರಲ್ಲ. ಫೋಟೊ, ಯಾರದು? (. . .ಎಲ್ಲ ಬಿಟ್ಟು ನನ್ನದಾ?) ನನಗೆ ಗಾಬರಿ. ಇನ್ನೂ ನನಗದೆಲ್ಲ ಹೊಸತು. ಅಲ್ಲಿಯೇ ಸುಬ್ಬಣ್ಣನವರು ಕುಳಿತಿದ್ದರು. ಮುಕುಂದ 'ಗಾಬರಿ ಬೇಡ. ನೀವು ಸುಮ್ಮನೆ ಸುಬ್ಬಣ್ಣನವರೊಡನೆ ಮಾತಾಡುತ್ತಿರಿ. ಸಾಕು' ಎಂದರು. ಸುಬ್ಬಣ್ಣನವರ ಎದುರಲ್ಲಿ ಕೂಡಿಸಿ 'ದಯವಿಟ್ಟು ಏನಾದರೂ ಮಾತಾಡುತ್ತಿರಿ ಸರ್. ನಾನು ಫೋಟೊ ತೆಗೆಯುತ್ತಿರುತ್ತೇನೆ' ಎಂದರು. ದೇವರೆ! ಆವರಿಸಿ ಬಂದ ಇನ್ನಷ್ಟು ಗಾಬರಿ, ಹೇಗೆ ಹೇಳುವುದು! ಈಗ ಸುಬ್ಬಣ್ಣನವರೇ ನನ್ನ ಭಯ ಬಿಡಿಸಲು ಲೋಕಾಭಿರಾಮವಾಗಿ ಮಾತಾಡತೊಡಗಿದರು. ನಾನೂ ನಿಧಾನವಾಗಿ ತುಸು ಹಗುರಾಗುತ್ತ ಹೋದೆ. ಆಚಿನಿಂದ ಒಂದೇ ಸಮ ಕ್ಲಿಕ್ ಕ್ಲಿಕ್, ಮೊದಮೊದಲು ಕೇಳಿಸುತ್ತ, ಮಾತಿನಲ್ಲಿ ತೊಡಗಿಕೊಂಡ ಹಾಗೂ ಕೇಳದೆ ಹೋಯಿತು. ಫೋಟೋ ತೆಗೆಯುತ್ತ ಹೋದರು ಮುಕುಂದ. ಆಯ್ದ ಫೋಟೊಗಳನ್ನು ಕಳಿಸಿಕೊಟ್ಟರು ಕೂಡ. ಮಾತಿನಲ್ಲಿ ಮೈಮರೆಯುವಂತೆ ಮಾಡಿ, ಮುಕುಂದ ವ್ಯಕ್ತಿಚಿತ್ರ ತೆಗೆಯುವ ವಿಧಾನ ಇದು.



ನಮ್ಮಮ್ಮ ನಿಧಾನವಾಗಿ ನಂದುತ್ತ ಇದ್ದಳು. ಹೆಚ್ಚು ಕಾಲ ಅವಳಿರುವುದಿಲ್ಲ ಎಂಬುದನ್ನು ನೆನೆದರೂ ಸಾಕು, ಚೇತನವೇ ಸ್ತಬ್ಧವಾಗುತ್ತಿದ್ದ ಸ್ಥಿತಿ. ನನಗೆ ಮುಕುಂದ ಅವಳ ಚಿತ್ರ ತೆಗೆದುಕೊಟ್ಟರೆ ಆದೀತು ಎಂಬ ಹಂಬಲವಾಯ್ತು. ಮುಕುಂದರ ಬಳಿ ಎಲ್ಲ ಹೇಳಿ, ಅವಳ ಭಾವಚಿತ್ರ ತೆಗೆದುಕೊಡುವಿರ? ಎಂದು ಕೋರಿದೆ. ತನ್ನ ವಸ್ತುವಿಷಯ ಹಾಗಿಲ್ಲದಿದ್ದರೂ ತಕ್ಷಣ ಒಪ್ಪಿಕೊಂಡರು. ಒಂದು ದಿನವಿಡೀ ಕುಂದಾಪುರದ ನನ್ನ ತವರು ಮನೆಯಲ್ಲಿ ಕಳೆದು, ಅಮ್ಮನ ಒಂದಷ್ಟು ಫೋಟೊಗಳನ್ನು ತೆಗೆದರು. ರಾತ್ರಿ ಅವರು ಹೊರಟು ಹೋದ ಮೇಲೆ ಅಮ್ಮ 'ಎಷ್ಟು ಸಮಾಧಾನಿ!' ಎಂದು ಉದ್ಗರಿಸಿದ್ದು ನೆನಪಾಗುತ್ತಿದೆ. ಅಮ್ಮನ ವಿವಿಧ ಭಾವಗಳ ಆ ಅದ್ಭುತ ಚಿತ್ರಗಳು ಈಗಲೂ ಅವಳ ಮಕ್ಕಳ ಜೊತೆಗಿವೆ.

*

ಎಷ್ಟು ಪತ್ರಿಕೆಗಳು ಅಗತ್ಯ ಬಿದ್ದಾಗ ಅವರ ಬಳಿ ಬರಹಗಾರರ ಫೋಟೊ ಕೇಳಿ ಪ್ರಕಟಿಸಿರಬಹುದು; ಎಷ್ಟು ಪುಸ್ತಕಗಳ ಮುಖಪುಟಕ್ಕೆ ಅವರು ತೆಗೆದ ಫೋಟೊ ಬಳಸಿರಬಹುದು? ಧೇನಿಸುತ್ತಿದ್ದಂತೆ, ಮನದೆದುರು ಕಾಣುವುದು ಚರ್ಚೆಯನ್ನು ಹೊರತುಪಡಿಸಿ ಸದಾ ಮಿತಭಾಷಿ ಮುಕುಂದರು. ತನ್ನ ಬಗ್ಗೆ ಚಕಾರ ಹೇಳಿಕೊಳ್ಳದವರು. ಅವಕಾಶವಾದ ಎಂಬುದು ಅವರೆದುರು ಸುಳಿಯದು. ಬೇರೊಬ್ಬರ ಮಾತಿಗೆ ಕಿವಿಯಾಗುವ ಅವರು ಮುಖ್ಯರಾಗುವುದು ಯಾರನ್ನೂ ನೋಯಿಸದೆ ಇರುವ ಸ್ವಭಾವಕ್ಕೆ. ಅವರು ತನ್ನಲ್ಲಿ ಪೋಷಿಸಿಕೊಂಡು ಬಂದ ಸದಭಿರುಚಿಗೆ, ಪ್ರಶಸ್ತ ರಸಗ್ರಾಹಿತ್ವಕ್ಕೆ. ಮನೆಯಲ್ಲಿ ಪ್ರಪಂಚದ ಅತ್ಯುತ್ತಮ ಚಿತ್ರಗಳ ಸಂಗ್ರಹವಿಟ್ಟದ್ದ ಅವರು ಮಾತಾಡುವುದಿದ್ದರೆ-ನೋಡಿದ ಚಿತ್ರ, ನಾಟಕ, ಓದಿದ ಕತೆ-ಕಾದಂಬರಿ, ಕೇಳಿದ ಒಂದು ಅತ್ಯುತ್ತಮ ಸಂಗೀತ, ಇತ್ಯಾದಿಗಳ ಕುರಿತು. ಒಂದು ಸಣ್ಣಕತೆಯನ್ನೂ ಅವರು ಅದರ ಮೂಲಾದಿಮೂಲದ ಜಾಡು ಹಿಡಿದು ಶಬ್ದಗಳ ಆಂತರ್ಯ ಭಾವ ಹೊರಗೆಳೆದು, ಅದರ ಸೋಲನ್ನೂ ಕರಾರುವಾಕ್ಕಾಗಿ ಪತ್ತೆಹಚ್ಚಿ, ಸಣ್ಣದೆಂದು ಸದರ ಮಾಡದೆ ದೀರ್ಘವಾಗಿ ಚರ್ಚಿಸುವ ಪರಿ ಅಚ್ಚರಿ ತರಿಸುತಿತ್ತು.

*

ಸದಾ ನಮ್ಮ ಆರೋಗ್ಯದ ಬಗ್ಗೆ ವಿಚಾರಿಸುತಿದ್ದರು ಅವರು, ಹೆಲ್ತ್ ಇನ್ಶೂರೆನ್ಸಿನ ಕೆಲ ಸಂಗತಿಗಳನ್ನು ನಮಗೆ ತಿಳಿಸಿ ಅತ್ತ ಗಮನ ಹರಿಸುವಂತೆ ಒತ್ತಾಯಿಸುತಿದ್ದರು. ಅಂಥ ಅರಿವಿನವರನ್ನೂ ವಿಧಿ ಅತ್ತಿತ್ತ ನೋಡುವುದರೊಳಗೆ ಸ್ವತಃ ಅವರಿಗೂ ತಿಳಿಯದಂತೆ, ಹೇಗೆ ಕಣ್ಣು ಹಾಕಿ ಹಾರಿಸಿಕೊಂಡೇ ಹೋಯ್ತು! ತಮ್ಮ ಅಭಿರುಚಿ, ಫೋಟೋಗ್ರಫಿಯ ಒಳಗಣ್ಣು, ಸಭ್ಯತೆಗಳನ್ನು ಪುತ್ರ ಪ್ರತೀಕನಿಗೂ ದಾಟಿಸಿ ಕೃತಕೃತ್ಯತೆ ಅನುಭವಿಸುತ್ತಿರುವಾಗಲೇ ಥಟ್ಟಂತ ಕರೆ ಬಂದಂತೆ ಹೊರಟೇಹೋದರು.

ಅವರ 'ಮುಖಮುದ್ರೆ' ಸಂಕಲನದ ಮುಖಪುಟದಲ್ಲಿ ಮುಕುಂದರು ಕ್ಯಾಮೆರಾ ಕಣ್ಣಿನಿಂದ ಯಾವುದೋ ವಸ್ತುವಿಶೇಷವನ್ನು ತದೇಕ ನೋಡುತ್ತಿದ್ದಾರೆ. ಅಂದೊಮ್ಮೆ ಮನೆ ಹೊರಗೆ ಬೆಳಕಿನ ಹರಿವಿನಲ್ಲಿ ಉಮಾ ಬರುತ್ತಿರುವಾಗ, ಬೆಳಕಿನ ಚೆಲುವಿನ್ಯಾಸ ಕಂಡೊಡನೆ ಗರಿಗೆದರುವ ಫೋಟೋಗ್ರಾಫರ್ ಮುಕುಂದ ಅವಳನ್ನು ನಿಲ್ಲು ನಿಲ್ಲು ಎಂದು ತಡೆದು, ಫೋಟೊ ತೆಗೆಯಹೊರಟದ್ದು, ಇದನ್ನು ನೋಡಿದ ಪ್ರತೀಕ ಓಡಿ ಬಂದು ತಾಯಿಯ ಫೋಟೊ ತೆಗೆಯುತ್ತಿದ್ದ ತಂದೆಯ ಫೋಟೊ ತೆಗೆದದ್ದು ಅಂತೆಲ್ಲ ಪ್ರಸಂಗ ಈ ಫೋಟೊದ ಹಿಂದಿದೆ. ಒಂದು ಬಗೆಯಲ್ಲಿ ಮೂವರೂ ಹೀಗೆ ಈ ಮುಖಪುಟದಲ್ಲಿ ಒಟ್ಟಿಗಿದ್ದಾರೆ. . .

ನೋಡುತ್ತ ಕುಳಿತಿದೆ ಮನಸ್ಸು, ಹನಿಗೂಡಿದೆ. ಒಳಮುಖವಾಗಿದೆ...

ಯುಆರ್‌ಎ ಚಿಂತನ ವಿಕಾಸಕ್ಕೆ ಹಿಡಿದ ಕನ್ನಡಿ

ನಿತ್ಯಾನಂದ ಬಿ. ಶೆಟ್ಟಿ

ಒಳನೋಟ


ಅನಂತಮೂರ್ತಿಯವರ ಚಿಂತನೆಯನ್ನು ಕ್ರಮಬದ್ಧಗೊಳಿಸಿ ಜೋಡಿಸಿದಂತಿರುವ ಈ ಸಂಕಲನವನ್ನು ಎನ್. ಮನು ಚಕ್ರವರ್ತಿ ಮತ್ತು ಚಂದನ್ ಗೌಡ ಸಂಪಾದಿಸಿದ್ದಾರೆ. ಕಾವ್ಯ, ಸಣ್ಣಕಥೆಗಳು, ಲೇಖನ-ಪ್ರಬಂಧ-ಭಾಷಣಗಳು, ಕಾದಂಬರಿ ಮತ್ತು ಆತ್ಮಕಥೆಯ ಕೆಲವು ಆಯ್ದ ಭಾಗಗಳು ಇಲ್ಲಿವೆ. ಮುನ್ನೂರು ಪುಟಗಳ ಈ ಕೃತಿ ಇಂಗ್ಲಿಷ್ ಜಗತ್ತಿಗೆ ಅನಂತಮೂರ್ತಿಯವರ ಸೃಜನಶೀಲ ಮತ್ತು ಬೌದ್ಧಿಕ ಕಸುವನ್ನು ಪರಿಚಯಿಸುವ ಪುಸ್ತಕವೂ ಆಗಿದೆ. ಅನಂತಮೂರ್ತಿಯವರನ್ನು ಓದುವ ಇಂಗ್ಲಿಷ್‌ನ ಹೊಸ ಓದುಗರನ್ನು ಗಮನದಲ್ಲಿಟ್ಟುಕೊಂಡು ಸಂಪಾದಕರು ಬರೆದ ಏಳು ಪುಟಗಳ ಪ್ರವೇಶಿಕೆ ಲೇಖಕರನ್ನು ಮತ್ತು ಪುಸ್ತಕವನ್ನು ಸೂಕ್ಷ್ಮವಾಗಿ ಪರಿಚಯಿಸುತ್ತದೆ.

ಸಾಹಿತ್ಯ, ಭಾಷೆ-ಶಿಕ್ಷಣ, ರಾಜಕಾರಣ-ಧರ್ಮ-ಅಧ್ಯಾತ್ಮ, ಪರಿಸರ-ಅಭಿವೃದ್ಧಿ, ಕೋಮುವಾದ-ರಾಷ್ಟ್ರೀಯತೆ ಮೊದಲಾದ ಹತ್ತು-ಹಲವು ಸಮಸ್ಯೆಗಳ ಬಗ್ಗೆ ಆತಂಕ ಪಡುತ್ತ, ಉದ್ವೇಗಕ್ಕೊಳಗಾಗುತ್ತ, ಒದ್ದಾಡುತ್ತ, ಆರು ದಶಕಗಳುದ್ದಕ್ಕೂ ನಿರಂತರವಾಗಿ ಕ್ರಿಯಾಶೀಲವಾಗಿದ್ದ ನಮ್ಮ ಕಾಲದ ಪ್ರಮುಖ ಸಾರ್ವಜನಿಕ ಬುದ್ಧಿಜೀವಿಯಾದ ಅನಂತಮೂರ್ತಿಯವರ ಸಮಗ್ರ ವಾಙ್ಮಯದಿಂದ ಸತ್ವಭರಿತ ಬರವಣಿಗೆಗಳನ್ನು ಆಯುವುದು ಯಾರಿಗಾದರೂ ಸವಾಲಿನ ಕೆಲಸವೇ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಅನಂತಮೂರ್ತಿಯವರ ಆಯ್ದ ಬರೆಹಗಳ ಸಂಕಲನಗಳು ಈಗಾಗಲೇ ಬಂದಿವೆ. ಈ ಪುಸ್ತಕ ಆ ಸಾಲಿಗೆ ಹೊಚ್ಚಹೊಸ ಸೇರ್ಪಡೆಯಾಗಿದ್ದರೂ ಅನಂತಮೂರ್ತಿಯವರ ಬಗ್ಗೆ ಅಧ್ಯಯನ ಮಾಡಿದ, ಪುಸ್ತಕಗಳನ್ನು ಪ್ರಕಟಿಸಿದ ಮನು ಮತ್ತು ಚಂದನ್ 'ತಜ್ಞ ಓದುಗ'ರಾಗಿಯೇ ಈ ಸಂಪಾದನೆಯನ್ನು ಮಾಡಿದ್ದಾರೆ.

ಪುಸ್ತಕದ ಪ್ರವೇಶಿಕೆಯ ಮೊದಲ ಸಾಲು 'ಅನಂತಮೂರ್ತಿಯೆಂದರೆ ಯಾರು?' ಎಂಬ ಪ್ರಾಥಮಿಕ ಮಾಹಿತಿಯಿಂದ ಆರಂಭವಾಗಿ, ಅಂತ್ಯದಲ್ಲಿ 'ಅನಂತಮೂರ್ತಿಯೆಂದರೆ ಏನು?' ಎಂಬ ಪ್ರಶ್ನೆಯ ಕಡೆಗೆ ಚಲಿಸಿದೆ. ಜೊತೆಗೆ 'ಬುದ್ಧಿಜೀವಿಯಾಗುವುದೆಂದರೆ ಏನು' ಮತ್ತು 'ಕ್ರಿಯಾತ್ಮಕವಾಗಿರುವುದೆಂದರೆ ಏನು' ಎಂಬೆರಡು ಮುಖ್ಯ ಪ್ರಶ್ನೆಗಳನ್ನೂ ಈ ಸಂಕಲನ ಎತ್ತಿಕೊಂಡಿದೆ.

ಆತ್ಮಜ್ಞಾನದ ಅಗತ್ಯವೇ ಇಲ್ಲವೇನೋ ಎನ್ನಿಸುವಷ್ಟು ಉಗುರು ಬೆಚ್ಚಗಿನ ಮಾತಿನ ಸುಖದಲ್ಲಿ ಮೈಮರೆತ ಜನರ ನಡುವೆ, ಅಬ್ಬರದ ಮಾತಿನ ಮೊನೆಯಿಂದ ತಿವಿಯುತ್ತಲೇ ಬರುವ ಜನರ ನಡುವೆ; ನಮ್ಮೆಲ್ಲರ ಅಂತರಂಗವನ್ನು ಕಲಕುವಂತಹ ಮಾತುಗಳನ್ನು, ಪಿಸುಧ್ವನಿಯಲ್ಲಿ ತನಗೆ ತಾನೇ ಆಡುತ್ತಿದ್ದಾರೋ ಎಂಬಂತಿದ್ದ ಅನಂತಮೂರ್ತಿಯವರ ಮುಖ್ಯವಾದ ಮಾತು-ಕಥೆಗಳು ಸಮರ್ಥವಾಗಿ ಅನುವಾದಗೊಂಡು ಈ ಸಂಕಲನದಲ್ಲಿವೆ. ಜೊತೆಗೆ 'ಯೂನಿವರ್ಸಿಟಿ ಆಫ್ ಬರ್ಮಿಂಗ್‌ಹ್ಯಾಮ್'ಗೆ ಅನಂತಮೂರ್ತಿಯವರು ಸಲ್ಲಿಸಿದ 'Politics and Fiction in the 1930s- Studies in Christopher Isherwood and Edward Upward'(1960) ಪಿಎಚ್‌.ಡಿ ಪ್ರಬಂಧದ ಆಂಶಿಕ ಭಾಗವೂ ಇರುವುದು ಪುಸ್ತಕದ ಮಹತ್ವವನ್ನು ಹೆಚ್ಚಿಸಿದೆ.

ತಮ್ಮ ಮೊದಲ ಕಾದಂಬರಿಯಾದ 'ಸಂಸ್ಕಾರ'(1965)ದಲ್ಲಿ ಕ್ರಿಟಿಕಲ್ ಇನ್‌ಸೈಡರ್ ಆದ ತರುಣ ಮಾಧ್ವ ಬ್ರಾಹ್ಮಣನೇ ಆಗಿದ್ದ ಅನಂತಮೂರ್ತಿಯವರು, 'ಬೆತ್ತಲೆ ಪೂಜೆ ಯಾಕೆ ಕೂಡದು'(1986) ಲೇಖನದ ಸಂದರ್ಭದಲ್ಲಿ 'ಪ್ರಜಾಸತ್ತಾತ್ಮಕ ಸಮಾಜವಾದಿ'ಯಾಗಿಯೇ ಆ ಘಟನೆಯನ್ನು ಪರಿಭಾವಿಸಿದ್ದರು. ತಮ್ಮ ಕೊನೆಯ 'ಹಿಂದುತ್ವ ಅಥವಾ ಹಿಂದ್ ಸ್ವರಾಜ್?'(2014) ಕೃತಿಯಲ್ಲಿ ಮಹಾತ್ಮ ಗಾಂಧಿಯವರು ಪ್ರತಿನಿಧಿಸಿದ ಆಳವಾದ ಆಧ್ಯಾತ್ಮಿಕ ಪ್ರಜ್ಞೆಯನ್ನು ಹೊಂದಿದ್ದವರಾಗಿದ್ದರು. ಈ ಎಲ್ಲವನ್ನು ಒಳಗೊಳ್ಳುತ್ತ ಅನಂತಮೂರ್ತಿಯವರ ಚಿಂತನೆಯ ವಿಕಾಸವನ್ನೂ ಈ ಸಂಪುಟ ಗುರುತಿಸಿದೆ.



ಪು: 302
₹899

ದಿ ಎಸೆನ್ಶಿಯಲ್ ಯು.ಆರ್. ಅನಂತಮೂರ್ತಿ

ಸಂ : ಎನ್. ಮನು ಚಕ್ರವರ್ತಿ, ಚಂದನ್ ಗೌಡ

ಪ್ರ : ಅಲೆಫ್ ಬುಕ್ ಕಂಪನಿ

ಸಂ : +91 11 49226666

ಹಕ್ಕಿ ಡಿಕ್ಕಿ...

10ನೇ ಪುಟದಿಂದ...

ಆಗ ಅವು ವಿಮಾನ ನಿಲ್ದಾಣಗಳ ಕಡೆ ಸುಳಿಯುವುದೂ ಇಲ್ಲ. ನಿಲ್ದಾಣಗಳ ಸುತ್ತಲಿನ ನೀರಿನ ಕೆರೆ, ಕಾಲುವೆಗಳಿಗೆ ಬರುವ ಹಕ್ಕಿಗಳು ಸಹ ವಿಮಾನ ಹಾರಾಟಕ್ಕೆ ಆಗಾಗ ಅಡ್ಡಿ ಮಾಡುತ್ತಲೇ ಇರುತ್ತವೆ.

ಇದುವರೆಗೂ ಸಂಭವಿಸಿರುವ ದುರಂತಗಳ ಅಧ್ಯಯನದಿಂದ ಕೆಳ ಕಂಡ ಅಂಶಗಳು ಬೆಳಕಿಗೆ ಬಂದಿವೆ. ಚಲನೆಯ ನಿಯಮದಂತೆ ಅರ್ಧ ಕೆ.ಜಿ. ತೂಕದ ಹಕ್ಕಿ ಗಂಟೆಗೆ 965 ಕಿ.ಮೀ. ವೇಗದಲ್ಲಿ ಹಾರುವ ಜೆಂಬೋಜೆಟ್ ವಿಮಾನಕ್ಕೆ ಬಡಿದರೆ ಅದರಿಂದ 12 ಟನ್‌ನಷ್ಟು ಬಲ ವಿಮಾನದ ಮೇಲೆ ಬಿದ್ದಂತಾಗುತ್ತದೆ. ಅಂತೆಯೇ 2 ಕೆ.ಜಿ. ತೂಗುವ ಹಕ್ಕಿ ಗಂಟೆಗೆ 900 ಕಿ.ಮೀ. ವೇಗದಲ್ಲಿ ಹಾರುವ ವಿಮಾನಕ್ಕೆ ಡಿಕ್ಕಿ ಹೊಡೆದರೆ ಪ್ರಯೋಗಗೊಳ್ಳುವ ಬಲ 50 ಟನ್‌ಗಳಷ್ಟಿದ್ದು, ವಿಮಾನ ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಗಿ ನಿಯಂತ್ರಣ ತಪ್ಪಿ ನೆಲಕ್ಕಪ್ಪಳಿಸುತ್ತದೆ.

ತಡೆಗೆ ಕ್ರಮ

ಹಕ್ಕಿ ಡಿಕ್ಕಿಯಿಂದಾಗುವ ವಿಮಾನಾಪಘಾತ ತಪ್ಪಿಸಲು ವಿಮಾನದ ವಿನ್ಯಾಸವನ್ನೇ ಬದಲಿಸಬೇಕೆಂಬುದು ತಜ್ಞರ ಅಭಿಪ್ರಾಯ. ಹಕ್ಕಿಗಳು ಡಿಕ್ಕಿ ಹೊಡೆದಾಗ ವಿಮಾನದ ವಿಂಡ್ ಶೀಲ್ಡ್ (ಮುಂಭಾಗದ ಗಾಜು) ಗೆ ಹಾನಿಯಾಗದಂತೆ ತಡೆಯಲು ವಿಂಡ್‌ಶೀಲ್ಡ್‌ನ ಗಟ್ಟಿತನ ನೀಡುವ ಪಾಲಿವಿನೈಲ್ ಬ್ಯೂಟ್ರೈಲ್ ರಸಾಯನಿಕವನ್ನು ಉಪಯೋಗಿಸಿ ನಿರ್ಮಿಸಲಾಗುತ್ತಿದೆ. ಘರ್ಷಣೆ ಕಡಿಮೆ ಮಾಡಲು ಎಂಜಿನ್‌ಗಳ ಒಳಭಾಗದಲ್ಲಿ ಸಾಫ್ಟ್ ಲೈನಿಂಗ್ ಹಾಕಲಾಗುತ್ತಿದೆ.



ವಾಣಿಜ್ಯ ಉದ್ದೇಶಗಳಿಗೆ ಬಳಸಲಾಗುವ ಬೃಹತ್ ಜೆಟ್ ವಿಮಾನಗಳ ಎಂಜಿನ್‌ನ ಬಳಿ ಎರಡು ಕೆ.ಜಿ. ತೂಗುವ ಹಕ್ಕಿಯೇನಾದರೂ ಬಂದರೆ ಹಕ್ಕಿಯು ಎಂಜಿನ್ ಭಾಗಕ್ಕೆ ಅಪ್ಪಳಿಸುವ ವೇಳೆಗೆ ಎಂಜಿನ್‌ಗಳು ಸ್ವಯಂ ಸ್ಥಗಿತಗೊಂಡು ಬಿಡುತ್ತವೆ. ಆಗ ಎಂಜಿನ್‌ಗೆ ಹಾನಿಯಾಗುವುದಿಲ್ಲ. ಎಂಜಿನ್ ಸ್ಥಗಿತಗೊಂಡರೂ ಸುರಕ್ಷಿತ ಲ್ಯಾಂಡಿಂಗ್ ಮಾಡಿದ ಅನೇಕ ಉದಾಹರಣೆಗಳಿವೆ. ವಿಮಾನದ ಮುಂಭಾಗದಿಂದ ಲೇಸರ್ ಕಿರಣಗಳನ್ನು ಹೊಮ್ಮಿಸಿ ಹಕ್ಕಿಗಳನ್ನು ವಿಮಾನದ ದಾರಿಯಿಂದ ದೂರಸರಿಯುವಂತೆ ಮಾಡುವ ವ್ಯವಸ್ಥೆಯೂ ಇದೆ. ಆದರೆ ಲೇಸರ್ ಮತ್ತು ಮೈಕ್ರೋ ತರಂಗಗಳ ಬಳಕೆಯಿಂದ ನಿಲ್ದಾಣಗಳ ರನ್‌ವೇಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಆರೋಗ್ಯಕ್ಕೆ ಹಾನಿ ಸಂಭವಿಸಬಹುದಾದ್ದರಿಂದ ಅವುಗಳ ಬಳಕೆ ಅಷ್ಟು ಸರಿಯಲ್ಲ ಎಂಬ ಅಭಿಪ್ರಾಯ ವಿಜ್ಞಾನಿಗಳದ್ದು.

ವಿಮಾನಗಳ ಹಂಗರ್(ತಂಗುದಾಣ)ಗಳಲ್ಲಿ ಸಾಕಷ್ಟು ತೆರೆದ ಕಿಟಕಿ, ಬಾಗಿಲುಗಳಿರುವುದರಿಂದ ಅಲ್ಲಿಯೂ ಹಕ್ಕಿಗಳು ಗೂಡು ಕಟ್ಟಿ ಸಂಸಾರ ಹೂಡುವುದಿದೆ. ಹಂಗರ್‌ಗಳಿಗೆ ಸುತ್ತಲೂ ಬಲೆ ಅಳವಡಿಸಿ ಹಕ್ಕಿಗಳ ಪ್ರವೇಶ ತಡೆಯಬಹುದು. ಹೊಲ-ಗದ್ದೆಗಳ ಬಳಿ ಬಳಸುವ ಬೆರ್ಚಪ್ಪಗಳನ್ನು ಬಳಸಿ ತಕ್ಕಮಟ್ಟಿಗೆ ಹಕ್ಕಿಗಳ ಹಾವಳಿ ತಡೆಯಬಹುದು. ಬೇಟೆಗಾರ ಹಕ್ಕಿ ಮತ್ತು ನಾಯಿಗಳನ್ನು ಭೂಭರ್ತಿ ತಾಣಗಳ ಬಳಿ ನಿಯೋಜಿಸಿ ವಿಮಾನಗಳಿಗೆ ಅಡ್ಡಿಪಡಿಸುವ ಹಕ್ಕಿಗಳನ್ನು ನಿಯಂತ್ರಿಸಬಹುದು. ಕೆಲವೊಮ್ಮೆ ಬೇಟೆಗಾರ ಹಕ್ಕಿಗಳ ಧ್ವನಿಯನ್ನು ಧ್ವನಿವರ್ಧಕಗಳ ಮೂಲಕ ಪ್ರಸಾರ ಮಾಡಿ ಹಕ್ಕಿಗಳನ್ನು ಓಡಿಸುವ ಪ್ರಯತ್ನ ನಡೆಯುತ್ತದೆ. ರನ್‌ವೇಗೆ ಅಡ್ಡಬರುವ ಹಕ್ಕಿಗಳನ್ನು ಓಡಿಸಲು 130 ಡೆಸಿಬಲ್‌ನಷ್ಟು ಕರ್ಕಶ ಶಬ್ದ ಹೊಮ್ಮಿಸುವ ಪ್ರೊಪೇನ್‌ಯುಕ್ತ ಪಟಾಕಿ ಹಾರಿಸುವುದು, ಪಿಸ್ತೂಲ್‌ನಿಂದ ನಕಲಿ ಗುಂಡು ಹಾರಿಸುವ ಪದ್ಧತಿಯೂ ಇದೆ. ಹಕ್ಕಿಗಳಿಗೆ ಸಹಿಸಲಾಗದಷ್ಟು ದುರ್ವಾಸನೆ ಬೀರುವ ಮೀಥೈಲ್ ಅನ್‌ಥ್ರಾನಿಲೇಟ್ ಮತ್ತು ಅಂಥ್ರಾಕ್ವಿನೊನ್ ರಸಾಯನಿಕಗಳನ್ನು ವಾತಾವರಣದಲ್ಲಿ ಸಿಂಪಡಿಸಿ ಹಕ್ಕಿಗಳನ್ನು ಓಡಿಸಬಹುದು. ಸಂಖ್ಯೆಯಲ್ಲಿ ಮಿತಿ ಮೀರಿದ ಹಕ್ಕಿಗಳನ್ನು ಸಾಮೂಹಿಕವಾಗಿ ವಧಿಸುವ ಕೆಲಸವೂ ಕೆಲವೊಮ್ಮೆ ನಡೆಯುತ್ತದೆ. ತೊಂಬತ್ತರ ದಶಕದ ಆರಂಭದಲ್ಲಿ ಜಾನ್ ಎಫ್. ಕೆನಡಿ ವಿಮಾನ ನಿಲ್ದಾಣದ ಬಳಿ ಎರಡು ವರ್ಷಗಳ ಅವಧಿಯಲ್ಲಿ 30000ಕ್ಕೂ ಹೆಚ್ಚು ಕಡಲ ಕಾಗೆಗಳನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಇದರಿಂದ ಸಿಟ್ಟಿಗೆದ್ದ ಪರಿಸರವಾದಿಗಳು ಸಿರಿವಂತರ ಶೀಘ್ರ ಪ್ರಯಾಣಕ್ಕೆ ಅಮೂಲ್ಯ ಪಕ್ಷಿ ಸಂಪತ್ತನ್ನು ನಾಶ ಮಾಡುವುದು ಎಷ್ಟು ಸರಿ ಎಂಬ ಪ್ರಶ್ನೆ ಎತ್ತಿ ಬೀದಿಗಿಳಿದು ಹೋರಾಟ ಮಾಡಿದ್ದರು.

ಮೊದಲ ಓದು


ಮಸ್ಕಿ ದಂಪತಿಯ ಮನೋಹರ ಲೋಕ

'ಕೊಡಗಿನ ವೇದಾ, ರಾಯಚೂರಿನ ಮನೋಹರ ಮಸ್ಕಿ ಹುಟ್ಟಿ ಬೆಳೆದ ಪರಿಸರವೇ ವಿಭಿನ್ನ. ಇಬ್ಬರೂ ಮದುವೆಯಾದ ಬಳಿಕ ಬದುಕು ಕಟ್ಟಿಕೊಂಡಿದ್ದು ಭದ್ರಾವತಿಯ ಗುಡ್ಡದಹಟ್ಟಿಯಲ್ಲಿ. ಇಲ್ಲೊಂದು ಸುಂದರ ಜಗತ್ತನ್ನು ಸೃಷ್ಟಿಸಿದ ವೇದಾ ಇಡೀ ಕೃಷಿ ಕೃತಿಯ ಉದ್ದಕ್ಕೂ ಕಾಡುತ್ತಾರೆ. ಈ ಕೃತಿ ಪಂಚಮವೇದದ ಹಸಿರು ಪಯಣ' ಹಾಗೆಂದು ಶಿವಾನಂದ ಕಳವೆ ಕೃತಿಯ ಕುರಿತು ಬೆನ್ನುಡಿಯಲ್ಲಿ ಬರೆಯುತ್ತಾರೆ.

ಸಹಕಾರಿ ಧುರೀಣ, ರಾಜಕಾರಣಿ ಮನೋಹರ ಮಸ್ಕಿ ಅವರ ಪತ್ನಿ ವೇದಾ ಮನೋಹರ ಅವರ ಬದುಕು, ಸಾಧನೆ, ಕೃಷಿ ಲೋಕದ ಕುರಿತು ಮಾಹಿತಿ ಒದಗಿಸುವ ಕೃತಿಯಿದು. ಒಂದು ರೀತಿಯಲ್ಲಿ ವೇದಾ ಅವರ ಆತ್ಮಕತೆ ಎನ್ನಬಹುದು. ವೇದಾ ಅವರ ಬದುಕಿನ ಅನುಭವದ ಮಾತುಗಳನ್ನು ಕೃತಿಯ ಲೇಖಕಿ ಭಾರತಿ ಹೆಗಡೆಯವರು ವೇದಾ ಅವರದ್ದೇ ಬರವಣಿಗೆಯಲ್ಲಿ ಮೂಡಿಬಂದ ಅಕ್ಷರಗಳು ಎನ್ನುವ ರೀತಿಯಲ್ಲೇ ನಿರೂಪಿಸಿದ್ದಾರೆ.

ಶಿವಮೊಗ್ಗದ ಎ.ಬಿ.ವಿ.ಪಿಯಲ್ಲಿ ವೇದಾ ಅವರಿಗೆ ಮಸ್ಕಿ ಪರಿಚಯವಾಯಿತು. ಅದು ಪ್ರೇಮವಾಗಿ, ಅಂತರ್ಜಾತೀಯ ವಿವಾಹದ ವಿವಾದಕ್ಕೂ ಸಿಲುಕಿ ಇಬ್ಬರ ಬದುಕು ಪ್ರಾರಂಭ. ಅಲ್ಲಿಂದ ನಂತರದ ಮಸ್ಕಿ ಹಾಗೂ ವೇದಾ ಅವರ ಬದುಕಿನ ಸಾಕಷ್ಟು ಘಟನೆಗಳು ಈ ಕೃತಿಯಲ್ಲಿವೆ. ಪ್ರಭಾವಿ ರಾಜಕಾರಣಿಯ ಪತ್ನಿಯಾದರೂ ತಮ್ಮದೇ ಭಿನ್ನವಾದ ಹಸಿರು ಲೋಕ, ಹೈನುಗಾರಿಕೆಯೊಂದಿಗೆ 'ಪಂಚಮವೇದ'ವೆಂಬ ಸುಂದರ ಜಗತ್ತು ಕಟ್ಟಿಕೊಂಡು, ನಿಭಾಯಿಸುತ್ತಿರುವ ವೇದಾ ಅವರ ಸಾಹಸಗಾಥೆ ಕೃತಿಯಲ್ಲಿದೆ.

'ಈ ಕೃತಿ ಒಂದು ರೀತಿಯಲ್ಲಿ ಜೀವನ ಚರಿತ್ರೆಯಾದರೆ ಇನ್ನೊಂದು ಮಗ್ಗುಲಲ್ಲಿ ಆತ್ಮಚರಿತ್ರೆಯಾಗಿದೆ. ವೇದಾ ಮನೋಹರ ಅವರ ನಿರೂಪಣೆಯಲ್ಲಿ ಭಾರತಿ ಹೆಗಡೆಯವರ ಸೃಜನ ಬರವಣಿಗೆ ಸೇರಿ ಅದೊಂದು ಜೀವನಗಾಥೆಯಾಗುತ್ತದೆ. ಮಥಿಸುವ ಜೀವನಾನುಭವದ ನವನೀತ ಒಂದು ವಿಶಿಷ್ಟವಾದ ಅನುಭವವನ್ನು ಕೊಡುತ್ತದೆ' ಎಂದು ಕಮಲಾ ಹಂಪನಾ ಅವರು ಬೆನ್ನುಡಿಯಲ್ಲಿ ಬರೆದಿದ್ದಾರೆ.



ಪು: 248
₹250

ಪಂಚಮವೇದ

ನಿರೂಪಣೆ:ಭಾರತಿ ಹೆಗಡೆ

ಪ್ರ:ಬೆನಕ ಬುಕ್ಸ್ ಬ್ಯಾಂಕ್


ಸಂ:7338437666

ರಾಜ್ಯದ ಗ್ರಾ.ಪಂಗಳಲ್ಲೊಂದು ಸುತ್ತು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ವಿವಿಧ ಸ್ತರಗಳಲ್ಲಿ ಮೂರು ದಶಕಗಳಿಗೂ ಅಧಿಕ ಕಾಲ ಕೆಲಸ ಮಾಡಿರುವ ಎಂ.ಕೆ. ಕೆಂಪೇಗೌಡ ಅವರ ಅನುಭವದ ಸಂಪನ್ಮೂಲ ಈ ಕೃತಿ. ಇಲಾಖೆಯ ಪಂಚಾಯತ್ ರಾಜ್ ನಿರ್ದೇಶಕರಾಗಿ ನಿವೃತ್ತಿ ಹೊಂದಿದ ಕೆಂಪೇಗೌಡ ಅವರು ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ವಿವರವಾಗಿ ಇಲ್ಲಿ ಸಂಪಾದಿಸಿದ್ದಾರೆ.

ಈ ಕೃತಿಯಲ್ಲಿ ಒಟ್ಟು ಹತ್ತು ಅಧ್ಯಾಯಗಳಿವೆ. ಪಂಚಾಯತ್ ರಾಜ್ ಪರಿಕಲ್ಪನೆ, ಅದು ನಡೆದು ಬಂದ ಹಾದಿ ಹಾಗೂ ಬೆಳವಣಿಗೆ, ಗ್ರಾಮಸಭೆ, ಗ್ರಾಮ ಪಂಚಾಯತಿಗಳ ರಚನೆ, ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆಗಳ ರಚನೆ ಹಾಗೂ ಅನುಷ್ಠಾನ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳ ರಚನೆ ಮತ್ತು ಕಾರ್ಯವೈಖರಿ, ಪಂಚಾಯತ್ ರಾಜ್ ಸಂಸ್ಥೆಗಳ ಮೇಲೆ ಸರ್ಕಾರದ ಅಧಿಕಾರ, ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾಗಳ ಯೋಜನೆಗಳ ಬಗ್ಗೆ ವಿಸ್ತೃತವಾದ ವಿವರಣೆಯಿದೆ. ಇದು ಈ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುವವರಿಗೆ ಮತ್ತು ಈ ವಿಷಯದ ಕುರಿತ ಅಧ್ಯಯನಾಸಕ್ತರಿಗೆ ಆಕರ ಗ್ರಂಥದ ರೀತಿ ಇದೆ. ಕೃತಿಯು ಕೇವಲ ಮಾಹಿತಿ ಭಂಡಾರವಾಗದೆ, ಕರ್ನಾಟಕದಲ್ಲಿ ಈ ವ್ಯವಸ್ಥೆಗೆ ಆಡಳಿತಗಾರರಾಗಿ ಕಾರ್ಯನಿರ್ವಹಿಸಿದ ಮಂತ್ರಿಗಳ ಸಂಕ್ಷಿಪ್ತ ವಿವರವನ್ನೂ ಒಳಗೊಂಡಿದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳ ಸಾಮಾನ್ಯ ಜ್ಞಾನಕ್ಕೊಂದು ಸಾಣೆ ಹಿಡಿಯುವ ಕೃತಿ ಇದಾಗಿದೆ. ಉದಾಹರಣೆಗೆ, ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿದ್ದ ಏಕಮಾತ್ರ ಮಹಿಳೆ ಯಾರು ಎನ್ನುವ ಮಾಹಿತಿ.

ಕೊನೆಯ ಅಧ್ಯಾಯದಲ್ಲಿ ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ವಿಸ್ತೃತವಾದ ವಿವರಣೆಯನ್ನು ಲೇಖಕರು ನೀಡಿದ್ದಾರೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮಾಹಿತಿ ಕೋರಿ ಅರ್ಜಿಗಳು ಸಲ್ಲಿಕೆಯಾಗುತ್ತಿರುವ ಕಾರಣ ವಿಷಯವನ್ನು ಪ್ರಸ್ತಾಪಿಸಿರುವುದಾಗಿ ಲೇಖಕರು ಉಲ್ಲೇಖಿಸಿದ್ದಾರೆ. ಕೃತಿಯ ಭಾಷೆ ಸರಳವಾಗಿದೆ.



ಪು: 448
₹500

ಗ್ರಾಮ ಸುರಾಜ್ಯ

ಲೇ: ಎಂ.ಕೆ.ಕೆಂಪೇಗೌಡ

ಪ್ರ: ವಿಸ್ಮಯ ಬುಕ್ ಹೌಸ್, ಮೈಸೂರು

ಸಂ: 0821-2952545

ಹಳಗನ್ನಡ ಪದಗಳಿಗೆ ಅರ್ಥಕೋಶ

ಹಳಗನ್ನಡ ಕಾವ್ಯವನ್ನು ಪರಿಶೀಲನೆ ಮಾಡಿ, ಅಲ್ಲಿ ಬಳಕೆಯಾಗಿರುವ ಪದಗಳಿಗೆ ಅರ್ಥಗಳನ್ನು ನೀಡುವುದು ತಪಸ್ಸಿನಂತಹ ಕೆಲಸ. ಅಧ್ಯಯನಕಾರರಿಗೆ ಇಂತಹ ಪದಕೋಶಗಳೇ ಆಕರ ಸಾಮಗ್ರಿಗಳು. ಕಲಿಕಾರ್ಥಿಗಳಿಗೆ ಅಷ್ಟೇ ಅಲ್ಲದೆ ಬೋಧನೆ ಮಾಡಲು ಶುರುಮಾಡುವವರಿಗೂ ಇಂತಹ ಕೃತಿಗಳು ಮುಖ್ಯ. ಪಂಪನಿಂದ ಹಿಡಿದು ಷಡಕ್ಷರ ಕವಿಯವರೆಗಿನ ಕಾವ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಐ.ಎಂ. ಕೊಟ್ರಯ್ಯ ಅವರು 'ಹಳಗನ್ನಡ ಅರ್ಥಕೋಶ'ವನ್ನು ಸಂಪಾದಿಸಿ ಕೊಟ್ಟಿದ್ದಾರೆ.

ಈ ಕೋಶದಲ್ಲಿ ಸುಮಾರು ಐವತ್ತು ಸಾವಿರ ಉಲ್ಲೇಖಗಳಿಗೆ ಅರ್ಥಗಳಿವೆ. ಆಧಾರ ಗ್ರಂಥಗಳ ಪಟ್ಟಿಯಲ್ಲಿನ ಎಲ್ಲ ಅರ್ಥಕೋಶಗಳ ಉಲ್ಲೇಖಗಳನ್ನು ಒಳಗೊಂಡಿರುವುದರಿಂದ ಸಾಹಿತ್ಯಾಸಕ್ತರಿಗೆ ಇದು ಪ್ರಯೋಜನಕಾರಿ. ಅಕಾರಾದಿಯಾಗಿ ಸಂಯೋಜಿಸಿ, ಅರ್ಥ ವಿವರಣೆ ನೀಡಲಾಗಿದೆ. ಪಂಪನ ಕಾಲ ಹತ್ತನೇ ಶತಮಾನ. ಷಡಕ್ಷರಿ ಕವಿಯದ್ದು ಹದಿನೇಳನೇ ಶತಮಾನ. ಆ ಅವಧಿಯಲ್ಲಿ ಹಳಗನ್ನಡದಲ್ಲಿ ರಚಿತವಾದ ಪ್ರಮುಖ ಗದ್ಯ, ಕಾವ್ಯಗಳ ಪದಗಳಿಗೆ ಈ ಕೋಶ ಅರ್ಥಗಳನ್ನು ಪೂರೈಸಿದೆ. 'ಅಂಡಜ' ಎಂದರೆ 'ಮೊಟ್ಟೆಯಿಂದ ಹುಟ್ಟಿದ' ಎಂಬ ಅರ್ಥವಿದೆ. ಚಂದ್ರನನ್ನು 'ದೋಷಾಬಂಧು' ಎಂದು ಹಳಗನ್ನಡದಲ್ಲಿ ಉಲ್ಲೇಖಿಸಲಾಗಿದೆ. 'ಕಾಲಂಗುಲಿ' ಎನ್ನುವುದಕ್ಕೆ 'ಕಾಲಿನ ಬೆರಳು' ಎನ್ನುವ ಅರ್ಥವಿದೆ. ಅಪಾತ್ರನಿಗೆ ನೀಡುವ ಭಕ್ಷ್ಯವನ್ನು 'ಕಾಗಭೋಜನ' ಎಂದು ಹಳಗನ್ನಡದಲ್ಲಿ ಬರೆಯಲಾಗಿದೆ. 'ಪರವೋಗು' ಎಂದರೆ ಬೇರೆ ಕಡೆ ಹೋಗು ಎಂದರ್ಥ. ಇಂತಹ ಅನೇಕ ಪದಗಳಿಗೆ ಅರ್ಥವನ್ನು 'ಹಳಗನ್ನಡ ಅರ್ಥಕೋಶ'ವು ಒದಗಿಸುತ್ತದೆ. ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಪದವಿವರೆಗಿನ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಹಳಗನ್ನಡ ಆಸಕ್ತ ಓದುಗರಿಗೆ, ಜೈನ ಸಾಹಿತ್ಯ ಅಭ್ಯಾಸಿಗಳಿಗೆ ಹಾಗೂ ಸಾಹಿತ್ಯಾಸಕ್ತರಿಗೆ ಅನುಕೂಲವಾಗುವಂತೆ ಈ ಅರ್ಥಕೋಶ ರಚಿಸಲಾಗಿದೆ ಎಂದು ಸಂಪಾದಕರು ತಮ್ಮ ನುಡಿಯಲ್ಲಿ ಹೇಳಿದ್ದಾರೆ.



ಪು: 852
₹800

ಹಳಗನ್ನಡ ಅರ್ಥಕೋಶ

ಸಂಪಾದಕ: ಐ.ಎಂ. ಕೊಟ್ರಯ್ಯ


ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

ಸಂ: 080-22372388

ಲಾಮಾಗಳ ಭೂತಾನ್‌ನ ರಾಜಧಾನಿ ಥಿಂಪುವನ್ನು ನೆನಪಿಸುವಂತಿರುವ ದಕ್ಷಿಣ ಕೊಡಗಿನ ಈ ತಾಣ ಎಷ್ಟೊಂದು ರಮಣೀಯ ಅಂತೀರಾ. ಹೂವ ಕಣಿವೆ ತುಂಬಾ ಪುಷ್ಪಪಕಳೆ ಹಾಸಿದಂತಹ ಇಲ್ಲಿನ ಹಾದಿಯ ಹೊಕ್ಕು ಹೆಜ್ಜೆ ಹಾಕಿದರೆ ಭೇಟಿಯಾಗುವಿರಿ ಇರ್ಪು ಎಂಬ ಚಕೋರಿಯ.



ಪಶ್ಚಿಮ ಘಟ್ಟಗಳಿಗೇ ಸೀಮಿತವಾದ ವಿಶಿಷ್ಟ ಚಿಟ್ಟೆ ಮಲಬಾರ್ ಬ್ಯಾಂಡೆಡ್ ಪಿಕಾಕ್



ಇರ್ಪು ಜಲಪಾತ ಮೈದುಂಬಿದಾಗ ಹೀಗೆ ಕಾಣುತ್ತದೆ... ಇದು ಕಳೆದ ವರ್ಷ ಸೆರೆಹಿಡಿದ ಚಿತ್ರ

ಪ್ರವಾಸ

‘ಪ್ಯಾಪಿಲೋ ಬುದ್ಧ’ನ ಹುಡುಕಾಟದಲ್ಲಿ ಸಿಕ್ಕ ಅಪ್ಸರೆ



ಪ್ಯಾಪಿಲೋ ಬುದ್ಧ ಈ ಹಾದಿಗುಂಟ ಇರಬಹುದೇ?



ಹಸಿರು ತಾಣದಲ್ಲಿ ಚಿಣ್ಣರ ಆಟದ ಚಿತ್ರಿಕೆ

ಶ್ರೀಧರ ಎಸ್.

ಕೆಲವೊಮ್ಮೆ ಒಂದರ ಹುಡುಕಾಟದಲ್ಲಿರುವಾಗ ಇನ್ನೇನೋ ಸಿಕ್ಕಿ ಎಲ್ಲಿಗೋ ಒಯ್ಯುತ್ತದೆ. ಆಗ ನನ್ನ ಬಳಿ ಪುಟಗೋಸಿ ಸುಣ್ಣದ ಡಬ್ಬಿಯಂತಹ ಚಿಕ್ಕ ಕ್ಯಾಮೆರಾವಿತ್ತು. ಆಗಿನ ಕಾಲಕ್ಕೆ ಅತಿ ಆಸೆ ಪಡುವಂತಹ ಕನಸು ಕಾಣುತ್ತಿದ್ದೆ. ಅದೆಂದರೆ ಚಿಟ್ಟೆಗಳ ಸುಂದರ ಚಿತ್ರ ತೆಗೆಯೋದು. ಆಗ ನನ್ನ ಕಣ್ಣಿಗೆ ಬಿದ್ದವ ‘ಪ್ಯಾಪಿಲೋ ಬುದ್ಧ’ (ಇದು ವೈಜ್ಞಾನಿಕ ಹೆಸರು. ಇದನ್ನು ಮಲಬಾರ್ ಬ್ಯಾಂಡೆಡ್ ಪಿಕಾಕ್ ಎಂದೂ ಕರೆಯುತ್ತಾರೆ) ಎಂಬ ಚಿಟ್ಟೆ. ಅದರ ಸೌಂದರ್ಯಕ್ಕೆ ಮಾರು ಹೋಗಿಬಿಟ್ಟೆ. ಪಶ್ಚಿಮ ಘಟ್ಟಗಳಿಗೇ ಸೀಮಿತವಾದ ವಿಶಿಷ್ಟ ಚಿಟ್ಟೆ. ಎಂಥವರನ್ನೂ ಮಂತ್ರ ಮುಗ್ಧಗೊಳಿಸುವ ಅದರ ಸುಮನೋಹರ ಸೌಂದರ್ಯ ನನ್ನ ಕಂಗೆಡಿಸಿತು. ಕಡು ಹಸಿರಾದ ಅದರ ಮೈಯನ್ನು ಒಮ್ಮೆ ನೋಡಿದರೆ ಮುಗೀತು, ನೀವು ಹುಚ್ಚರಾಗೋದು ಗ್ಯಾರಂಟಿ. ಈ ಚಿಟ್ಟೆಯ ಸೌಂದರ್ಯವೇ ನನ್ನನ್ನು ಇಲ್ಲಿಯವರೆಗೆ ಎಳೆದು ತಂದಿದ್ದು.

ನಾಗರಹೊಳೆಯ ಕಾಡುಗಳಲ್ಲಿ ಕಾಟಿ ಚಿರತೆಗಳ ಸಂಗಕ್ಕೆ ಬಿದ್ದು ಸುಮ್ಮನೆ ಅಲೆಯುತ್ತಿದ್ದವನಿಗೆ ಸಿಕ್ಕ ನ್ಯಾಚುರಲಿಸ್ಟ್ ಒಬ್ಬರು ಇರ್ಪು ಜಲಧಾರೆಯಲಿ ಇವು ಧಾರಾಳವಾಗಿವೆ ಎಂದಿದ್ದೆ ತಡ ಕೂಡಲೇ ಕಾರೊಂದನ್ನು ಬುಕ್ ಮಾಡಿ ಹೊರಟೆವು.

ಕುಟ್ಟಂನಲ್ಲಿ ಕಟ್ಟಂ ಚಾಯ್ ಕುಡಿದೆವು. ಸೆಪಿಯಾ ಬಣ್ಣದಲ್ಲಿ ಅದ್ದಿ ತೆಗೆದಂತಹ ಊರು ಕುಟ್ಟಂ. ವಿಚಿತ್ರವಾದ ಸೆಳೆತದಿಂದ ನನ್ನ ಕಂಗೆಡಿಸಿತ್ತು. ನಾಗರಹೊಳೆ ದಾಟಿದವರಿಗೆ ‘ಕುಟ್ಟಂ’ ಎಂಬ ಪುಟ್ಟಹಳ್ಳಿಯ ಬೆಚ್ಚಗಿನ ಸ್ವಾಗತ. ಹೆಚ್ಚಿನವರು ಕೇರಳಿಗರು. ಇಲ್ಲಿ ಕಟ್ಟಂ ಚಾಯ್ ಬಹಳ ಫೇಮಸ್.

ಹದವಾದ ಚಹ ಎಲೆಗಳು ಕೆಟಲಿನಲ್ಲಿ ಕುದಿಯುತ್ತಾ, ಹಬೆಯಾಡುತ್ತಾ ಇತ್ತು ಕಟ್ಟಂ ಚಾಯ್. ಬದುಕೊಂದು ಕೆಟಲಿನಲಿ ಬೇಯುತಿರುವ ಅನುಭವ. ‘ಕುಟ್ಟಂ’ನಲ್ಲಿ ಕಟ್ಟಗಿನ ಬಿಸಿ ಬಿಸಿ ಕರಿ ಚಹಾ ಹೀರುವ, ಚಹಾ, ಕಾಫಿತೋಟದ ಕೂಲಿಗಳು ಸಾಕಷ್ಟು.

ನಾವು ಹೋದಾಗಲೂ ಅನೇಕರು ಅಲ್ಲಲ್ಲಿ ಚಹಾ ಹೀರುತಲಿದ್ದರು. ನಾವೂ ಗೂಡಂಗಡಿಗಳಲ್ಲಿ ಸಿಗುವ ಹಬೆಯಾಡುವ ಚಹಾ ಹೀರಿದೆವು. ಕ್ಯಾನ್‌ಗ್ರೂ ಗಿಡಮೂಲಿಕೆ ಔಷಧ ನೀಡಿ ಗುಣ ಪಡಿಸುವವರು ಇಲ್ಲಿದ್ದಾರಂತೆ! ಹಾಗೇ ಅವರನ್ನೂ ಒಮ್ಮೆ ಭೇಟಿಯಾಗಬೇಕು. ಅವರ ಮಾತಿಗೆ ಕಿವಿಯಾಗಬೇಕು.

ಲಾಮಾ ನಾಡಿನ ಲಕ್ಷ್ಮಣ ತೀರ್ಥದೆಡೆಗೆ...

ಲಾಮಾಗಳ ಭೂತಾನ್‌ನ ರಾಜಧಾನಿ ಥಿಂಪುವನ್ನು ನೆನಪಿಸುವಂತಿರುವ ದಕ್ಷಿಣ ಕೊಡಗಿನ ಈ ತಾಣ ಎಷ್ಟೊಂದು ರಮಣೀಯ ಅಂತೀರಾ.

ಜಲಧಾರೆಯ ಬಲಕ್ಕೆ ಕೇರಳವಿದ್ದರೆ, ಎಡಕ್ಕೆ ನಾಗರಹೊಳೆ ಅಭಯಾರಣ್ಯ. ಅದೇ ಈ ಜಲಧಾರೆಯ ಮೂಲ. ಕೇರಳಿಗರೇ ಇಲ್ಲಿ ಹೆಚ್ಚು. ಜಲಧಾರೆಗೆ ಹಲವು ಕಿಲೋಮೀಟರ್ ಇರುವಾಗಲೇ ಇದು ನಿಮ್ಮನ್ನು ಕೈಬೀಸಿ ಕರೆಯುತ್ತದೆ.

ಇದನ್ನು ನೋಡಲು ಸರಿ ಸುಮಾರು ಕೇರಳದ ತುದಿಯನ್ನು ತಲುಪಬೇಕು. ಮೇಲೆ ಮಂಜು ಸುರಿಸುವ ಗಿರಿಗಳ ನಡುವಿಂದ ತನ್ನ ಜಡೆ ಬಿಟ್ಟಂತೆ ತಣ್ಣಗೆ ಧುಮುಕುವ ಲಲನೆ. ಅಲ್ಲಲ್ಲಿ ಬಳುಕುವ ಬಳ್ಳಿ. ನಿಸರ್ಗದ ಗರ್ಭಗುಡಿಯಲ್ಲಿ ಅಡಗಿದ ರತ್ನದ ಮಣಿ. ಸುತ್ತೆಲ್ಲಾ ಗಡಿಬಿಡಿ ಇಲ್ಲದೇ ಹಾರಾಡುವ ಹಕ್ಕಿಗಳು. ಅಲ್ಲಲ್ಲಿ ಕಾಣಸಿಗುವ ಸುಂದರ ಚಿಟ್ಟೆ ಪ್ಯಾಪಿಲೋ ಬುದ್ಧ. ಹೆಸರೇ ಎಷ್ಟೊಂದು ಆಕರ್ಷಕ. ಇನ್ನು ಇದರ ಸಾಕ್ಷಾತ್‌ದರ್ಶನ ಸಿಕ್ಕರಂತೂ ನೀವು ಹುಚ್ಚರಾಗುವಿರಿ! ಈ ಚಿಟ್ಟೆ ಮತ್ತು ಜಲಪಾತ ನೋಡಲೇ ನಾವಿಲ್ಲಿಗೆ ಬಂದಿದ್ದು.

ಮೆಟ್ಟಿಲೇರಿ ಮುಗಿಲಿಗೆ ಕೈ ಚಾಚಿ...

ಇಲ್ಲಿನ ಹರಿವ ತೊರೆಯ ಸೆರಗ ಸೆಳೆಸಿ ಮೇಲೇರಬೇಕು. ಮೇಲೇರಿದಂತೆ ಮಂಜೆಂಬ ಅಮಲು ನಿಮ್ಮನ್ನಾವರಿಸಿ ಬಿಡುತ್ತದೆ. ಕಣ್ಣು, ಕಿವಿಗಳ ಒಳಗೆಲ್ಲಾ ಹಾದು ಕಚಗುಳಿ ಇಡುತ್ತವೆ. ಅದುವೇ ಶ್ರೀಮಂಗಲ ಕಾಡಿನ ನಡುವಿರುವ ಲಕ್ಷ್ಮಣ ತೀರ್ಥ. ಕಾವೇರಿಯ ಉಪನದಿಯಾಗಿ ಮುಂದೆ ಹರಿಯುವವಳಿವಳು. ಮುಂದೆ ಹುಣಸೂರು, ಮೈಸೂರು ಮಂದಿ ಇದನ್ನು ಕುಲಗೆಡಿಸಿದ್ದಾರೆ.

ಹುಣಸೂರಿನಲ್ಲೊಮ್ಮೆ ನೋಡಿದ್ದೆ; ನದಿಯೋ ಗಟಾರವೋ ಎಂಬಷ್ಟು ಗಬ್ಬು. ಹಾಳುಗೆಡುಹದೆ ನೆಮ್ಮದಿ ಇಲ್ಲವೇನೋ ನಮ್ಮ ಜನರಿಗೆ. ಪುಟಾಣಿ ಮೆಟ್ಟಿಲ ಏರಿ ಪುಷ್ಪಗಿರಿಯ ಬುಡವನ್ನೊಮ್ಮೆ ಮುಟ್ಟಿ ಬರಬೇಕು. ಹೂವ ಕಣಿವೆ ತುಂಬಾ ಪುಷ್ಪಪಕಳೆ ಹಾಸಿದಂತಹ ಹಾದಿಯ ಹೊಕ್ಕು ಬರಬೇಕು. ಮರೆಯಲಾರಿರಿ ನೀವು ಎಂದೂ ಇರ್ಪು ಎಂಬ ಚಕೋರಿಯ.

ತರುಲತೆಯ ಹಾದುಬಂಡೆಯಿಂದ ಕುಪ್ಪಳಿಸುತ್ತಾ ಪುಳಕಗೊಳಿಸುವುದು. ಅರಸಿಕನ ಮನದ ಕದ ತೆರೆವ ತಾಣ!

ಇರ್ಪು, ನಾಗರಹೊಳೆ ಅಭಯಾರಣ್ಯಕ್ಕೆ ಬಲು ಸನಿಹದಲ್ಲಿದೆ. ಇಲ್ಲಿಂದ ಬ್ರಹ್ಮಗಿರಿ, ಪುಷ್ಪಗಿರಿಗೆ ಚಾರಣ ಕೂಡ ಮಾಡಬಹುದು. ಕೊಡಗಿನ ಕೆಳತುದಿಯಲ್ಲಿರುವುದರಿಂದ ತಲುಪುವುದೇ ಬಲು ಕಷ್ಟ. ಈ ಜಲಪಾತ ವೀಕ್ಷಣೆಗೆ ಕೊಡಗಿನಿಂದ ಬಂದು ಹೋಗಲು ಒಂದಿಡೀ ದಿನ ಬೇಕಾಗುವುದು. ಈ ಜಲಪಾತದ ಬಳಿ ಈಶ್ವರ ದೇವಾಲಯವಿದೆ. ಪ್ರಕೃತಿ ಅಧ್ಯಯನಕ್ಕೆ ಹಲವು ತಂಡಗಳು ಬಂದು ಹೋಗುತ್ತವೆ. ಹಲವರು ತುಂಬಾ ದಿನ ಇಲ್ಲಿದ್ದು, ಜೀವಜಾಲದ ಅಧ್ಯಯನ ಮಾಡುತ್ತಾರೆ. ಒಟ್ಟಾರೆ ಪ್ರಕೃತಿಪ್ರಿಯರ ಸುಂದರ ತಾಣ ಇರ್ಪು.

ಒಂದೆರಡು ಪ್ಯಾಪಿಲೋ ಬುದ್ಧರ ಜೊತೆ ಜೊತೆಗೆ ಅನೇಕ ಚುಂಬಕ ಚಿಟ್ಟೆಗಳು ಅಲ್ಲಲ್ಲಿ ಕಾಣಸಿಕ್ಕವು. ಜೊತೆಗೊಂದಿಷ್ಟು ನೆನಪುಗಳು. ಸಿಕ್ಕೀತೆ ಮುಂದಿನ ದಾರಿ ನಾಳೆಗಾಗಿ ನಮ್ಮನ್ನುಳಿಸಿ ಎಂಬ ಲಕ್ಷ್ಮಣ ತೀರ್ಥದ ಆರ್ತನಾದ ನಮ್ಮನ್ನು ಇನ್ನೂ ತಾಕದಿರುವುದು ವಿಪರ್ಯಾಸ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಶ್ಗ ಚಕ್ಕು ಕೇಳ್ರಿಷ್ಟು ಕಥೆಯ | ಬಲೂನ್ ಭೂತ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ಊರ ಜಾತ್ರೆಗೆ ಹೋಗಿದ್ದ ಗುಂಡ ದೊಡ್ಡದಾಗಿ ಊದಿಕೊಳ್ಳುವ ಸಾಮರ್ಥ್ಯವುಳ್ಳ ಬಲೂನ್ ಒಂದನ್ನು ಹತ್ತು ರೂಪಾಯಿ ನೀಡಿ ಖರೀದಿಸಿದ. ಆದರೆ ಅದನ್ನು ಊದಿ ದೊಡ್ಡದು ಮಾಡುವಷ್ಟು ಸಾಮರ್ಥ್ಯ ಗುಂಡನಲ್ಲೇ ಇರಲಿಲ್ಲ. ಹೀಗಾಗಿ ರಾಮು ಅಂಕಲ್‌ಗೆ ನೀಡಿ ಗಾಳಿ ತುಂಬಿಸಿಕೊಡಲು ಹೇಳಿದ. ಗುಂಡನ ಆಸೆಯಂತೆ ಅವರು ಅದಕ್ಕೆ ಊದಿ ಊದಿ ಗಾಳಿ ತುಂಬಿಸಲಾರಂಭಿಸಿದರು. ಬಲೂನ್ ಖರೀದಿ ಮಾಡುವಾಗ ಅದು ಯಾವ ಬಣ್ಣದ್ದು, ಯಾವ ಚಿತ್ರ ಅದರ ಮೇಲ್ಮೈಯಲ್ಲಿದೆ ಎಂದು ಗುಂಡ ನೋಡಿರಲಿಲ್ಲ. ಬಲೂನ್‌ಗೆ ಗಾಳಿ ತುಂಬಿಕೊಳ್ಳುತ್ತಲೇ ದೆವ್ವದ ಮುಖದ ಚಿತ್ರವಿದ್ದ ಆ ಬಲೂನ್ ದೊಡ್ಡದಾಗುತ್ತಾ ಹೋಯಿತು. ಗುಂಡ ಆ ಭಯಾನಕ ಮುಖವನ್ನು ನೋಡಿ ಬೆಚ್ಚಿಬಿದ್ದು ಕಾಲ್ಕಿತ್ತ.





ಪುಟಾಣಿ ಪದಬಂಧ

ಸುಳಿವು					
1			ಗ್ರ	ಹ	ಗ್ರಹ ಶೋಧನೆಗೆ ಹೊರಟವರು ಕೇಳಿಕೊಂಡ ಆಶೀರ್ವಾದ
2			ವ	ರ	ವರ ಜಳಕ ಮಾಡಿದ್ದು ಇದೇ ನದಿಯಲ್ಲಿ
3			ಬ	ರ	ಬರ ಬಿದ್ದಿದ್ದರೂ ತೋರಿಸುವ ದೊಡ್ಡಸ್ತಿಕೆ
4			ರಂ	ಗ	ರಂಗ ಆಡುವ ಜಾಣ್ಮೆಯ ಆಟ
5			ದಾ	ರ	ದಾರ ಹಿಡಿದಿರುವ ಈತ ಶೂರ

ಪಕ್ಷಿ ನೋಟ



ಕಾಣದಂತೆ ಮಾಯವಾಯಿತೋ!

ವಿಶ್ವದಲ್ಲಿ ಈಗ ಎಲ್ಲೂ ಕಾಣಸಿಗದ ಈ ಪಕ್ಷಿಯ ಹೆಸರೇನು ಗೊತ್ತೇ?

ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1.ಅರ ಹೂಳಿದ :____________

2.ನರರ ಕಾಸು :____________

3.ಆನೆ ಪಾದ :____________

4.ಕಾಳಗ ಬಗೆ :____________

ಗಣಿತದಲ್ಲಿ ಗರಿ ಗಮ್ಮತ್ತು!

ವರ್ಗಸಂಖ್ಯೆಗಳಲ್ಲಿ ‘ಜೋಡಿಜೀವ’

1. $(406,406)^2 = 165,165,836,836$
2. $(593,593)^2 = 352,352,649,649$
3. $(998,998)^2 = 997,997,004,004$
4. $(89,89)^2 = 80,80,21,21$
5. $(98,98)^2 = 97,97,04,04$



ತಿಳಿ-ಸಾರು: A to Z ಉಪಯೋಗ

ಇಂಗ್ಲಿಷ್ ಭಾಷೆಯಲ್ಲಿ ಅತಿ ಹೆಚ್ಚು ಉಪಯೋಗವಾಗುವ ಅಕ್ಷರ-E. ಹಾಗೆ ಅತಿ ಕಡಿಮೆ ಉಪಯೋಗವಾಗುವ ಅಕ್ಷರ Z ಅಂತೆ. ಹಾಗಾದರೆ ಉಳಿದ ಅಕ್ಷರಗಳು ಯಾವ ಕ್ರಮದಲ್ಲಿ ಉಪಯೋಗವಾಗುತ್ತವೆ. ತಿಳಿಯಬೇಕೆ? ಇದನ್ನು ಓದಿರಿ

1-E	8-S	15-U	22-K
2-T	9-H	16-G	23-X
3-A	10-D	17-Y	24-J
4-O	11-L	18-P	25-Q
5-N	12-F	19-W	26-Z
6-R	13-C	20-B	
7-I	14-M	21-V	

ಜಾಣಪದ ಆಟ

ಇಲ್ಲಿ ಕೊಟ್ಟ ಇಪ್ಪತ್ತು ಪದಗಳಲ್ಲಿ ಸೂಕ್ತವಾದ ಎರಡು ಪದ ಸೇರಿಸಿ ಅರ್ಥಬದ್ಧ ನಾಲ್ಕಕ್ಷರದ ಒಂದೇ ಪದದಂತೆ ಒಟ್ಟು ಹತ್ತು ಪದ ಮಾಡಬಲ್ಲಿರಾ? (ಅಕ್ಷರಗಳು ಸ್ಥಾನಪಲ್ಲಟವಾಗಬಾರದು)

ಆಗ	ಪಡಿ	ವಾರ	ತಾಳ	ಹರ
ದಾರ	ದಾಟು	ರಾಜ	ಹರಿ	ತರ
ಸ್ಥಾನ	ನಾಯಿ	ಹರ	ಕಾರ	ಮನ
ಮೇಕೆ	ಗಿರಿ	ಸರ	ರಾಜ	ಕೊಡೆ

1:____________ 6:____________

2:____________ 7:____________

3:____________ 8:____________

4:____________ 9:____________

5:____________ 10:____________

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ:
1.ಅಭಿನಯ 2.ಹರದಾರಿ 3.ಸುಧಾಕರ 4.ಪ್ರಜಾವಾಣಿ 5.ವಿಶ್ವವಾಣಿ

ಅದಲು ಬದಲು...:
1.ವಿಜಯದಾಸ 2.ಆಹಾರ ವಿಜ್ಞಾನಿ 3.ಹಿರಿಯತನ 4.ಯಮರಾಜ

ಅಕ್ಷರ ಆಟ:

ದಂಡ	ತಿಂಡಿ	ದಂಡು	ಬೆಂಡೆ
ಗಂಡ	ಉಂಡಿ	ಗಂಡು	ಹಂಡೆ
ಭಂಡ	ಬಂಡಿ	ಗುಂಡು	ಬಂಡೆ
ರುಂಡ	ಮಂಡಿ	ಚೆಂಡು	ಮಂಡೆ
ಖಂಡ	ಕಿಂಡಿ	ತುಂಡು	ದಂಡೆ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಅಮೋಘ ನಾಯಕರ
ಗದಗ



ಶ್ರೀವಿಭಾವನ, ಮೈಸೂರು



ಚೇತನ್.ಆರ್. ನಾಗರಾಜ್
ದಾವಣಗೆರೆ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



PROPERTY CORNER ಕ್ಲಾಸಿಫೈಡ್ಸ್

Agricultural FARMLAND
Divine Euphoria
@ KANAKPURA
•Fully Developed •Swimming Pool •Clubhouse
•Children Play area •Temple •Meditation Center
•Birds & Animals •Adventure Sports
₹ 13 Lakhs
550+ CUSTOMERS | 55+ COTTAGES BUILT
78921 54461 - 77605 74999
www.divineeuphoria.co.in

ಕನಕಪುರ ರಸ್ತೆಯಲ್ಲಿ ಮನೆ ನಿರ್ಮಾಣಕ್ಕೆ ಅತ್ಯುತ್ತಮ ನಿವೇಶನಗಳು
